ಸಂಪುಟ: 14 Volume | ಸಂಚಿಕೆ: 67 Issue | ಪುಟಗಳು 08 Pages | ಮಂಗಳವಾರ 16 ಜೂನ್ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ರೂಪ ಕಣ್ಣುಗಳಿಗೆ ಸೀಮಿತ. ಗುಣ, ಆತ್ಮದವರೆಗೆ ತಲುಪುವ ಸಾಧನ.

–ತ್ರಿವೇಣಿ



ಬೆಂಗಳೂರಿನ ವೈದೇಹಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಅವರನ್ನು ಸಿಎಂ ಡಿ ಕೆ ಶಿವಕುಮಾರ್ ಅವರು ಸೋಮವಾರ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ವಿಧಾನಸಭೆ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಜತೆಗಿದ್ದರು.

## ಪ್ರೊ.ಎಸ್.ಕರಿಗೂಳಿಗೆ ಪಿಹೆಚ್.ಡಿ



**ಗಂಗಾವತಿ:** ತಾಲೂಕಿನ ಶ್ರೀರಾಮನಗರದ ಸಿ.ಎನ್. ಆರ್ ಸರ್ಕಾರಿ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಎಸ್. ಕರಿಗೂಳಿ ಅವರಿಗೆ ಬಳ್ಳಾರಿ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಪಿಎಚ್.ಡಿ ಪದವಿಯನ್ನು ಪ್ರಕಟಿಸಿದೆ. ಪ್ರೊ. ಎಸ್. ಕರಿಗೂಳಿ ರವರು "ಆನ್ ಎಂಪಿರಿಕಲ್ ಸ್ಟಡಿ ಆನ್ ಕ್ರಿಪ್ಟೋಕರೆನ್ಸಿ ವಿಥ್ ಸ್ಪೆಷಲ್ ರೆಫರೆನ್ಸ್ ಟು ಬಿಟ್ ಕಾಯಿನ್ ಆಂಡ್ ಈಥೇ–ರಿಯಂ" ಎಂಬ ವಿಷಯದ ಕುರಿತು, ಬಳ್ಳಾರಿ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದ ಪ್ರಾಧ್ಯಾಪಕ ಪ್ರೊ. ಡಾ. ಸಿ.ಎಂ. ಜಿಲಾನ್ ಬಾಷಾ ವಿ, ರವರ ಮಾರ್ಗದರ್ಶಕರಾಗಿ ಇದೇ ಮೊದಲ ಬಾರಿಗೆ ಸಂಶೋಧನೆ ಮಾಡಿ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ವರದಿಗಳನ್ನು ಅನುಲಕ್ಷಿಸಿ ಪ್ರೊ. ಎಸ್. ಕರಿಗೂಳಿ ಅವರಿಗೆ ಡಾ–ಕ್ಟರ್ ಆಫ್ ಫಿಲಾಸಫಿ ಪದವಿಯನ್ನು ಪ್ರದಾನ ಮಾಡಲು ವಿವಿ ಕುಲಪತಿಗಳು, ಸಿಂಡಿಕೇಟ್ ಸಭೆಯ ಪರವಾಗಿ ಒಪ್ಪಿಗೆ ನೀಡಿದ್ದಾರೆ. ಪ್ರೊ. ಎಸ್. ಕರಿಗೂಳಿ ಡಾಕ್ಟರ್ ಆಫ್ ಫಿಲಾಸಫಿ ಪದವಿ ಪಡೆಯಲು ಅರ್ಹರಿರುವವರೆಂದು ಘೋಷಿಸಲಾಗಿದೆ. ಇವರಿಗೆ ಪಿಹೆಚ್.ಡಿ ಪದವಿಯನ್ನು ವಿಶ್ವವಿದ್ಯಾಲಯದ 2026ರ ಘಟಿಕೋತ್ಸವದಲ್ಲಿ ಪ್ರದಾನ ಮಾಡಲಾಗುತ್ತದೆ. ಇವರಿಗೆ ತಾಲೂಕಿನ ಕುಟುಂಬ ವರ್ಗ, ಬಂಧು–ಬಳಗದವರು, ಉಪನ್ಯಾಸಕರ ಬಳಗ, ವಿದ್ಯಾರ್ಥಿಗಳ ಸಮೂಹ, ಸ್ನೇಹಿತರ ಬಳಗ ಹಾಗೂ ಎಲ್ಲಾ ಆತ್ಮೀಯರು ಅಭಿನಂದನೆಗಳನ್ನು ತಿಳಿಸಿರುತ್ತಾರೆ.



ಸಹಕಾರ ಮತ್ತು ಕೃಷಿ ಮಾರುಕಟ್ಟೆ ಇಲಾಖೆ ಪ್ರಗತಿ ಪರಿಶೀಲನೆ ಕುರಿತು ಹಿರಿಯ ಅಧಿಕಾರಿಗಳ ಜತೆ ವಿಧಾನಸೌಧದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಸಿಎಂ ಡಿ ಕೆ ಶಿವಕುಮಾರ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಸಿಎಂ ಆರ್ಥಿಕ ಸಲಹೆಗಾರ ಎಲ್ ಕೆ ಅತೀಕ್, ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಸಹಕಾರ ಇಲಾಖೆ ಶೆಟ್ಟಣ್ಣನವರ್, ರಿಜಿಸ್ಟ್ರಾರ್ ಡಾ ವೆಂಕಟೇಶ್, ಎಪಿಎಂಸಿ ನಿರ್ದೇಶಕರಾದ ಡಾ ನಲ್ಲಕುಂಟೆ ವೆಂಕಟೇಶಯ್ಯ ಮತ್ತಿತರರು ಭಾಗವಹಿಸಿದ್ದರು.

## ಮೇಲ್ಚಾವಣಿ ಪದರು ಕುಸಿತ: ಅವಘಡದಿಂದ ಪಾರು

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಜಿಲ್ಲೆಯ ಆಳಂದ ತಾಲೂಕಿನ ಸಂಗೋಳಗಿ(ಸಿ) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ (ಬಳಕೆಯಲ್ಲಿಲ್ಲದ ಕೊಠಡಿ) ಮೇಲ್ಚಾವಣಿಯ ಪದರು ಭಾನುವಾರ ಬೆಳಿಗ್ಗೆ ಏಕಾಏಕಿ ಕುಸಿದು ಬಿದ್ದಿದ್ದು, ಯಾವುದೇ ಅವಘಡ ಸಂಭವಿಸಿಲ್ಲ ಎಂದು ಶಾಲೆಯ ಮುಖ್ಯಗುರುಗಳು ಮತ್ತು ಚಿಂಚನಸೂರು ಸಿ.ಆರ್.ಪಿ ಅವರು ತಿಳಿಸಿದ್ದಾರೆ.

ಭಾನುವಾರ ರಜೆ ದಿನವಾಗಿದ್ದರಿಂದ ಶಾಲೆಯಲ್ಲಿ ಮಕ್ಕಳು, ಶಿಕ್ಷಕರು ಯಾರು ಇರಲಿಲ್ಲ. ಬೆಳಿಗ್ಗೆ ಸುಮಾರು 6 ಗಂಟೆಗೆ ಬಳಕೆಯಲ್ಲಿಲ್ಲದ ಈ ಕೊಠಡಿ ಅವಘಡಕ್ಕೆ ತುತ್ತಾಗಿದೆ. ಸುಮಾರು 60–70 ವರ್ಷದ ಹಳೇ ಕಟ್ಟಡವಾಗಿದ್ದರಿಂದ ಪ್ಲಾಸ್ಟರ್ ಪದರು ಕುಸಿದಿರಬಹುದು ಎಂದು ಮುಖ್ಯಗುರು ಪುಷ್ಪಾ ಮತ್ತು ಸಿ.ಆರ್.ಪಿ ಧರ್ಮರಾಯ ಅವರು ಆಳಂದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವರದಿ ನೀಡಿದ್ದಾರೆ.



ಮೇಲ್ಚಾವಣಿಯ ಪದರು ಕುಸಿದ್ದ ಬಿದ್ದ ವಿಷಯ ತಿಳಿಯುತ್ತಿದ್ದಂತೆ ಸಿ.ಆರ್.ಪಿ ಮತ್ತು ಸಹ ಶಿಕ್ಷಕರೊಂದಿಗೆ ಶಾಲೆಗೆ ಜಂಟಿಯಾಗಿ ಭೇಟಿ ನೀಡಿ ಪರಿಶೀಲಿಸಿದ ಮುಖ್ಯಗುರುಗಳು, ಸದರಿ ಸ್ಥಳದ ಹತ್ತಿರ ಸಾರ್ವಜನಿಕರು, ಮಕ್ಕಳು ಸೇರಿದಂತೆ ಯಾರು ಹೋಗದಂತೆ ತಿಳಿ ಹೇಳಲಾಗಿದೆ ಎಂದಿದ್ದಾರೆ.

## ಪತ್ರಕರ್ತರನ್ನು ಸೇರಿಸಿ ಸಮಿತಿ ರಚನೆಗೆ ಮನವಿ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಪತ್ರಿಕಾ ಭವನದ ನಿರ್ವಹಣ ಸಮಿತಿ ಬಗ್ಗೆ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘ ಬೀದರ್ ಜಿಲ್ಲೆ ಘಟಕದ ವತಿಯಿಂದ ಬೀದರ್ ಜಿಲ್ಲಾಧಿಕಾರಿ ಅವರಿಗೆ ಇಂದು ಅವರ ಕಚೇರಿಯಲ್ಲಿ ಭೇಟಿ ಮಾಡಿ ಚರ್ಚೆ ಮಾಡಲಾಯಿತು ಅದರಲ್ಲಿ ನಮ್ಮ ಸಂಘದ ಪ್ರತಿನಿಧಿಗಳು ಮತ್ತು ಹಿರಿಯ ಸಂಪಾದಕರು ಒಳಗೊಂಡ ಸಮಿತಿ ರಚಿಸಬೇಕೆಂದು ನಮ್ಮ ಸಂಘದ ವತಿಯಿಂದ ಮನವಿ ಪತ್ರ ನೀಡಲಾಯಿತು.

ಜಿಲ್ಲೆಯ ಮಾಧ್ಯಮ ಪಟ್ಟಿಯಲ್ಲಿಯೆಲ್ಲಿರುವ ಸಂಪಾದಕರು ಮತ್ತು ಮಾನ್ಯತೆ ಹೊಂದಿದ ಪತ್ರಕರ್ತರನ್ನು ಸೇರಿಸಿ ಸಮಿತಿ ರಚಿಸಬೇಕೆಂದು. ಈ ಸಮಿತಿಯಲ್ಲಿ ನಮ್ಮ ಸಂಘದ ಪ್ರತಿನಿಧಿಗಳು ಹಿರಿಯರು ಮತ್ತು ನಮ್ಮ ಸಂಘದ ಪದಾಧಿಕಾರಿಗಳನ್ನು ಸೇರಿಸಿಕೊಂಡು ಪಟ್ಟಿ ಮಾಡಬೇಕೆಂದು ಸಂಘ




ಮನವಿ ಮಾಡಿರುವ ಪತ್ರವನ್ನು ಜಿಲ್ಲಾಧಿಕಾರಿ ಅವರಿಗೆ ಸಲ್ಲಿಸಲಾಯಿತು.

# ಬಿಡದಿ, ಗ್ಯಾರಂಟಿ ಗಲಾಟೆ

### ಬಿಡದಿ ಯೋಜನೆ ನಮ್ದಲ್ಲ, ಎಚ್ಡಿಕೆ ರೂಪಿಸಿದ್ದು | ಗ್ಯಾರಂಟಿ ಯೋಜನೆ ನಿಲ್ಲಲ್ಲ: ಸಿಎಂ ಡಿಕೆಶಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಬಿಡದಿ ಟೌನ್ ಶಿಪ್ ಹಾಗೂ ಗ್ಯಾರಂಟಿ ಯೋಜನೆಗಳ ಜಟಾಪಟಿ ಜೋರಾಗಿದೆ. ಬಿಡದಿ ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುತ್ತಿರುವ ವಿಚಾರ ಇದೀಗ ರಾಜಕೀಯ ಕಲಹಕ್ಕೆ ವೇದಿಕೆ ಆಗುತ್ತಿದೆ. ರಾಜಕೀಯ ಆರೋಪ ಪ್ರತ್ಯಾರೋಪದ ಜೊತೆಗೆ ಇದು ವೈಯಕ್ತಿಕ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ. ಗ್ಯಾರಂಟಿ ಯೋಜನೆ ಹೆಸರಲ್ಲಿ ಅಧಿಕಾರಕ್ಕೆ ಬಂದ ಸರ್ಕಾರ ಇದೀಗ ಅದನ್ನು ಮೊಟಕು ಗೊಳಿಸುವ ಹುನ್ನಾರ ನಡೆಸುತ್ತಿದೆ ಎಂದು ಬಿಜೆಪಿ ಆರೋಪಿಸುತ್ತಿದೆ.

**ಇದೀಗ ಹೊಸ ಚರ್ಚೆ:** ಬಿಡದಿ ಯೋಜನೆಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಈ ನಡುವೆ ಅವರು ಈ ಹಿಂದೆ ಮಾತನಾಡಿದ್ದ ವಿಡಿಯೋವನ್ನು ಕಾಂಗ್ರೆಸ್ ನಾಯಕರು ಬಿಡುಗಡೆ ಮಾಡಿದ್ದು, ಇದು ಇದೀಗ ಹೊಸ ಚರ್ಚೆ ಹುಟ್ಟು ಹಾಕಿದೆ.

**ಬಿಜೆಪಿಗೆ ಗ್ಯಾರಂಟಿ ಅಸ್ತ್ರ:** ಮಾಜಿ ಸಚಿವ ಸಿ.ಟಿ. ರವಿ, ಪ್ರತಿಪಕ್ಷ ನಾಯಕ ಆರ್.ಅಶೋಕ್ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರಿಗೆ ಬಿಡದಿ ಟೌನ್‌ಶಿಪ್ ಹಾಗೂ ಕಾಂಗ್ರೆಸ್‌ನ ಪರಿಷ್ಕೃತ ಗ್ಯಾರಂಟಿ ವಿಷಯವೂ ಅಸ್ತ್ರವಾಗಿರುವುದು ಗಮನ ಸೆಳೆದಿದೆ.







**ಎಚ್ಡಿಕೆ ಹೇಳಿದ್ದ ಮಾತೇನು?**

ಬೆಂಗಳೂರಿನ ಸಮೀಪದಲ್ಲಿರುವ ಬಿಡದಿ ರೈತನಿಗೆ ಟೌನ್ ಶಿಪ್ ಅಭಿವೃದ್ಧಿ ಆದ ಬಳಿಕ ಶೇ 40ಜಮೀನನ್ನು ಬಿಟ್ಟುಕೊಡಬೇಕು ಎಂದು ತೀರ್ಮಾನಿಸಿದ್ದೆ. 2006 ರಲ್ಲಿ ಆ ಯೋಜನೆಗೆ 60,000 ಕೋಟಿ ಬಂಡವಾಳ ಹಾಕಬೇಕೆಂದಿದ್ದೆ. ಆರ್ಥಿಕವಾಗಿ ರೈತರು ಪ್ರಗತಿ ಹೊಂದಬೇಕೆಂಬ ಉದ್ದೇಶ ಇತ್ತು. ಕೊನೆಯ ಉಸಿರಿರೋವರೆಗೆ ಅನ್ಯಾಯ ಮಾಡಲ್ಲ ಎಂದಿದ್ದಾರೆ ಎಚ್ಡಿ ಕುಮಾರಸ್ವಾಮಿ.

**ಮೋದಿ ಹೇಳಿಕೆ ಇಟ್ಕೊಂಡು..!**

ಅವರಿಗೆ ಶುಭ ಕೋರುತ್ತೇನೆ. ಕುಮಾರಸ್ವಾಮಿ ಅವರ ಮಾರ್ಗದರ್ಶನದಲ್ಲೇ ಈ ಟೌನ್ ಶಿಪ್ ಆಗುತ್ತಿದೆ. ನಿನ್ನೆ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದಾಗ ಅವರು, ನಾನು ಕೂಡ ಏಳೆಂಟು ಟೌನ್‌ಶಿಪ್ ಮಾಡಿದ್ದೆ. ನೀವು ಒಳ್ಳೆಯ ಕೆಲಸ ಮಾಡುತ್ತಿದ್ದೀರಿ ಎಂದು ನನಗೆ ಕಿವಿಮಾತು ಹೇಳಿದ್ದಾರೆ. ಅದನ್ನು ಗಮನ ದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ ಎಂದಿದ್ದಾರೆ ಸಿಎಂ ಡಿಕೆಶಿ.

**ಸರ್ಕಾರಕ್ಕೆ ಬಿವೈವಿ ಪ್ರಶ್ನೆ..!**

ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಂಖ್ಯೆಯನ್ನು ಕಡಿಮೆ ಮಾಡುವ ಮೂಲಕ ಆರ್ಥಿಕ ಹೊರೆ ತಗ್ಗಿಸಿಕೊಳ್ಳಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದ್ದಾರೆ. ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವಾಗ ಅರ್ಹರು, ಅನರ್ಹರು ಎಂಬುದನ್ನು ಪರಿಶೀಲಿಸಿರಲಿಲ್ಲವೇ? ಎಂದು ಪ್ರಶ್ನಿಸಿದ್ದಾರೆ.

**ಯೋಜನೆ ನಮ್ಮ ಹೆಮ್ಮೆ: ಸಿಎಂ**


ಗೃಹ ಲಕ್ಷ್ಮಿ ಮತ್ತು ಗೃಹ ಜ್ಯೋತಿ ನಮ್ಮ ಹೆಮ್ಮೆ. ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ. ಈ ನಿಟ್ಟಿನಲ್ಲಿ ಪ್ರತಿಪಕ್ಷಗಳು ಹರಡುತ್ತಿರುವ ಸುಳ್ಳು ಸುದ್ದಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು. ಕೆಲವರು ಮೃತ ವ್ಯಕ್ತಿಗಳ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಯೋಜನೆಗಳ ಪ್ರಯೋಜನ ಪಡೆಯುತ್ತಿದ್ದು ಇದನ್ನು ತಪ್ಪಿಸಲು ಪರಿಷ್ಕರಿಸಲಾಗಿದೆ ಎಂದಿದ್ದಾರೆ ಸಿಎಂ ಡಿಕೆಶಿವಕುಮಾರ್.

## ಹಿಂದೂ ಧರ್ಮ ಎಲ್ಲಾದರೂ ರಿಜಿಸ್ಟರ್ ಆಗಿದೆಯೇ?

• ಮಲ್ಲಮ್ಮ ನುಡಿ ವಾರ್ತೆ ತ್ರಿಶೂರ್

ಆರ್‌ಎಸ್‌ಎಸ್ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು ಎಂಬ ಕರ್ನಾಟಕ ಸರ್ಕಾರದ ವಾದಕ್ಕೆ ಸ್ವತಃ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಪ್ರತಿಕ್ರಿಯೆ ನೀಡಿದ್ದಾರೆ. "ಇದೊಂದು ಗಿಮಿಕ್. ಯಾವುದೂ ರಹಸ್ಯವಾಗಿಲ್ಲ, ಬಯಲಿನಲ್ಲಿ ಕೆಲಸ ಮಾಡುತ್ತೇವೆ ಎಂದ ಭಾಗವತ್ ಹಿಂದೂ ಧರ್ಮ ಎಲ್ಲಾದರೂ ರಿಜಿಸ್ಟರ್ ಆಗಿದೆಯೇ?" ಎಂದು ಪ್ರಶ್ನೆ ಮಾಡಿದ್ದಾರೆ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಚಟುವಟಿಕೆಗಳು

ರಹಸ್ಯವಾಗಿವೆ, ಹೀಗಾಗಿ ಆ ಸಂಸ್ಥೆಯನ್ನು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಇತ್ತೀಚೆಗೆ ಹೇಳಿದ್ದರು. ಈ ಬಗ್ಗೆ ಕೇರಳದ ತ್ರಿಶೂರ್‌ನಲ್ಲಿ ಭಾನುವಾರ ನಡೆದ ಕಾರ್ಯಕ್ರಮವೊಂದರಲ್ಲಿ ಸರಸಂಘಚಾಲಕ ಮೋಹನ್ ಭಾಗವತ್ ಮಾತನಾಡಿದರು.

**ರಹಸ್ಯವಾಗಿಲ್ಲ, ಬಯಲಿನಲ್ಲಿ ಕೆಲಸ ಮಾಡುತ್ತೇವೆ:** "ನಾವು ಯಾವುದೇ ರಹಸ್ಯ ಚಟುವಟಿಕೆಗಳನ್ನು ನಡೆಸುತ್ತಿಲ್ಲ. ನಮ್ಮ ಶಾಖೆಗಳು ಮತ್ತು ಕಾರ್ಯಕ್ರಮಗಳು ತೆರೆದ ಮೈದಾನಗಳಲ್ಲಿ ನಡೆಯುತ್ತವೆ. ಜನರನ್ನು ಕರೆದು ಸಂಘದ ಬಗ್ಗೆ ಅವರಿಗೆ ಮುಕ್ತವಾಗಿ ತಿಳಿಸುತ್ತೇವೆ. ನಮ್ಮ ಕಾರ್ಯಕರ್ತರು ಪ್ರತಿದಿನ ಜನರ ನಡುವೆ ಇರುತ್ತಾರೆ, ಜನರು ನಮ್ಮನ್ನು ದಿನನಿತ್ಯ ನೋಡುತ್ತಾರೆ. ಹೀಗಿರುವಾಗ ನಾವು ರಹಸ್ಯವಾಗಿ ಕೆಲಸ ಮಾಡುತ್ತಿದ್ದೇವೆ ಎಂಬುದು ಸುಳ್ಳು " ಎಂದಿದ್ದಾರೆ.

**ಇದು ಕೇವಲ ರಾಜಕೀಯ ಗಿಮಿಕ್:** "ನಾನು ಇದ–ಕ್ಕೆ ಪ್ರತಿಕ್ರಿಯಿಸುವ ಅಗತ್ಯವೇ ಇಲ್ಲ. ಇದು ಕೇವಲ ರಾಜಕೀಯವಷ್ಟೇ. ಸಂಘದ ವಿರುದ್ಧ ಇಂತಹ ಗಿಮಿಕ್ಗಳನ್ನು ಮಾಡಲಾಗುತ್ತಿದೆ. ನಾವು ಇದಕ್ಕೆಲ್ಲಾ ಒಗ್ಗಿಕೊಂಡಿದ್ದೇವೆ. ಕಳೆದ ಹಲವು ವರ್ಷಗಳಿಂದ ಇಂತಹ ಆರೋಪಗಳನ್ನು ನಾವು ಎದುರಿಸಿಕೊಂಡು ಬಂದಿದ್ದೇವೆ. ನಮ್ಮ ಕೆಲಸಗಳಿಗೆ ಅಡ್ಡಿಪಡಿಸಲು ಮತ್ತು ಜನರ ಮನಸ್ಸಿನಲ್ಲಿ ನಮ್ಮ ಬಗ್ಗೆ ಅನುಮಾನ ಮೂಡಿಸಲು ಈ ರೀತಿ ಮಾಡಲಾಗುತ್ತಿದೆ, ಆದರೆ ಅದು ಸಾಧ್ಯವಿಲ್ಲ" ಎಂದು ಹೇಳಿದ್ದಾರೆ.

# ಮಾಣಿಕ ನಗರ ವಿರಜಾ ಹಳ್ಳಕ್ಕೆ ಕೆಮಿಕಲ್ ವಿಷ..!

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಹುಮನಾಬಾದ್ ತಾಲೂಕಿನ ಕೈಗಾರಿಕಾ ಪ್ರದೇಶದಲ್ಲಿರುವ ಕೆಲವು ಕೆಮಿಕಲ್ ಕಾರ್ಖಾನೆಗಳಿಂದ ಹೊರಬರುವ ತ್ಯಾಜ್ಯ ಮಿಶ್ರಿತ ನೀರು ಮಾಣಿಕನಗರ ಹಳ್ಳಕ್ಕೆ ಸೇರುತ್ತಿದೆ ಎಂಬ ಆರೋಪ ಕೇಳಿಬಂದಿದೆ. ಇದರಿಂದ ಗ್ರಾಮಸ್ಥರಲ್ಲಿ ಆತಂಕ ಮನೆ ಮಾಡಿದೆ.

**ಹಳ್ಳದ ಬಣ್ಣ ಬದಲು, ವಾಸನೆ:** ಮಾಣಿಕನಗರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ನಿವಾಸಿಗಳು ಹಳ್ಳದ ನೀರಿನ ಬಣ್ಣ ಮತ್ತು ವಾಸನೆಯಲ್ಲಿ ಬದಲಾವಣೆ ಕಂಡುಬಂದಿರುವುದಾಗಿ ತಿಳಿಸಿದ್ದು, ಈ ನೀರಿನಿಂದ ಕೃಷಿ ಭೂಮಿ, ಜಾನುವಾರುಗಳು ಹಾಗೂ ಸಾರ್ವಜನಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆಯಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

**ಸ್ಥಳೀಯ ಕಾರ್ಖಾನೆಗಳಿಂದ ಕಾನೂನು ಉಲ್ಲಂಘನೆ**






**ಇಲಾಖೆ ಅಧಿಕಾರಿಗಳದ್ದೇ ಕಾರುಬಾರು..!**

ಇಷ್ಟೆಲ್ಲಾ ಗಂಭೀರ ಸ್ವರೂಪದ ಅಪಾಯ ಇದ್ದರೂ ಅಧಿಕಾರಿಗಳು ಮಾತ್ರ ಮೌನವಾಗಿದ್ದಾರೆ. ಅವರ ಗಮನಕ್ಕೆ ಬರದೇ ಇದೆಲ್ಲಾ ನಡೆಯಲು ಸಾಧ್ಯವಿಲ್ಲ. ಪವಿತ್ರವಾದ ಪ್ರಾಕೃತಿಕ ಹಳ್ಳಕ್ಕೆ ಯಾವುದೇ ಕಾರ್ಖಾನೆಯ ತ್ಯಾಜ್ಯ ಸುರಿಯುವುದು ಕಾನೂನು ಪ್ರಕಾರ ಅಪರಾಧ. ಇದನ್ನು ಪಾಲಿಸಬೇಕಾದ ಸಂಬಂಧಿತ ಇಲಾಖೆ ಅಧಿಕಾರಿಗಳೇ ಜಾಣಕುರುಡು ಪ್ರದರ್ಶಿಸಿದರೆ ಯಾರಿಗೆ ದೂರು ಕೊಡಬೇಕು ಎಂದು ಪ್ರಶ್ನಿಸುತ್ತಿದ್ದಾರೆ ನಾಗರಿಕರು.

**ಕಾರ್ಖಾನೆಗಳಿಂದ ಕಾನೂನು ಉಲ್ಲಂಘನೆ**

ಗ್ರಾಮಸ್ಥರ ಪ್ರಕಾರ, ಕೆಲವು ಕಾರ್ಖಾನೆಗಳು ಪರಿಸರ ನಿಯಮಗಳನ್ನು ಉಲ್ಲಂಘಿಸಿ ಸಂಸ್ಕರಿಸದ ತ್ಯಾಜ್ಯ ನೀರನ್ನು ಹಳ್ಳಕ್ಕೆ ಹರಿಸುತ್ತಿರುವ ಶಂಕೆ ಇದೆ. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ನೀರಿನ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯ ಪರೀಕ್ಷೆ ನಡೆಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

**ಅಪರೂಪದ ಕೃಷ್ಣ ಮೃಗಳಿಗೂ ಅಪಾಯ**

ಕೆಲವು ಕೆಮಿಕಲ್ ಕಾರ್ಖಾನೆಗಳಿಂದ ಹೊರಬರುವ ತ್ಯಾಜ್ಯ ಮಿಶ್ರಿತ ನೀರು ಮಾಣಿಕನಗರ ವಿರಜಾ ಸಂಗಮ್ ಹಳ್ಳಕ್ಕೆ ಸೇರುತ್ತಿದೆ. ದೂರದ ಪ್ರದೇಶದಲ್ಲಿ ಇದೇ ನೀರು ಸೇವಿಸುವ ಹಾಗೂ ಈ ಪ್ರಾಂತ್ಯದಲ್ಲಿ ಕಾಣಸಿಗುವ ಅಪರೂಪದ ಕೃಷ್ಣ ಮೃಗಳಿಗೂ ಕಾರ್ಖಾನೆಯ ತ್ಯಾಜ್ಯ ಅಪಾಯದ ಗಂಟೆ–ಯಾಗಿದೆ ಎಂದು ವನ್ಯಮೃಗ ಪ್ರಾಣಿ ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ.

**RSS ನೋಂದಣಿ ಬಗ್ಗೆ ಮೋಹನ್ ಭಾಗವತ್‌ಗೆ ಪ್ರಿಯಾಂಕ್ ಖರ್ಗೆ ಪತ್ರ: ಕಾನೂನು ಪಾಲನೆ ಕುರಿತು ಗೃಹ ಸಚಿವ ಸ್ಪಷ್ಟನೆ**

# ದೇಶ ಮುಂದುವರಿಯಲು ಜಾತಿ ಭಿನ್ನಾಭಿಪ್ರಾಯಗಳಿಗೆ ಕಡಿವಾಣ ಅಗತ್ಯ

ಭಾರತವು ವೈವಿಧ್ಯತೆಯಲ್ಲಿ ಏಕತೆಯನ್ನು ಸಾರುವ ಮಹಾನ್ ರಾಷ್ಟ್ರವಾಗಿದೆ. ಭಾಷೆ, ಧರ್ಮ, ಸಂಸ್ಕೃತಿ ಮತ್ತು ಜಾತಿಗಳ ವೈವಿಧ್ಯತೆ ನಮ್ಮ ದೇಶದ ಶಕ್ತಿಯಾಗಿದೆ. ಆದರೆ ಕೆಲವೊಮ್ಮೆ ಜಾತಿ ಆಧಾರಿತ ಭಿನ್ನಾಭಿಪ್ರಾಯಗಳು ಸಮಾಜದಲ್ಲಿ ಅಶಾಂತಿ ಮತ್ತು ವಿಭಜನೆಗೆ ಕಾರಣವಾಗುತ್ತವೆ. ಇದು ದೇಶದ ಅಭಿವೃದ್ಧಿಗೆ ಅಡ್ಡಿಯಾಗುವ ಪ್ರಮುಖ ಸಮಸ್ಯೆಯಾಗಿದೆ.

## ಸಂಪಾದಕೀಯ

**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**



ಜಾತಿ ವ್ಯವಸ್ಥೆ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ್ದರೂ, ಆಧುನಿಕ ಭಾರತದಲ್ಲಿ ಎಲ್ಲ ನಾಗರಿಕರೂ ಸಮಾನರು ಎಂಬುದು ಸಂವಿಧಾನದ ಆಶಯವಾಗಿದೆ. ಆದರೂ ರಾಜಕೀಯ ಲಾಭ, ಸಾಮಾಜಿಕ ಅಸಮಾನತೆ, ಶಿಕ್ಷಣದ ಕೊರತೆ ಮತ್ತು ಕೆಲವರ ಸ್ವಾರ್ಥಪರ ನಡೆಗಳಿಂದ ಜಾತಿ ಸಂಘರ್ಷಗಳು ಉಂಟಾಗುತ್ತಿವೆ. ಇದರ ಪರಿಣಾಮವಾಗಿ ಸಮಾಜದಲ್ಲಿ ಪರಸ್ಪರ ನಂಬಿಕೆ ಕಡಿಮೆಯಾಗುತ್ತಿದ್ದು, ಸಹೋದರತ್ವದ ಭಾವನೆಗೆ ಧಕ್ಕೆಯಾಗುತ್ತಿದೆ.

ಯುವಜನತೆ ಜಾತಿ–ಧರ್ಮದ ಭೇದಗಳನ್ನು ಮೀರಿ ದೇಶದ ಅಭಿವೃದ್ಧಿಯತ್ತ ಗಮನಹರಿಸಬೇಕು. ಶಿಕ್ಷಣ ಸಂಸ್ಥೆಗಳು, ಸಾಮಾಜಿಕ ಸಂಘಟನೆಗಳು ಮತ್ತು ಜನಪ್ರತಿನಿಧಿಗಳು ಸಮಾನತೆ ಹಾಗೂ ಸೌಹಾರ್ದತೆಯ ಸಂದೇಶವನ್ನು ಸಾರಬೇಕು. ಸರ್ಕಾರವು ಎಲ್ಲ ವರ್ಗಗಳ ಅಭಿವೃದ್ಧಿಗೆ ಸಮಾನ ಅವಕಾಶಗಳನ್ನು ಒದಗಿಸಿ ಸಾಮಾಜಿಕ ನ್ಯಾಯವನ್ನು ಖಚಿತಪಡಿಸಬೇಕು.

ದೇಶ ಮೊದಲು, ಜಾತಿ ನಂತರ ಎಂಬ ಮನೋಭಾವ ಪ್ರತಿಯೊಬ್ಬ ನಾಗರಿಕನಲ್ಲೂ ಬೆಳೆಯಬೇಕು. ನಾವು ಎಲ್ಲರೂ ಭಾರತೀಯರು ಎಂಬ ಭಾವನೆ ಬಲಗೊಂಡಾಗ ಮಾತ್ರ ರಾಷ್ಟ್ರದ ಏಕತೆ ಮತ್ತು ಅಭಿವೃದ್ಧಿ ಸಾಧ್ಯವಾಗುತ್ತದೆ. ಜಾತಿ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ, ಪರಸ್ಪರ ಗೌರವ ಮತ್ತು ಸಹಕಾರದೊಂದಿಗೆ ಬದುಕುವುದು ಇಂದಿನ ಅಗತ್ಯವಾಗಿದೆ.



# 108 ಕುಂಭ ಕಳಸಗಳೊಂದಿಗೆ ಶ್ರೀ ವಿವೇಕ ಗಣೇಶ ಪ್ರತಿಷ್ಠಾಪನಾ ಮಹೋತ್ಸವಕ್ಕೆ ಅದ್ದೂರಿ ಚಾಲನೆ



**ಬೀದರ್:** ನಗರದ ಶಾಹಗಂಜದ ಹೆಳವಗಲ್ಲಿಯಲ್ಲಿರುವ ಶ್ರೀ ವಿವೇಕ ಗಣೇಶ ದೇವಸ್ಥಾನದ ನೂತನ ಕಟ್ಟಡ ಹಾಗೂ ಶ್ರೀ ಗಣೇಶ, ಈಶ್ವರ ಮತ್ತು ನಾಗರಾಜ ದೇವರ ಮೂರ್ತಿಗಳ ಪ್ರತಿಷ್ಠಾಪನಾ ಮಹೋತ್ಸವದ ಅಂಗವಾಗಿ ಸೋಮವಾರ ನಡೆದ ಭವ್ಯ ಮೆರವಣಿಗೆಯಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ಭಕ್ತಿಭಾವ ಮೆರೆದರು.

ಹಳೆಯ ಸರ್ವಿಸ್ ಸ್ಟ್ಯಾಂಡ್‌ನ ದೇವಿ ಮಂದಿರದಿಂದ ಆರಂಭವಾದ ಮೆರವಣಿಗೆಯಲ್ಲಿ 108 ಕುಂಭ ಕಳಸಗಳನ್ನು ಹೊತ್ತ ಮಹಿಳೆಯರು, ವಿವಿಧ ಭಜನಾ ಮಂಡಳಿಗಳು ಹಾಗೂ ಭಕ್ತರು ಭಾಗವಹಿಸಿ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿದರು. ಡಾ. ಬಿ.ಆರ್. ಅಂಬೇಡ್ಕರ್ ವೃತ್ತ ಮಾರ್ಗವಾಗಿ ದೇವಸ್ಥಾನಕ್ಕೆ ತಲುಪಿತು.

ಬಿಜೆಪಿ ಮುಖಂಡ ಈಶ್ವರಸಿಂಗ್ ಠಾಕೂರ್ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿ, ದೇವಾಲಯಗಳು ಭಾರತೀಯ ಸಂಸ್ಕೃತಿ, ಪರಂಪರೆ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಪ್ರತೀಕಗಳಾಗಿದ್ದು, ಯುವ ಪೀಳಿಗೆಯಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಅರಿವು ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ದೇವಸ್ಥಾನದಲ್ಲಿ ಗಣಪತಿ ಪೂಜೆ, ಪುಣ್ಯಾವಾಚನ, ಹವನ, ಮಹಾಮಂಗಳಾರತಿ ಹಾಗೂ ತೀರ್ಥಪ್ರಸಾದ ವಿತರಣೆಯಂತಹ ಧಾರ್ಮಿಕ ಕಾರ್ಯಕ್ರಮಗಳು ಶಾಸ್ತ್ರೋಕ್ತವಾಗಿ ನೆರವೇರಿದವು. ಮಧ್ಯಾಹ್ನ ನಡೆದ ಮಹಾಪ್ರಸಾದದಲ್ಲಿ ಸಾವಿರಾರು ಭಕ್ತರು ಭಾಗವಹಿಸಿ ಪ್ರಸಾದ ಸ್ವೀಕರಿಸಿದರು.

ಜೂನ್ 16 ಮತ್ತು 17ರಂದು ಪ್ರತಿಷ್ಠಾಪನಾ ಮಹೋತ್ಸವದ ಅಂಗವಾಗಿ ಸಕಲ ದೇವತಾ ಪೂಜೆ, ಹೋಮ–ಹವನ, ಮಹಾಪೂರ್ಣಾಹುತಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದ್ದು, ಜೂನ್ 17ರಂದು ಶ್ರೀ ಗಣೇಶ, ಈಶ್ವರ ಹಾಗೂ ನಾಗದೇವರ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ವಿಜೃಂಭಣೆಯಿಂದ ಜರುಗಲಿದೆ ಎಂದು ದೇವಸ್ಥಾನ ಸಮಿತಿಯ ಪದಾಧಿಕಾರಿಗಳು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಸೂರ್ಯಕಾಂತ ನಾಗಮಾರ್ಪಳ್ಳಿ, ಬಾಬು ಜಗನ್ನಾಥ್, ಮೇಘರಾಜ್, ಸಂಜು ಕುಮಾರ್, ದೇವಿದಾಸ್ ಅಂದಕೂಳ, ಅಂಬದಾಸ್ ಕೋಡಾದೆ, ನವೀನ್, ಅಶೋಕ್, ರಮೇಶ್ ಅಂದಕೂಳ, ಕಿರಣ್, ರಾಜಕುಮಾರ್ ಜಗನಾಥ, ಕೀರಣ ಜಗನ್ನಾಥ್, ಅಂಬದಾಸ್ ಅಂದಕೂಳ, ಮಂಜುನಾಥ್, ಪರಶುರಾಮ್ ಹಾಗೂ ರೋಶನ್ ಕಾಂಬಳೆ ಸೇರಿದಂತೆ ಹಲವರು ಉಪಸ್ಥಿತರಿದ್ದರು. ದೇವಸ್ಥಾನ ಸಮಿತಿಯ ಸದಸ್ಯರು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಗಣ್ಯರು, ಸಾರ್ವಜನಿಕರು ಹಾಗೂ ಸಾವಿರಾರು ಭಕ್ತರು ಉಪಸ್ಥಿತರಿದ್ದರು.

# ಯೋಗದ ಮಹತ್ವ ಸಾರಲು ಯೋಗ ಸಪ್ತಾಹಕ್ಕೆ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ಉತ್ತಮ ಆರೋಗ್ಯವನ್ನು ವೃದ್ಧಿಸಲು ಮತ್ತು ದೈನಂದಿನ ಜೀವನದಲ್ಲಿ ಯೋಗದ ಮಹತ್ವವನ್ನು ಸಾರುವ ಉದ್ದೇಶದಿಂದ ಜಿಲ್ಲೆಯಾದ್ಯಂತ ಯೋಗ ಸಪ್ತಾಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಯೋಗಸಾಧಕ ಹಾಗೂ ಐ.ಎನ್.ಓ ಜಿಲ್ಲಾಧ್ಯಕ್ಷರಾದ ಗೋರಖನಾಥ ಕುಂಬಾರ ಹೇಳಿದರು.

ಬೀದರ ತಾಲ್ಲೂಕಿನ ಘೋಡಂಪಳ್ಳಿ ಗ್ರಾಮದ ಅಟಲ್ ಬಿಹಾರಿ ವಾಜಪೇಯಿ ಶಾಲೆಯ ಆವರಣದಲ್ಲಿ ಇಂಟರ್ನ್ಯಾಷನಲ್ ನ್ಯಾಚುರೋಪತಿ ಆರ್ಗನೈಸೇಶನ್, ಸೂರ್ಯ ಫೌಂಡೇಶನ್ ಹಾಗೂ ಪತಂಜಲಿ ಯೋಗ ಸಂಸ್ಥೆಯ ಯುವ ಘಟಕದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ ಯೋಗ ಸಪ್ತಾಹ ಕಾರ್ಯಕ್ರಮಕ್ಕೆ ಸಸಿಗೆ ನೀರೆರೆದು ಚಾಲನೆ ನೀಡಿ ಅವರು ಮಾತನಾಡಿದರು.

ಈ ಯೋಗ ಸಪ್ತಾಹದಲ್ಲಿ ಮಕ್ಕಳಿಗೆ ಯೋಗಾಸನ, ಪ್ರಾಣಾಯಾಮ, ಧ್ಯಾನದ ತರಬೇತಿ ನೀಡುವುದರ ಜೊತೆಗೆ ಇಂದಿನ ಒತ್ತಡದ ಜೀವನಶೈಲಿಯಲ್ಲಿ ಕಾಡುವ ಮಧುಮೇಹ, ರಕ್ತದೊತ್ತಡ, ಬೆನ್ನುನೋವು ಮತ್ತು ಮಾನಸಿಕ ಒತ್ತಡಗಳನ್ನು ಯೋಗ ಮತ್ತು





ನಿಸರ್ಗೋಪಚಾರದಮೂಲಕಹೇಗೆನಿಯಂತ್ರಿಸಬಹುದು ಎಂಬುದರ ಬಗ್ಗೆ ತಿಳಿಸಿಕೊಡಲಾಗುವುದು ಎಂದರು.

ಸೂರ್ಯ ಫೌಂಡೇಶನ್ ರಾಜ್ಯ ಸಂಚಾಲಕ ಗುರುನಾಥ ರಾಜಗೀರಾ ಮಾತನಾಡಿ ಯೋಗ ಎಂಬುದು ಕೇವಲ ದೈಹಿಕ ಕಸರತ್ತಲ್ಲ, ಅದು ದೇಹ ಮತ್ತು ಮನಸ್ಸನ್ನು ಜೋಡಿಸುವ ಅದ್ಭುತ ಕಲೆ. ಪ್ರತಿಯೊಬ್ಬರೂ ದಿನದಲ್ಲಿ ಕನಿಷ್ಠ 30 ನಿಮಿಷಗಳನ್ನು ಯೋಗಕ್ಕಾಗಿ ಮೀಸಲಿಟ್ಟರೆ ಸದೃಢ ಹಾಗೂ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ ಈ ನಿಟ್ಟಿನಲ್ಲಿ ವಿಶ್ವ ಯೋಗ ದಿನಾಚರಣೆಯ ಪ್ರಯುಕ್ತ ಈ ಯೋಗ ಸಪ್ತಾಹ ಹಮ್ಮಿಕೊಳ್ಳಲಾಗಿದೆ ಎಂದರು.

ಶಾಲೆಯ ಮುಖ್ಯಗುರುಗಳಾದ ಶರಣಪ್ಪಾ ಬಿರಾದರ ಮಾತನಾಡಿ ಮಕ್ಕಳಲ್ಲಿ ಉತ್ತಮ ಆರೋಗ್ಯ ಮತ್ತು ಯೋಗದ ಜಾಗೃತಿ ಮೂಡಿಸಲು ಯೋಗ ಸಪ್ತಾಹ ಕಾರ್ಯಕ್ರಮ ಹಮ್ಮಿಕೊಂಡಿರುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ ಮಕ್ಕಳೆಲ್ಲರು ಈ ಸಪ್ತಾಹದಲ್ಲಿ ಸಕ್ರಿಯವಾಗಿ ಹಾಗೂ ಉತ್ಸಾಹಭರಿತದಿಂದ ಪಾಲ್ಗೊಂಡು ಯೋಗ ಸಪ್ತಾಹದ ಲಾಭ ಪಡೆದುಕೊಳ್ಳಬೇಕೆಂದರು.

ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರಾದ ದೇವಿದಾಸ ಜೋಶಿ, ರಘುನಾಥ ರೆಡ್ಡಿ ಸೇರಿದಂತೆ ಇತರರಿದ್ದರು.

# ಜಿಲ್ಲಾ ಅಧ್ಯಕ್ಷರಾಗಿ ಗಣಪತಿ ಭಕ್ತಾ ನೇಮಕ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಕರ್ನಾಟಕ ರಾಜ್ಯ ಎಸ್‌ಸಿ/ಎಸ್‌ಟಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಕ್ಷೇಮಾಭಿವೃದ್ಧಿ ಸಂಘ (ರಿ), ಬೆಂಗಳೂರು ಇದರ ಬೀದರ್ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಗಣಪತಿ ಭಕ್ತಾ ಅವರನ್ನು ನೇಮಕ ಮಾಡಲಾಗಿದೆ.

ಗಣಪತಿ ಭಕ್ತಾ ಅವರು ಪ್ರಸ್ತುತ ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಧನ್ನೂರ (ಎಸ್) ಗ್ರಾಮದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಂಘದ ಬೀದರ್ ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದ ಸಾಗರ ವೈಜಿನಾಥ ಅವರ ವಯೋ ನಿವೃತ್ತಿಯಿಂದ ತೆರವಾದ ಸ್ಥಾನಕ್ಕೆ ಗಣಪತಿ ಭಕ್ತಾ ಅವರನ್ನು ನೇಮಕಗೊಳಿಸಲಾಗಿದೆ.

ಬೆಂಗಳೂರುದಲ್ಲಿ ನಡೆದ ಸಂಘದ ಸಭೆಯಲ್ಲಿ ರಾಜ್ಯ ಸಂಸ್ಥಾಪಕ ಅಧ್ಯಕ್ಷರಾದ ವಿ.ಟಿ. ವೆಂಕ್ಟೇಶಯ್ಯ, ರಾಜ್ಯ ಉಪಾಧ್ಯಕ್ಷರಾದ ದುಂಡಯ್ಯ (ಮೈಸೂರು) ಹಾಗೂ ರಾಜ್ಯದ ಇತರ ಪದಾಧಿಕಾರಿಗಳ ಉಪಸ್ಥಿತಿಯಲ್ಲಿ ಈ ನೇಮಕಾತಿ ಆದೇಶವನ್ನು ನೀಡಲಾಯಿತು.

ಗಣಪತಿ ಭಕ್ತಾ ಅವರ ಶೈಕ್ಷಣಿಕ, ಸಾಮಾಜಿಕ ಹಾಗೂ ಸಂಘಟನಾ ಕಾರ್ಯಚಟುವಟಿಕೆಗಳನ್ನು



ಪರಿಗಣಿಸಿ ಅವರಿಗೆ ಈ ಮಹತ್ವದ ಜವಾಬ್ದಾರಿಯನ್ನು ವಹಿಸಲಾಗಿದೆ ಎಂದು ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ. ನೇಮಕಾತಿಯ ನಂತರ ಮಾತನಾಡಿದ ಗಣಪತಿ ಭಕ್ತಾ, ಸಂಘದ ಉದ್ದೇಶಗಳು ಮತ್ತು ಆಶಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಶ್ರಮಿಸುವುದಾಗಿ ಹಾಗೂ ಎಸ್‌ಸಿ/ಎಸ್‌ಟಿ ಸಮುದಾಯದ ಶಿಕ್ಷಕರ ಹಿತಾಸಕ್ತಿ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುವುದಾಗಿ ಹೇಳಿದರು.

ಅವರ ನೇಮಕಕ್ಕೆ ಜಿಲ್ಲೆಯ ಶಿಕ್ಷಕ ವೃಂದ, ಸಂಘದ ಸದಸ್ಯರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಅಭಿನಂದನೆ ಸಲ್ಲಿಸಿ ಶುಭ ಹಾರೈಸಿದ್ದಾರೆ.

# ನೂತನ ಸಚಿವ ಈಶ್ವರ್ ಖಂಡ್ರೆಗೆ ಸನ್ಮಾನ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಕರ್ನಾಟಕ ಸರ್ಕಾರದ ನೂತನ ಸಚಿವ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಬಾರಿಗೆ ಬೀದರ್ ಜಿಲ್ಲೆಗೆ ಆಗಮಿಸಿದ ಸಚಿವ ಈಶ್ವರ್ ಖಂಡ್ರೆ ಅವರಿಗೆ ಡಾ. ಬಿ.ಆರ್. ಅಂಬೇಡ್ಕರ್ ಯೂಥ್ ಬ್ರಿಗೇಡ್ ವತಿಯಿಂದ ಆತ್ಮೀಯ ಹಾಗೂ ಗೌರವಪೂರ್ಣ ಸನ್ಮಾನ ನೆರವೇರಿಸಲಾಯಿತು.

ನಗರದಲ್ಲಿ ನಗರದ ಡಾ. ಬಿಆರ್ ಅಂಬೇಡ್ಕರ್ ವೃತ್ತದಲ್ಲಿ ಸನ್ಮಾನ ನೆರವೇರಿಸಿದರು. ಡಾ. ಬಿ.ಆರ್. ಅಂಬೇಡ್ಕರ್ ಯೂಥ್ ಬ್ರಿಗೇಡ್ ಜಿಲ್ಲಾ ಅಧ್ಯಕ್ಷರು ಮಾತನಾಡಿ, ಈಶ್ವರ ಖಂಡ್ರೆ ಅವರು ಸಚಿವರಾಗಿ ಅಧಿಕಾರ ವಹಿಸಿಕೊಂಡಿರುವುದು ಜಿಲ್ಲೆಯ ಜನತೆಗೆ ಹೆಮ್ಮೆಯ ಸಂಗತಿಯಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೂಲಕ ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಅವರು ವಿಶೇಷ ಆದ್ಯತೆ ನೀಡಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಸಚಿವ ಈಶ್ವರ ಖಂಡ್ರೆ ಅವರಿಗೆ ಶಾಲು ಹೊದಿಸಿ, ಪುಷ್ಪಗುಚ್ಛ ನೀಡಿ ಗೌರವಿಸಲಾಯಿತು. ಈ ವೇಳೆ



ಅವರ ಮುಂದಿನ ಆಡಳಿತಾವಧಿ ಯಶಸ್ವಿಯಾಗಲಿ ಹಾಗೂ ಜಿಲ್ಲೆಯ ಅಭಿವೃದ್ಧಿಗೆ ಮತ್ತಷ್ಟು ಕೊಡುಗೆ ನೀಡಲಿ ಎಂದು ಹಾರೈಸಲಾಯಿತು.

ಕಾರ್ಯಕ್ರಮದಲ್ಲಿ ಸತೀಶ್ ಲಕ್ಕಿ, ಪವನ, ಗೌತಮ್ ಬೋಸ್ಲೆ, ಮಲ್ಲಿಕಾರ್ಜುನ್ ಮೊಳಕೇರೆ, ರವಿ, ಪವನ್ ಸಾರಸರ, ಶ್ರೀಕಾಂತ ಡಿಳೋಣ, ಪವಿತ ನಿಟೂರ್ಕರ್, ಬಂಟಿ ಸೊನೆ, ರವೀಂದ್ರ ಕಾಂಬಳೆ, ಶ್ರೀನಿವಾಸ್ ದಯಾಳ್, ಸಚಿನ್ ಬಂದಗೆ ಸೇರಿದಂತೆ ಬ್ರಿಗೇಡ್‌ನ ಪದಾಧಿಕಾರಿಗಳು, ಸದಸ್ಯರು ಹಾಗೂ ಮುಖಂಡರು ಉಪಸ್ಥಿತರಿದ್ದರು.

# ಭೀಕರ ಗಾಳಿ–ಮಳೆಗೆ ಕಬ್ಬು ಬೆಳೆ ನೆಲಸಮ, ಪರಿಹಾರಕ್ಕೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಬೀದರ್ ವಿಧಾನಸಭಾ ಕ್ಷೇತ್ರದ ಹಲವಾರು ಗ್ರಾಮಗಳಲ್ಲಿ ಶನಿವಾರ ರಾತ್ರಿ ಬೀಸಿದ ಚಕ್ರವಾತಿ ಗಾಳಿ ಹಾಗೂ ಭೀಕರ ಮಳೆಯಿಂದ ರೈತರ ಕಬ್ಬು ಬೆಳೆ ಸಂಪೂರ್ಣವಾಗಿ ನೆಲಸಮವಾಗಿದ್ದು, ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ಜನತಾ ಪಕ್ಷದ ಬೀದರ್ ವಿಧಾನಸಭಾ ಕ್ಷೇತ್ರದ ಮುಖಂಡ ಈಶ್ವರ್ ಸಿಂಗ್ ಠಾಕೂರ್ ಅವರು ಹಾನಿಗೊಳಗಾದ ಗ್ರಾಮಗಳಿಗೆ ಭೇಟಿ ನೀಡಿ ಬೆಳೆ ಹಾನಿಯನ್ನು ಪರಿಶೀಲಿಸಿದರು.

ಮಿರ್ಜಾಪುರ್ ಕೆ ಗ್ರಾಮಕ್ಕೆ ಭೇಟಿ ನೀಡಿದ ಈಶ್ವರ್ ಸಿಂಗ್ ಠಾಕೂರ್ ಅವರು ಗ್ರಾಮದ ಸರ್ವೇ ನಂಬರ್ 1ರಲ್ಲಿ ಸುಮಾರು 3 ಎಕರೆ, ಸರ್ವೇ ನಂಬರ್ 77ರಲ್ಲಿ ಸುಮಾರು 4 ಎಕರೆ, ಸರ್ವೇ ನಂಬರ್ 46ರಲ್ಲಿ 1 ಎಕರೆ ಹಾಗೂ ಸರ್ವೇ ನಂಬರ್ 35ರಲ್ಲಿ 1 ಎಕರೆ ಸೇರಿದಂತೆ ವಿವಿಧ ಸರ್ವೇ



ನಂಬರ್‌ಗಳಲ್ಲಿ ಬೆಳೆದಿದ್ದ ಕಬ್ಬು ಬೆಳೆ ಸಂಪೂರ್ಣವಾಗಿ ನೆಲಕ್ಕುರುಳಿರುವುದನ್ನು ವೀಕ್ಷಿಸಿದರು. ಭಾರೀ ಗಾಳಿ ಮತ್ತು ಮಳೆಯಿಂದಾಗಿ ರೈತರು ಅಪಾರ ಪ್ರಮಾಣದ ಆರ್ಥಿಕ ನಷ್ಟ ಅನುಭವಿಸಿರುವುದಾಗಿ ರೈತರು ತಮ್ಮ ಅಳಲು ತೋಡಿಕೊಂಡರು.

ತದನಂತರ ಕಪಲಾಪೂರ (ಜೆ) ಗ್ರಾಮಕ್ಕೂ ಭೇಟಿ ನೀಡಿದ ಅವರು, ಹಲವಾರು ರೈತರ ಹೊಲಗಳನ್ನು ಪರಿಶೀಲಿಸಿದರು. ರೈತರು ಕಷ್ಟಪಟ್ಟು ಬೆಳೆದಿದ್ದ ಕಬ್ಬು ಬೆಳೆ ಸಂಪೂರ್ಣವಾಗಿ ಹಾನಿಗೊಳಗಾಗಿರುವುದನ್ನು ಕಂಡು ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಈ ವೇಳೆ ಕೃಷಿ ಇಲಾಖೆ ಅಧಿಕಾರಿಗಳು ಹಾಗೂ ತಹಶೀಲ್ದಾರರೊಂದಿಗೆ ದೂರವಾಣಿ ಮೂಲಕ ಮಾತನಾಡಿದ ಈಶ್ವರ್ ಸಿಂಗ್ ಠಾಕೂರ್, ಮಳೆಯಿಂದ ಹಾನಿಗೊಳಗಾದ ಎಲ್ಲ ಗ್ರಾಮಗಳ ಬೆಳೆ ನಷ್ಟದ ಕುರಿತು ಸಮಗ್ರ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಸೂಚಿಸಿದರು. ಅಲ್ಲದೇ ರೈತರಿಗೆ ಶೀಘ್ರ ಪರಿಹಾರ ದೊರಕುವಂತೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

"ರೈತರ ನಷ್ಟದ ಬಗ್ಗೆ ಅಧಿಕಾರಿಗಳು ಕೂಡಲೇ ವರದಿ ಸಲ್ಲಿಸಿ ಸೂಕ್ತ ಪರಿಹಾರ ಒದಗಿಸದಿದ್ದರೆ, ರೈತರ ಹಕ್ಕುಗಳಿಗಾಗಿ ಹೋರಾಟ ನಡೆಸಲಾಗುವುದು" ಎಂದು ಅವರು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ಸಂದೀಪ್ ಪಾಟೀಲ್, ರೈತರಾದ ಗೋವಿಂದರಾವ್, ಪ್ರಕಾಶ್ ಪಾಂಡ್ರೆ, ತುಕಾರಾಂ, ವಸಂತ ಮಾಲೆಗಾವ್, ಶಿವಾನಂದ ಮಾಲೆ, ಅನಿಲ್ ನಾಗೊಂಡೆ, ,ಶ್ರೀದತ್ತು ಹುಣ್ಣಗುಂಡೆ, ಪುಂಡಲೀಕ ಹಾಗೂ ಬೆಳೆ ಹಾನಿಗೊಳಗಾದ ಇತರ ರೈತರು ಉಪಸ್ಥಿತರಿದ್ದರು.

# ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಬೆಲ್ದಾಳೆ ಚಾಲನೆ





• ಮಲ್ಲಮ್ಮ ನುಡಿ ವಾರ್ತೆ ಬೀದರ್

ಬೀದರ್ ದಕ್ಷಿಣ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಮತ್ತೊಂದು ಮಹತ್ವದ ಹೆಜ್ಜೆಯಾಗಿ ಆಣದೂರ ಗ್ರಾಮದಿಂದ ಕಪಲಾಪುರ, ಅತಿವಾಳ ಮಾರ್ಗವಾಗಿ ಹೊನ್ನಿಕೇರಿ ಸಿದ್ಧೇಶ್ವರ ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಕಾಮಗಾರಿಯ ಉಳಿದ ಭಾಗಕ್ಕೆ ₹1.50 ಕೋಟಿ ವೆಚ್ಚದಲ್ಲಿ ಡಾಂಬರೀಕರಣ ಕಾಮಗಾರಿಗೆ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಳೆದ ವರ್ಷ ಇದೇ ರಸ್ತೆಗೆ ₹1 ಕೋಟಿ ಅನುದಾನದಲ್ಲಿ ಡಾಂಬರೀಕರಣ ಕಾಮಗಾರಿ ಪೂರ್ಣಗೊಳಿಸಲಾಗಿದ್ದು, ಇದೀಗ ಉಳಿದ ಭಾಗದ ಅಭಿವೃದ್ಧಿ ಕಾರ್ಯಕ್ಕೂ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು. ಕಾಮಗಾರಿಯನ್ನು ಗುಣಮಟ್ಟದಿಂದ ಹಾಗೂ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಸಂಬಂಧಿಸಿದ ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ ಎಂದರು.

ಇದೇ ವೇಳೆ ಕಪಲಾಪೂರ (ಎ) ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೂ ಚಾಲನೆ ನೀಡಲಾಯಿತು. ₹65 ಲಕ್ಷ ವೆಚ್ಚದಲ್ಲಿ ಗ್ರಾಮದ ಮುಖ್ಯ ರಸ್ತೆಯಿಂದ ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ನಿಲಯದವರೆಗೆ ರಸ್ತೆ ಡಾಂಬರೀಕರಣ ಕಾಮಗಾರಿ ಸಹವವವ ಚಾಲನೆ ನೀಡಲಾಗಿದೆ, ₹35 ಲಕ್ಷ ವೆಚ್ಚದಲ್ಲಿ ಕಪಲಾಪೂರ (ಎ) ಹಾಗೂ ಹೊನ್ನಿಕೇರಿ ತಾಂಡದ ಎಸ್.ಸಿ. ಓಣಿಗಳಲ್ಲಿ ಸಿ.ಸಿ. ರಸ್ತೆ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು.

ಜೊತೆಗೆ, ಗ್ರಾಮದಲ್ಲಿ ₹6 ಲಕ್ಷ ವೆಚ್ಚದಲ್ಲಿ ಹೈಮಾಸ್ಟ್ ದೀಪ ಅಳವಡಿಕೆ ಕಾಮಗಾರಿಗೂ ಚಾಲನೆ ನೀಡಲಾಯಿತು. ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ರಸ್ತೆ, ಮೂಲಸೌಕರ್ಯ ಹಾಗೂ ಅಗತ್ಯ ನಾಗರಿಕ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಸಾರ್ವಜನಿಕರ ಜೀವನಮಟ್ಟವನ್ನು ಮತ್ತಷ್ಟು ಉತ್ತಮಗೊಳಿಸುವುದು ತಮ್ಮ ಸಂಕಲ್ಪವಾಗಿದೆ ಎಂದು ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಹೇಳಿದರು.

> **ಕಳೆದ ವರ್ಷ ಇದೇ ರಸ್ತೆಗೆ ₹1 ಕೋಟಿ ಅನುದಾನದಲ್ಲಿ ಡಾಂಬರೀಕರಣ ಕಾಮಗಾರಿ ಪೂರ್ಣಗೊಳಿಸಲಾಗಿದ್ದು, ಇದೀಗ ಉಳಿದ ಭಾಗದ ಅಭಿವೃದ್ಧಿ ಕಾರ್ಯಕ್ಕೂ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು. ಕಾಮಗಾರಿಯನ್ನು ಗುಣಮಟ್ಟದಿಂದ ಹಾಗೂ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಸಂಬಂಧಿಸಿದ ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ.**
>
> **–ಡಾ. ಶೈಲೇಂದ್ರ ಬೆಲ್ದಾಳೆ, ಶಾಸಕರು ಬೀದರ ದಕ್ಷಿಣ ಕ್ಷೇತ್ರ**

ಜನರ ಸುಗಮ ಸಂಚಾರ, ಗ್ರಾಮೀಣ ಸಂಪರ್ಕ ವ್ಯವಸ್ಥೆಯ ಬಲವರ್ಧನೆ ಹಾಗೂ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದ್ದು, ಎಲ್ಲಾ ಕಾಮಗಾರಿಗಳನ್ನು ಗುಣಮಟ್ಟದಿಂದ ಮತ್ತು ನಿಗದಿತ ಸಮಯದೊಳಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಅವರು ತಿಳಿಸಿದರು.

ಗ್ರಾಮದ ಮುಖಂಡರಾದ ಹಣಮಂತರಾವ ಮೈಲಾರೆ ಅವರು ಮಾತನಾಡಿ, ಬೀದರ್ ದಕ್ಷಿಣ ಕ್ಷೇತ್ರದಲ್ಲಿ ಮಾನ್ಯ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರ ನೇತೃತ್ವದಲ್ಲಿ ನಿರಂತರವಾಗಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ರಾಮದ ರಸ್ತೆ, ಕುಡಿಯುವ ನೀರು, ಮೂಲಸೌಕರ್ಯ ಸೇರಿದಂತೆ ಜನರ ಬಹುಕಾಲದ ಬೇಡಿಕೆಗಳಿಗೆ ಸ್ಪಂದಿಸಿ ಸರ್ಕಾರದ ಅನುದಾನ ತಂದು ಅಭಿವೃದ್ಧಿಗೆ ವೇಗ ನೀಡಿರುವುದು ಶ್ಲಾಘನೀಯ ಎಂದು ಹೇಳಿದರು. ಇದೇ ರೀತಿಯಲ್ಲಿ ಮುಂದೆಯೂ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶಾಸಕರು ಇನ್ನಷ್ಟು ಜನಪರ ಕಾರ್ಯಗಳನ್ನು ಕೈಗೊಳ್ಳಲಿ ಎಂದು ಶುಭ ಹಾರೈಸಿದರು.

# ಶರಣಬಸವ ವಿಶ್ವವಿದ್ಯಾಲಯದಲ್ಲಿ ವಿಶ್ವ ರಕ್ತದಾನಿಗಳ ದಿನಾಚರಣೆ



• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ವಿಶ್ವ ರಕ್ತದಾನಿಗಳ ದಿನದಂಗವಾಗಿ ರವಿವಾರದಂದು ಕಲಬುರಗಿ ನಗರದ ಶರಣಬಸವ ವಿಶ್ವವಿದ್ಯಾಲಯ ಹಾಗೂ ಚಿರಾಯು ಆಸ್ಪತ್ರೆಯ ಜೀವನ್ ಆಧಾರ ರಕ್ತ ಕೇಂದ್ರದ ಸಂಯಕ್ತಾಶ್ರಯದಲ್ಲಿ ಆಯೋಜಿಸಲಾದ ರಕ್ತದಾನ ಶಿಬಿರದಲ್ಲಿ ಎನ್ ಎಸ್ ಎಸ್ ಸ್ವಯಂಸೇವಕರು, ಎನ್‌ಸಿಸಿ ಕೆಡೆಟ್‌ಗಳು ಸೇರಿದಂತೆ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ 100ಕ್ಕೂ ಹೆಚ್ಚು ಸ್ವಯಂಸೇವಕರು ರಕ್ತದಾನ ಮಾಡಿದರು.

ನಗರದ ಶರಣಬಸವ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾಗಿರುವ ಶರಣಬಸವ ಆಯುರ್ವೇದ ಆಸ್ಪತ್ರೆಯಲ್ಲಿ ನಡೆದ ರಕ್ತದಾನ ಶಿಬಿರವನ್ನು ಚಿರಾಯು ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಖ್ಯಾತ ಮೂತ್ರಪಿಂಡ ರೋಗ ತಜ್ಞರಾದ ಡಾ. ಮಂಜುನಾಥ ದೋಶೆಟ್ಟಿ ಉದ್ಘಾಟಿಸಿದರು. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಉತ್ಸಾಹದಿಂದ ಶಿಬಿರದಲ್ಲಿ ಭಾಗವಹಿಸಿ ರಕ್ತದಾನ ಮಾಡಿದರು.ಕಾರ್ಯಕ್ರಮದಲ್ಲಿ ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಅನಿಲಕುಮಾರ ಬಿಡವೆ, ಕುಲಸಚಿವರಾದ ಡಾ. ಲಕ್ಷ್ಮೀ ಪಾಟೀಲ ಮಕಾ, ಕುಲಸಚಿವ (ಮೌಲ್ಯಮಾಪನ) ಡಾ. ಎಸ್. ಎಚ್. ಹೊನ್ನಳ್ಳಿ, ಆಯುರ್ವೇದ ಆಸ್ಪತ್ರೆಯ ಆಡಳಿತಾಧಿಕಾರಿ ಪ್ರೊ. ನೀರಜ್ ತಡಕಲ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕೊಪ್ಪಳ ವಿವಿ ಪಿ.ಜಿ ಕೇಂದ್ರಗಳ ನೇಮಕಾತಿ ಪ್ರಕ್ರಿಯೆ ವಿವಾದ: ತಾರತಮ್ಯ, ಅರ್ಹತೆ ಉಲ್ಲಂಘನೆ ಆರೋಪ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ಕೊಪ್ಪಳ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರುವ ವಿವಿಧ ಸ್ನಾತಕೋತ್ತರ (ಪಿ.ಜಿ) ಕೇಂದ್ರಗಳಲ್ಲಿ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆ ಇದೀಗ ವಿವಾದದ ಕೇಂದ್ರಬಿಂದುವಾಗಿದ್ದು, ಆಯ್ಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕೊರತೆ, ತಾರತಮ್ಯ ಹಾಗೂ ಅರ್ಹತಾ ಮಾನದಂಡಗಳ ಉಲ್ಲಂಘನೆ ನಡೆದಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದಿವೆ.

ವಿಶ್ವವಿದ್ಯಾಲಯದ ಯಲಬುರ್ಗಾ ಸೇರಿದಂತೆ ವಿವಿಧ ಪಿ.ಜಿ ಕೇಂದ್ರಗಳಲ್ಲಿ ಅತಿಥಿ ಉಪನ್ಯಾಸಕರು ಹಾಗೂ ಇತರೆ ಬೋಧನಾ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಅರ್ಹ ಅಭ್ಯರ್ಥಿಗಳಿಗೆ ಅವಕಾಶ ದೊರಕಿಲ್ಲ ಎಂಬ ಆರೋಪಗಳನ್ನು ಅಭ್ಯರ್ಥಿಗಳು ಮುಂದಿಟ್ಟಿದ್ದಾರೆ. ಆಯ್ಕೆ ವೇಳೆ ಸ್ಪಷ್ಟ ಮಾನದಂಡಗಳನ್ನು ಅನುಸರಿಸದೇ ಕೆಲ ಅಭ್ಯರ್ಥಿಗಳಿಗೆ ಮಾತ್ರ ಆದ್ಯತೆ ನೀಡಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಲಾಗಿದೆ.

ಇದೇ ವೇಳೆ, ಯಲಬುರ್ಗಾ ಪಿ.ಜಿ ಕೇಂದ್ರದಲ್ಲಿ ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಹೊಸ ವಿವಾದವೂ ಉದ್ಭವಿಸಿದೆ. ನಿಯಮಾನುಸಾರ KSET/NET ಅಥವಾ ಸಂಬಂಧಿತ ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಬೇಕಿದ್ದರೂ, ಏಖಇಖ ಅರ್ಹತೆ ಇಲ್ಲದ ಅಭ್ಯರ್ಥಿಯನ್ನು ಅತಿಥಿ ಉಪನ್ಯಾಸಕರಾಗಿ ಆಯ್ಕೆ ಮಾಡಲಾಗಿದೆ ಎಂಬ ಆರೋಪಗಳು ಕೇಳಿಬಂದಿವೆ.

ಅಷ್ಟೇ ಅಲ್ಲದೆ, UGC ನಿಗದಿಪಡಿಸಿದ ಅರ್ಹತೆ ಇಲ್ಲದ ಅಭ್ಯರ್ಥಿಗಳನ್ನು ಪೂರ್ಣಕಾಲಿಕ ಉಪನ್ಯಾಸಕರಾಗಿ ಆಯ್ಕೆ ಮಾಡಲಾಗಿದೆ ಎಂಬ ಗಂಭೀರ ಆರೋಪಗಳೂ ಇದೀಗ ಚರ್ಚೆಗೆ ಗ್ರಾಸವಾಗಿವೆ. ಇದರಿಂದ ನೇಮಕಾತಿ ಪ್ರಕ್ರಿಯೆಯ ವಿಶ್ವಾಸಾರ್ಹತೆ ಹಾಗೂ ಅರ್ಹತಾ ಪರಿಶೀಲನೆ ಕುರಿತಾಗಿ ಪ್ರಶ್ನೆಗಳು ಉದ್ಭವಿಸಿವೆ.

"ಆಯ್ಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಪಾಡಲಾಗಿದೆಯೇ? ಅರ್ಹತಾ ಮಾನದಂಡಗಳನ್ನು ಸಮರ್ಪಕವಾಗಿ ಪರಿಶೀಲಿಸಲಾಗಿದೆಯೇ?" ಎಂಬ ಪ್ರಶ್ನೆಗಳನ್ನು ಅಭ್ಯರ್ಥಿಗಳು ಮತ್ತು ಶಿಕ್ಷಣ ವಲಯದ ಕೆಲವರು ಮುಂದಿಟ್ಟಿದ್ದಾರೆ.

ನೇಮಕಾತಿ ಸಂಬಂಧಿತ ಆಯ್ಕೆ ಪಟ್ಟಿ, ಸಂದರ್ಶನದಲ್ಲಿ ಪಡೆದ ಅಂಕಗಳು, ಅರ್ಹತಾ ದಾಖಲೆಗಳ ಪರಿಶೀಲನೆ ವಿವರಗಳನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು ಎಂದು ಅಭ್ಯರ್ಥಿಗಳು ಆಗ್ರಹಿಸಿದ್ದಾರೆ. ಜೊತೆಗೆ ನೇಮಕಾತಿ ಪ್ರಕ್ರಿಯೆಯ ಸಂಪೂರ್ಣ ಮಾಹಿತಿಯನ್ನು ಬಹಿರಂಗಗೊಳಿಸಿ ಗೊಂದಲ ನಿವಾರಣೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ನೇಮಕಾತಿಯಲ್ಲಿ ಯಾವುದೇ ನಿಯಮ ಉಲ್ಲಂಘನೆ ಅಥವಾ ಅರ್ಹತಾ ಮಾನದಂಡಗಳ ಉಲ್ಲಂಘನೆ ನಡೆದಿರುವುದು ದೃಢಪಟ್ಟಲ್ಲಿ ಸ್ವತಂತ್ರ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂಬ ಆಗ್ರಹವೂ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ. ಈ ಕುರಿತು ವಿಶ್ವವಿದ್ಯಾಲಯ ಆಡಳಿತ ಹಾಗೂ ಸಂಬಂಧಿತ ಅಧಿಕಾರಿಗಳು ಸ್ಪಷ್ಟನೆ ನೀಡಬೇಕೆಂಬ ಒತ್ತಾಯವೂ ಹೆಚ್ಚಾಗಿದೆ.

# ಎಸ್‌ಎಸ್‌ಎಲ್‌ಸಿ, ಪಿಯುಸಿ ಪ್ರತಿಭಾವಂತರು, ನಿವೃತ್ತ ನೌಕರರು ಹಾಗೂ ಆದರ್ಶ ಶಿಕ್ಷಕರಿಗೆ ಸನ್ಮಾನ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಕರ್ನಾಟಕ ರಾಜ್ಯ ಕ್ಷತ್ರಿಯ ಮರಾಠ ನೌಕರ ಸಂಘ, ಭಾಲ್ಕಿ ಘಟಕದ ಆಶ್ರಯದಲ್ಲಿ ನಗರದ ಪುರಭವನದಲ್ಲಿ ಶನಿವಾರ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಅತ್ಯುನ್ನತ ಸಾಧನೆ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳು, ಸೇವಾ ನಿವೃತ್ತಿ ಹೊಂದಿದ ಮರಾಠ ಸಮಾಜದ ನೌಕರರು ಮತ್ತು ಉತ್ತಮ ಶಿಕ್ಷಕರಿಗೆ ಸನ್ಮಾನ ಸಮಾರಂಭ ವಿಜೃಂಭಣೆಯಿಂದ ಜರುಗಿತು.

ಪೂಜ್ಯ ದಾದಾ ಮಹಾರಾಜ್ ನಗರಕರ ಅವರು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ, "ಶಿಕ್ಷಣವೇ ಸಮಾಜದ ಅಭಿವೃದ್ಧಿಯ ಮೂಲಾಧಾರ. ವಿದ್ಯಾರ್ಥಿಗಳು ಅಂಕಗಳ ಜೊತೆಗೆ ಉತ್ತಮ ಸಂಸ್ಕಾರ, ದೇಶಭಕ್ತಿ ಹಾಗೂ ಸಮಾಜಮುಖಿ ಚಿಂತನೆಗಳನ್ನು ಬೆಳೆಸಿಕೊಳ್ಳಬೇಕು" ಎಂದು ಕರೆ ನೀಡಿದರು.



ಖ್ಯಾತ ವೈದ್ಯ ಡಾ. ಗುಂಡೇರಾವ್ ಶೆಡೋಳೆ ಅವರು ಕಾರ್ಯಕ್ರಮ ಉದ್ಘಾಟಿಸಿ, ವಿದ್ಯಾರ್ಥಿಗಳ ಸಾಧನೆಯನ್ನು ಶ್ಲಾಘಿಸಿದರು. ಲೋಪಮುದ್ರ ಗ್ರೂಪ್ ಅಧ್ಯಕ್ಷ ಶುಭಾಷ್ ಶೆಡೋಳೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, "ವಿದ್ಯಾರ್ಥಿಗಳು ಉನ್ನತ ಗುರಿ ಇಟ್ಟುಕೊಂಡು ಆತ್ಮವಿಶ್ವಾಸದಿಂದ ಮುನ್ನಡೆಯಬೇಕು. ಶಿಕ್ಷಣದೊಂದಿಗೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಇಂದಿನ ಅಗತ್ಯ" ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಸಂದೀಪ್ ಉಮಾಜಿ ಅವರು ಸಮಾಜದ ಸಂಘಟನೆ ಮತ್ತು ಶೈಕ್ಷಣಿಕ ಪ್ರಗತಿಯ ಮಹತ್ವವನ್ನು ವಿವರಿಸಿದರು.

ಕರ್ನಾಟಕ ರಾಜ್ಯ ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ದತ್ತು ಕಾಟ್ಕರ್ ಪ್ರಾಸ್ತಾವಿಕವಾಗಿ ಮಾತನಾಡಿ, "ವಿದ್ಯಾರ್ಥಿಗಳು ಕೇವಲ ಅಂಕಗಳ ಹಿಂದೆ ಓಡದೆ ಶಿಸ್ತು, ಸಮಯಪ್ರಜ್ಞೆ, ಪರಿಶ್ರಮ ಹಾಗೂ ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಸೋಲು ಜೀವನದ ಅಂತ್ಯವಲ್ಲ, ಅದು ಯಶಸ್ಸಿನ ಮೊದಲ ಮೆಟ್ಟಿಲು. ನಿರಂತರ ಪ್ರಯತ್ನ, ಛಲ ಹಾಗೂ ಗುರು–ಹಿರಿಯರಿಗೆ ಗೌರವ ನೀಡಿದಾಗ ಮಾತ್ರ ಜೀವನದಲ್ಲಿ ಯಶಸ್ಸು ಸಾಧ್ಯ" ಎಂದು ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಸಂದೇಶ ನೀಡಿದರು. ಸಹದೇವ ಗೌಂಡಗಾವೆ ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಜಿತೇಂದ್ರ ಬಿರಾದಾರ್, ಬಾಲಿಕಾ ಉಮಾಜೀ, ಗೋವಿಂದರಾವ್ ಬಿರಾದಾರ್, ರಾಮರಾವ್ ಬಾಣ, ದಿಲೀಪ್ ಬಿರಾದರ್, ದತ್ತಾ ಬಿರಾದಾರ್, ವಿಠಲ ಬಿರಾದಾರ್, ನರಸಿಂಗ ಇಂಗಳೆ, ಸುಭಾಷ್ ಹುಲಸೂರೆ ಸೇರಿದಂತೆ ಸಮಾಜದ ಪ್ರಮುಖರು, ನೂರಾರು ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪೋಷಕರು ಉಪಸ್ಥಿತರಿದ್ದರು. ಸಾಧಕ ವಿದ್ಯಾರ್ಥಿಗಳು, ನಿವೃತ್ತ ನೌಕರರು ಹಾಗೂ ಆದರ್ಶ ಶಿಕ್ಷಕರನ್ನು ಶಾಲು, ಸ್ಮರಣಿಕೆ, ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಲಾಯಿತು.

# ಲಡಾಖಗೆ ಬೈಕ್ ಮೇಲೆ ಪ್ರವಾಸ ಮಾಡಿ ಇತಿಹಾಸ ಸೃಷ್ಟಿಸಿದ ರೋಹನ್

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ದೇಶದ ಅತ್ಯುನ್ನತ ಎತ್ತರದ ಪ್ರದೇಶವಾದ ಲಡಕಗೆ ಬೈಕ್ ಮೇಲೆ ಪ್ರವಾಸ ಕೈಗೊಂಡು ಗಮನಾರ್ಹ ಸಾಧನೆ ಮಾಡಿದ ಪಟ್ಟಣದ ಸ್ವಾತಿ ಗಣೇಶ್ ಐನಾಪುರ ಇವರ ಸುಪುತ್ರ ರೋಹನ್ ಐನಾಪುರ ಇವರಿಗೆ ರವಿವಾರ ಸನ್ಮಾನ ಸಮಾರಂಭದಲ್ಲಿ ಪಿಕೆಪಿಎಸ್ ನಿರ್ದೇಶಕ ರಾಶೀದ್ ಅಲಿ ಪಟೇಲ್ ಮಾತನಾಡಿ, ರೋಹನ ಐನಾಪುರ ಅವರು ಈ ವಿಶೇಷ ಸಾಧನೆಯ ಮೂಲಕ ವಿಶ್ವ ಗಿನ್ನಿಸ್ ದಾಖಲೆಗೆ ಸಂಬಂಧಿಸಿದ ಸಾಧನೆಯಲ್ಲಿ ಭಾಗಿಯಾಗಿ ಜಿಲ್ಲೆಯ ಹಾಗೂ ರಾಜ್ಯದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಈ ಸಾಧನೆ ಯುವಜನತೆಗೆ ಪ್ರೇರಣೆಯಾಗಿದ್ದು, ಪರಿಶ್ರಮ ಮತ್ತು ಧೈರ್ಯದಿಂದ ಯಾವುದೇ ಗುರಿಯನ್ನು ಸಾಧಿಸಬಹುದು ಎಂಬುದನ್ನು. ರೋಹನ್ ಐನಾಪುರ ತೋರಿಸಿದ್ದಾರೆ ಎಂದರು.




ಗಣೇಶ ಐನಾಪುರ ಮಾತನಾಡಿ, ಇಂತಹ ಸಾಧನೆ ಮಾಡಬೇಕಾದರೆ ಮನುಷ್ಯನಲ್ಲಿ ಧೈರ್ಯ ಮತ್ತು ಛಲ ಇರಬೇಕು ಅಂದಾಗ ಮಾತ್ರ ಏನಾದರೂ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದರು. ನಾನು ಕೂಡ 2018 ರಲ್ಲಿ ಲಡಕ್ ಪ್ರದೇಶಕ್ಕೆ ಹೋಗಿದ್ದೆ ಇಂದು ನನ್ನ ಮಗನ್ನು ಕೂಡ ಲಡಕ್ ಪ್ರದೇಶಕ್ಕೆ ಏನೇ ಸಮಸ್ಯೆಯಾಗದೆ ರೇವಣಸಿದ್ದೇಶ್ವರ ಹಾಗೂ ನಿಮ್ಮೆಲರ ಆಶೀರ್ವಾದದಿಂದ ಹೋಗಿ ಬಂದಿದ್ದಾನೆ ಎಂದರು.

ರೋಹನ್ ಗಣೇಶ ಐನಾಪುರ ಮಾತನಾಡಿ, ನನ್ನ ಈ ಸಾಧನೆಗೆ ನನ್ನ ತಂದೆಯವರ ಪ್ರೇರಣೆ ಬಹಳಷ್ಟು ಇತ್ತು ನನ್ನ ತಂದೆ ತಾಯಿ ಮತ್ತು ನಿಮ್ಮೆಲ್ಲರ ಆಶೀರ್ವಾದದಿಂದ ನಾನು ನೆಮ್ಮದಿಯಾಗಿ ಲಡಕ್ ಪ್ರದೇಶಕ್ಕೆ ಹೋಗಿ ಬಂದಿದ್ದೇನೆ ವಿಶ್ವದಲ್ಲಿಯೇ ಭೂಮಿ ಮತ್ತು ಆಕಾಶಕ್ಕೆ ಸುಮಾರು 19000 ಉದ್ದದ ವ್ಯತ್ಯಾಸದಲ್ಲಿ ನಾನು ಹೋಗಿದ್ದೇನೆ ಅಲ್ಲಿ ನನಗೆ ಆಕ್ಸಿಜನ್ ಸಮಸ್ಯೆಯೂ ಕೂಡ ಎದುರಾಯಿತು ಕೇವಲ ಅಲ್ಲಿ 5% ಆಕ್ಸಿಜನ್ ಮಾತ್ರ ಲಭ್ಯವಿತ್ತು ಆದರೂ ಕೂಡ ನಿಮ್ಮೆಲ್ಲರ ಹಾರೈಕೆಯಂತೆ ನಾನು ಯಾವುದೇ ರೀತಿಯ ಸಮಸ್ಯೆ ಆಗದಂತೆ ನೆಮ್ಮದಿಯಿಂದ ಹೋಗಿ ಬಂದಿದ್ದೇನೆ ಎಂದರು. ಈ ಸಂದರ್ಭದಲ್ಲಿ ಡಾ. ಸಂತೋಷ ಐನಾಪುರ, ಮಹೇಶ ಐನಾಪುರ, ಡಾ. ಬಿ.ಎನ್. ರೆಡ್ಡಿ, ಪ್ರಶಾಂತ ವಳಖಿಂಡಿ, ರಾಜಗೋಪಾಲ ಐನಾಪುರ, ದೀಪಕ್ ಕುದರಿ, ಚಿನ್ನು ಗುತ್ತೆದಾರ್ ಸೇರಿದಂತೆ ಐನಾಪುರ ಪರಿವಾರದವರು ಹಾಗೂ ಇತರರು ಉಪಸ್ಥಿತರಿದ್ದರು.

# ನಾಗರಾಳ : ಮೊಹರಂ ಆಚರಣೆ ಶಾಂತಿ ಸಭೆ

• ಮಲ್ಲಮ್ಮ ನುಡಿ ವಾರ್ತೆಮುದಗಲ್

ಸಮೀಪದ ನಾಗರಾಳ ಗ್ರಾಮದಲ್ಲಿ ಪಟ್ಟಣದ ಪೋಲಿಸ್ ಇಲಾಖೆ ವತಿಯಿಂದ ಮೊಹರಂ ಆಚರಣೆ ಶಾಂತಿ ಸಭೆ ಪಿ.ಎಸ್.ಐ ವೆಂಕಟೇಶ ಮಾಡಿಗೇರಿ ನೇತೃತ್ವದಲ್ಲಿ ರವಿವಾರ ಜರುಗಿತು.



ಶಾಂತಿ ಸಭೆಯಲ್ಲಿ ಮಾತನಾಡಿದ ಅವರು ಮೊಹರಂ ಆಚರಣೆ ಶಾಂತಿ ಹಾಗೂ ಸೌಹಾರ್ದತೆಯಿಂದ ಆಚರಿಸಬೇಕು. ಯಾವುದೇ ಅಹಿತಕರ ಘಟನೆ ಜರುಗದಂತೆ ಸಾರ್ವಜನಿಕರು ಜಾಗೃತರಾಗಿರಬೇಕು. ಕಾನೂನು ಸುವ್ಯವಸ್ಥೆ ಕಾಪಾಡುವುದು ಪ್ರತಿಯೊಬ್ಬರ ಕರ್ತವವಾಗಿದೆ. ವಿರೋಧವಾಗಿ ವರ್ತಿಸಿದವರಿಗೆ ಕಾನೂನು ಪ್ರಕಾರ ಸೂಕ್ತ ಕ್ರಮ ಜರುಗಿಸಲಾಗುವುದು. ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನಕಾರಿ ಸಂದೇಶ ಹರಡದಂತೆ ಎಚ್ಚರಿಕೆ ವಹಿಸಬೇಕು ಹಾಗೂ ನಮ್ಮ ಇಲಾಖೆಯೊಂದಿಗೆ ಕೈ ಜೋಡಿಸಲು ಸಾರ್ವಜನಿಕರೆಲ್ಲರೂ ಸಹಕಾರ ನೀಡಬೇಕೆಂದು ತಿಳಿಸಿದರು. ಶಾಂತಿ ಮತ್ತು ಸೌಹಾರ್ದತೆಯಿಂದ ಮೊಹರಂ ಆಚರಣೆ ಮಾಡುವ ಭರವಸೆ ಗ್ರಾಮಸ್ಥರು ನೀಡಿದರು.

ಮುಖಂಡರಾದ ಸಾಬಣ್ಣ, ದೇವಿಂದ್ರಪ್ಪ, ಹುಸೇನಸಾಬ್ ಹಾಗೂ ಪೊಲೀಸ್ ಸಿಬ್ಬಂದಿಗಳಾದ ಅಮರೇಶ ಹೆಚ್ ಸಿ, ಅನೀಲ ಹೆಚ್.ಸಿ ಸೇರಿದಂತೆ ಗ್ರಾಮ ಪಂಚಾಯಿತಿ ಸಿಬ್ಬಂದಿಗಳು ಹಾಗೂ ಗ್ರಾಮಸ್ಥರು ಇದ್ದರು.

# ಭಾಲ್ಕಿ ತಾಲೂಕು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಜೈರಾಜ ಪಾತ್ರೆ ಆಯ್ಕೆ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಭಾಲ್ಕಿ ತಾಲೂಕು ಘಟಕದ ಅಧ್ಯಕ್ಷರಾಗಿ ಜೈರಾಜ ಪಾತ್ರೆ ಇತ್ತೀಚಿಗೆ ಜಿಲ್ಲಾ ಘಟಕದ ವತಿಯಿಂದ ನಡೆದ ಗುಪ್ತವಾಗಿ ಮತದಾನ ಮಾಡುವ ಮೂಲಕ ಆಯ್ಕೆಯಾಗಿದ್ದಾರೆ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಸಂತೋಷ್ ಬಿ.ಜಿ. ಪಾಟೀಲ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ನೂತನವಾಗಿ ಆಯ್ಕೆಯಾದ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿಯವರಿಗೆ ಸನ್ಮಾನಿಸಿ ನಾಡೋಜ ಡಾ. ಬಸವಲಿಂಗ ಪಟ್ಟದೇವರು ಮಾತನಾಡಿ, ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘವು ತನ್ನದೇ ಆದ ಗೌರವಯುತ ಇತಿಹಾಸ ಮತ್ತು ಸಾಮಾಜಿಕ ಬದ್ಧತೆಯನ್ನು ಹೊಂದಿದ್ದು, ಪತ್ರಕರ್ತರು ಸದಾ ಸತ್ಯ, ನಿಷ್ಪಕ್ಷಪಾತತೆ ಹಾಗೂ ಜನಪರ ಮೌಲ್ಯಗಳಿಗೆ ಬದ್ಧರಾಗಿ ಕಾರ್ಯನಿರ್ವಹಿಸುವ ಮೂಲಕ ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡಬೇಕು ಎಂದರು.

ಪತ್ರಿಕೋದ್ಯಮವು ಕೇವಲ ವೃತ್ತಿಯಲ್ಲ, ಅದು ಸಮಾಜದ ಜವಾಬ್ದಾರಿಯಾಗಿದೆ. ಪತ್ರಕರ್ತರು ಸತ್ಯ ಮತ್ತು ನ್ಯಾಯಸಮ್ಮತ ಸುದ್ದಿಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು. ಸಮಾಜದ ಒಳಿತಿಗಾಗಿ ಕಾರ್ಯನಿರ್ವಹಿಸುವ ಪತ್ರಕರ್ತರು ಸದಾ ಜನರ ವಿಶ್ವಾಸ ಗಳಿಸುತ್ತಾರೆ ಎಂದು

ಪೂಜ್ಯಶ್ರೀ ಗುರುಬಸವ ಪಟ್ಟದೇವರು ಹಿರೇಮಠ ಸಂಸ್ಥಾನ ಭಾಲ್ಕಿರವರು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಅಶೋಕ ರಾಜೋಳೆ, ವಿಜಯಕುಮಾರ ಪರ್ಮಾ, ಚಂದ್ರಕಾಂತ ಬಿರಾದಾರ, ರಾಜೇಶ ಮುಗಟೆ, ಮಲ್ಲಿಕಾರ್ಜುನ ಪಾಟೀಲ, ಭದ್ರೇಶ ಸ್ವಾಮಿ, ಮಾಣಿಕ ಮರಖಲೆ, ದೀಪಕ ಠಮಕೆ, ದಿಲೀಪ ಶೇರಿಕಾರ, ಶಾಂತಯ್ಯಾಸ್ವಾಮಿ, ಚಂದ್ರಕಾಂತ ತಳವಾಡೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ನೂತನವಾಗಿ ಆಯ್ಕೆಯಾದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಘಟಕದ ಅಧ್ಯಕ್ಷ ಜೈರಾಜ ಪಾತ್ರೆ ಹಾಗೂ ಪ್ರಧಾನ ಕಾರ್ಯದರ್ಶಿ ಸಂತೋಷ ಬಿ.ಜಿ ಪಾಟೀಲ ರವರಿಗೆ ನಾಡೋಜ ಡಾ. ಬಸವಲಿಂಗ ಪಟ್ಟದೇವರು ಮತ್ತು ಪೂಜ್ಯ ಗುರುಬಸವ ಪಟ್ಟದೇವರು ಸನ್ಮಾನಿಸಿ ಗೌರವಿಸಿದರು.

# ಪತ್ರಕರ್ತರ ಸೇವೆ ಸಮಾಜದ ಕಣ್ಣು-ಕನ್ನಡಿ : ರಾಜಕುಮಾರ ಬಕ್ಕಾ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಪತ್ರಕರ್ತರು ಸಮಾಜದ ಕಣ್ಣು ಹಾಗೂ ಕನ್ನಡಿಯಂತೆ ಕಾರ್ಯನಿರ್ವಹಿಸುತ್ತಿದ್ದು, ಜನಸಾಮಾನ್ಯರ ಸಮಸ್ಯೆಗಳು, ಅಭಿವೃದ್ಧಿ ಕಾರ್ಯಗಳು ಮತ್ತು ಸಮಾಜದ ಆಗುಹೋಗುಗಳನ್ನು ನಿಷ್ಪಕ್ಷಪಾತವಾಗಿ ಜನರ ಮುಂದಿಡುವ ಮೂಲಕ ಪ್ರಜಾಪ್ರಭುತ್ವವನ್ನು ಬಲಪಡಿಸುತ್ತಾರೆ ಎಂದು ಹನುಮಾನ ದೇವಸ್ಥಾನ ಸಮಿತಿ ಅಧ್ಯಕ್ಷ ರಾಜಕುಮಾರ ಬಕ್ಕಾ ಅಭಿಪ್ರಾಯಪಟ್ಟರು.

ನಗರದ ಉಪನ್ಯಾಸಕರ ಬಡಾವಣೆಯ ಹನುಮಾನ ದೇವಸ್ಥಾನ ಸಭಾಂಗಣದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆ.ಯು.ಡಬ್ಲ್ಯು.ಜೆ) ಭಾಲ್ಕಿ ತಾಲೂಕು ಘಟಕದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಜೈರಾಜ್ ಪಾತ್ರೆ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದ ಸಂತೋಷ್ ಬಿ. ಪಾಟೀಲ ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು. ಪತ್ರಿಕೋದ್ಯಮವು ದೇಶದ ನಾಲ್ಕನೇ ಅಂಗವಾಗಿದ್ದು, ಸಮಾಜದಲ್ಲಿ ನಡೆಯುವ ಬೆಳವಣಿಗೆಗಳನ್ನು ಜನರಿಗೆ ತಲುಪಿಸುವ ಮಹತ್ತರ ಜವಾಬ್ದಾರಿಯನ್ನು ಪತ್ರಕರ್ತರು ಹೊತ್ತಿದ್ದಾರೆ. ಇಂದಿನ ದಿನಗಳಲ್ಲಿ ಪತ್ರಕರ್ತರ ಮೇಲಿನ ಹೊಣೆಗಾರಿಕೆ ಇನ್ನಷ್ಟು ಹೆಚ್ಚಾಗಿದ್ದು, ಜನಪರ ಹಾಗೂ ಸತ್ಯಾಧಾರಿತ ಸುದ್ದಿಗಳ ಮೂಲಕ ಸಮಾಜಕ್ಕೆ ಉತ್ತಮ ದಾರಿದೀಪವಾಗಬೇಕು ಎಂದು ಹೇಳಿದರು. ಸನ್ಮಾನ ಸ್ವೀಕರಿಸಿದ ಜೈರಾಜ್ ಪಾತ್ರೆ ಮತ್ತು ಸಂತೋಷ್ ಬಿ. ಪಾಟೀಲ ಮಾತನಾಡಿ, ತಮ್ಮ ಮೇಲೆ ವಿಶ್ವಾಸವಿಟ್ಟು ಜವಾಬ್ದಾರಿ ನೀಡಿದ ಸಂಘದ ಎಲ್ಲ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು. ಪತ್ರಕರ್ತರ ಹಕ್ಕುಗಳ ರಕ್ಷಣೆ, ವೃತ್ತಿಪರ ಅಭಿವೃದ್ಧಿ ಹಾಗೂ ಸಮಾಜಮುಖಿ ಪತ್ರಿಕೋದ್ಯಮಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ಸಮಿತಿಯ ಪದಾಧಿಕಾರಿಗಳಾದ ಅಶೋಕ್ ಬಾವಗೆ, ರಾಜಶೇಖರ ಚಿದ್ರಿ, ಎಸ್.ಎಂ. ಪಾಟೀಲ, ವಿಜಯಕುಮಾರ ಮಕರಳೆ, ಶರಣಪ್ಪ ಬಸನಾಳೆ, ಜಗನ್ನಾಥ ಕನ್ನಾಳೆ, ಪ್ರಕಾಶ್ ಮಾಶೆಟ್ಟೆ, ಅಶೋಕ್ ಮಡ್ಡೆ, ಅಶೋಕ್ ವಾಲೆ, ಬಸವರಾಜ ನೆಳಗೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಹಿರಿಯ ಪತ್ರಕರ್ತರಾದ ಅಶೋಕ್ ರಾಜೋಳೆ, ಕಾಶೆಪ್ಪ ಡೋಣಗಾಪೂರ್, ಹುಲೆಪ್ಪ ಹುಣಜೆ, ಜಯಕುಮಾರ ನಾಬೆರಿಯಾ, ಬಾಬುರಾವ್ ಬಸಗೆ, ಬಸವರಾಜ ಮಾಶೆಟ್ಟೆ, ಅನಿಲ್ ಲೋಖಂಡೆ ಸೇರಿದಂತೆ ಅನೇಕರು ನೂತನ ಪದಾಧಿಕಾರಿಗಳಿಗೆ ಶುಭ ಹಾರೈಸಿದರು.

# ಚಿಟಗುಪ್ಪ ತಾಲೂಕ ಪತ್ರಕರ್ತರ ಸಂಘದ ಕಿರೀಟ ಪಡೆದ ಕೃಷ್ಣ ಪಂಚಾಳ



• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ತಾಲೂಕು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಕೃಷ್ಣ ಪಂಚಾಳ ಪ್ರಧಾನ ಕಾರ್ಯದರ್ಶಿಯಾಗಿ ಸೈಯದ್ ಮುಸ್ತಫ್ ಖಾದ್ರಿ ಆಯ್ಕೆಯಾಗಿದ್ದಾರೆ. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಚುನಾವಣೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಆನಂದ ದೇವಪ್ಪ ಫಲಿತಾಂಶ ಘೋಷಿಸಿ, ಮಾತನಾಡಿದ ಅವರು, ಸಂಘವು ಸದಾ ಪತ್ರಕರ್ತರ ಹಿತಕ್ಕಾಗಿ ಕಾರ್ಯನಿರ್ವಹಿಸುತ್ತಿದ್ದು, ಸಂಘದ ವಿರುದ್ಧ ಯಾವುದೇ ಚಟುವಟಿಕೆಗಳನ್ನು ನಡೆಸದೆ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕೆಂದು ಹೇಳಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ ಸ್ವಾಮಿ ಮಾತನಾಡಿದರು. ಆಯ್ಕೆಯಾದವರನ್ನು ಸತ್ಕರಿಸಲಾಯಿತು. ಜಿಲ್ಲಾ ಉಪಾಧ್ಯಕ್ಷ ಪೃಥ್ವಿರಾಜ್ ಎಸ್., ಕಾರ್ಯದರ್ಶಿಗಳಾದ ಸಂತೋಷ ಚೆಟ್ಟಿ, ಜಿಲ್ಲಾ ಕಾರ್ಯಕಾರಿ ಸದಸ್ಯರಾದ ದುರ್ಯೋಧನ್ ಹುಗಾರ್, ಸುಧಾರಾಣಿ, ಓಂಕಾರ ಮಠಪತಿ, ಸಂಜೀವಕುಮಾರ್ ಜುನ್ನ, ಜಯಕುಮಾರ, ನಿಕಟಪೂರ್ವ ಅಧ್ಯಕ್ಷ ನವೀನ್ ಗಂಜಿ, ರಾಜಕುಮಾರ ಆರ್. ಹಡಪದ, ವಿದ್ಯಾಸಾಗರ ಕಟ್ಟಿಮನಿ, ಶ್ರೀಮಂತರಾವ ಇಂಚುರೇ, ಮೋಹಿಯೊದ್ದೀನ ಲಾಥೋಡಿ, ಅನೀಲಕುಮಾರ್ ಸಿಂಧೆ, ಮಂಜುನಾಥ ಚಿಂತಕೋಟಿ, ಸೈಯದ್ ಅಜೀಮ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ರಕ್ತದಾನವು ಜೀವ ಉಳಿಸುವ ಮಹಾದಾನ:ಡಾ.ಅಮರೇಗೌಡರ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜೂ. 15: ರಕ್ತದಾನವು ಜೀವ ಉಳಿಸುವ ಮಹಾದಾನವಾಗಿದ್ದು, ಪ್ರತಿಯೊಬ್ಬ ಆರೋಗ್ಯವಂತ ವ್ಯಕ್ತಿಯೂ ನಿಯಮಿತವಾಗಿ ರಕ್ತದಾನ ಮಾಡುವ ಮೂಲಕ ಸಮಾಜದ ಸೇವೆಯಲ್ಲಿ ಪಾಲ್ಗೊಳ್ಳಬೇಕೆಂದು ಭೀಮರಾಯನಗುಡಿ ಕೃಷಿ ಮಹಾವಿದ್ಯಾಲಯದ ಡೀನ್ ಡಾ. ಅಮರೇಗೌಡರ ಕರೆ ನೀಡಿದರು.

ಅವರು ಇತ್ತೀಚಿಗೆ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಕ್ತ ಕೇಂದ್ರ ಯಾದಗಿರಿ, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಯಾದಗಿರಿ, ಎನ್.ಸಿ.ಸಿ. ಘಟಕ ಹಾಗೂ ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ ಇವುಗಳ ಜಂಟಿ ಆಶ್ರಯದಲ್ಲಿ ಜೂನ್ 14 ರಂದು ಆಚರಿಸಲಾಗುವ ವಿಶ್ವ ರಕ್ತದಾನಿಗಳ ದಿನದ ಅಂಗವಾಗಿ ಯಾದಗಿರಿ ಜಿಲ್ಲೆಯ ಭೀಮರಾಯನಗುಡಿಯ ಕೃಷಿ ಮಹಾವಿದ್ಯಾಲಯದ ಪ್ರೇಕ್ಷಾಗೃಹದಲ್ಲಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಸ್ವಯಂಪ್ರೇರಿತ ರಕ್ತದಾನಿಗಳಿಗೆ ಕೃತಜ್ಞತೆ ಸಲ್ಲಿಸಲು ಮತ್ತು ರಕ್ತದಾನದ ಮಹತ್ವದ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಈ ದಿನವನ್ನು ಮೀಸಲಿಡಲಾಗಿದೆ. ನೋಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿ ಕಾರ್ಲ್ ಲ್ಯಾಂಡ್ ಸ್ಟೈನರ್ ಅವರ ಜನ್ಮದಿನದ ಅಂಗವಾಗಿ ಜೂನ್ 14 ರಂದು ಈ ದಿನವನ್ನು ಆಚರಿಸಲಾಗುತ್ತದೆಂದರು.




ಯಾದಗಿರಿ ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಸಂಜೀವಕುಮಾರ್ ಸಿಂಗ್ ರಾಯಚೂರಕರ್ ಮಾತನಾಡಿ, ರಕ್ತಕ್ಕೆ ಯಾವುದೇ ಕೃತಕ ಪರ್ಯಾಯವಿಲ್ಲ. ಹಾಗಾಗಿ ಅಪಘಾತಕ್ಕೊಳಗಾದವರು, ಗರ್ಭಿಣಿಯರು, ಶಸ್ತ್ರಚಿಕಿತ್ಸೆಗೆ ಒಳಗಾಗುವವರು ಹಾಗೂ ಥಲಸೇಮಿಯಾ ಮತ್ತು ಕ್ಯಾನ್ಸರ್ ರೋಗಿಗಳಿಗೆ ರಕ್ತದ ಅವಶ್ಯಕತೆ ನಿರಂತರವಾಗಿರುತ್ತದೆ. ಯುವಜನರು ಮತ್ತು ಸಾರ್ವಜನಿಕರು ರಕ್ತದಾನದ ಬಗೆಗಿನ ತಪ್ಪು ಕಲ್ಪನೆಗಳನ್ನು ನಿವಾರಿಸಿಕೊಂಡು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಬೇಕು" ಎಂದು ರಕ್ತದಾನದ ಅರ್ಹತಾ ಮಾನದಂಡಗಳು ಹಾಗೂ ಆರೋಗ್ಯಕರ ಪ್ರಯೋಜನಗಳ ಕುರಿತು ಮಾಹಿತಿ ನೀಡಿದರು.

ಸಮಾರಂಭದ ಅಂಗವಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಜಾಗೃತಿ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಇದೇ ಸಂದರ್ಭದಲ್ಲಿ ಹಲವು ಬಾರಿ ರಕ್ತದಾನ ಮಾಡಿದ ದಾನಿಗಳನ್ನು ಸನ್ಮಾನಿಸಲಾಯಿತು.

ರಕ್ತದಾನ ಶಿಬಿರದಲ್ಲಿ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗದವರು ಸ್ವಯಂಪ್ರೇರಿತರಾಗಿ ಭಾಗವಹಿಸಿದ್ದು, ಒಟ್ಟು 36 ಯೂನಿಟ್ ರಕ್ತವನ್ನು ಸಂಗ್ರಹಿಸಲಾಯಿತು. ಶಿಬಿರದಲ್ಲಿ ಆಯೋಜಿಸಲಾಗಿದ್ದ ಉಚಿತ ಕ್ಷ-ಕಿರಣ ಪರೀಕ್ಷೆಯ ಸೌಲಭ್ಯವನ್ನು ಒಟ್ಟು 78 ಜನರು ಪಡೆದುಕೊಂಡರು.

ಈ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಡಾ. ಪಿ. ಹೆಚ್. ಕುಹನೂರ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಲಕ್ಷ್ಮಿ ಮುಂಡಾಸ, ಪ್ರಭಾರ ಆರೋಗ್ಯ ಮೇಲ್ವಿಚಾರಣೆ ಅಧಿಕಾರಿ ತುಳಸಿರಾಮ ಚವಲಾಣ, ಪ್ರಭಾರ ಶಹಾಪುರ ತಾಲೂಕು ಆರೋಗ್ಯ ಅಧಿಕಾರಿ ಡಾ. ವಸುಧಾ ಕಟ್ಟಿ, ಏಡ್ಸ್ ನಿಯಂತ್ರಣ ಘಟಕದ ಜಿಲ್ಲಾ ಆಡಳಿತ ಸಹಾಯಕರಾದ ಅಂಬರೀಶ ಭೂತಿ ಹಾಗೂ ಮಹಾವಿದ್ಯಾಲಯದ ವಿದ್ಯಾರ್ಥಿಗಳು, ಎನ್.ಸಿ.ಸಿ. ಕೆಡೆಟ್‌ಗಳು ಸೇರಿದಂತೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆ, ಸ್ವಾಗತ ಮತ್ತು ವಂದನಾರ್ಪಣೆಯನ್ನು ಎನ್.ಸಿ.ಸಿ. ಅಧಿಕಾರಿಗಳಾದ ಡಾ. ಶರಣ ಭೂಪಾಲ ರೆಡ್ಡಿಯವರು ನೆರವೇರಿಸಿದರು.

## ಮೋಹರಂ ಹಬ್ಬ ಪ್ರಯುಕ್ತ ವಿವಿಧಡೆ ಸ್ವಚ್ಛತೆ



• ಮಲ್ಲಮ್ಮ ನುಡಿ ವಾರ್ತೆಮುದಗಲ್

ಮೊಹರಂ ಹಬ್ಬದ ಆಚರಣೆಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಸ್ವಚ್ಛತೆ ಕಾಪಾಡಲ ಪಟ್ಟಣದ ಪೌರಕಾರ್ಮಿಕರಿಂದ ವಿವಿಧಡೆ ಸ್ವಚ್ಛತಾ ಕಾರ್ಯ ಕಳೆದೆರಡು ದಿನಗಳಿಂದ ಜರುಗಿತು.

ಮೊಹರಂ ಆಚರಣೆಗೆ ದೇವರು ತೊಳೆಯುವ ಬಾವಿ, ರಸ್ತೆ ಇಕ್ಕೆಲದ ಬೆಳದ ಜಾಲಿಗಿಡಗಳ ತೆರವು, ಕಾಲುವೆ, ಕುಡಿಯುವ ನೀರಿನ ಗುಮ್ಮಿಗಳು, ಮೆರವಣಿಗೆ ಸಾಗುವ ವಿವಿಧ ಮಾರ್ಗಗಳು ಸೇರಿದಂತೆ ವಿವಿಧ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸ್ವಚ್ಛತೆಯನ್ನು ಕಾಪಾಡಲು ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ.

ನೈರ್ಮಲ್ಯ ಅಧಿಕಾರಿ ಝುಕೀಯಾ, ಆರಿಫ್ಫ್ ಉನ್ನಿಸ್ಸಾ, ನೀರಿನ ವಿಭಾಗ ಅಧಿಕಾರಿ ಬಸವರಾಜ ಮೇಟಿ, ವಾಟರ್ ಮ್ಯಾನ ಸಂಜೀವಪ್ಪ, ರಮೇಶ ಬಂಕದ, ವಿನಯಕುಮಾರ, ರಸೂಲ್ ಸಾಬ್, ಮೊಹಮ್ಮದ ಮುಜಾವರ್, ವಿನೋದ, ಮಂಜುನಾಥ್, ಸೇರಿದಂತೆ ಇತರರಿದ್ದರು.

## ಗುರು-ಶಿಷ್ಯರ ಬಾಂಧವ್ಯಕ್ಕೆ ಸಾಕ್ಷಿಯಾದ ಅಪರೂಪದ ಸನ್ಮಾನ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ತಾಲೂಕಿನ ಗಿಣಿಗೇರ ಸರ್ಕಾರಿ ಪ್ರೌಢಶಾಲೆಯಲ್ಲಿ 1996–97ರಿಂದ 1998–99ನೇ ಸಾಲಿನ ಹಳೆಯ ವಿದ್ಯಾರ್ಥಿಗಳ ಬಳಗದ ವತಿಯಿಂದ ಕೊಪ್ಪಳದ ಜೆ.ಕೆ. ಎಸ್. ಹೋಟೆಲ್ ನಲ್ಲಿ ನಿವೃತ್ತ ಕನ್ನಡ ಶಿಕ್ಷಕಿ ಕಾಶಿಬಾಯಿ ಹಾಗೂ ನಿವೃತ್ತ ವೃತ್ತಿ ಶಿಕ್ಷಣ ಶಿಕ್ಷಕ ಕೆ.ಎನ್. ಬಡಿಗೇರ್ ಅವರಿಗೆ ಅದ್ದೂರಿ ಸನ್ಮಾನ ಮತ್ತು ಅಭಿನಂದನಾ ಸಮಾರಂಭವನ್ನು ಹಮ್ಮಿಕೊಳ್ಳಲಾಯಿತು.



ಕಾರ್ಯಕ್ರಮದಲ್ಲಿ ಹಳೆಯ ವಿದ್ಯಾರ್ಥಿಗಳು ತಮ್ಮ ಗುರುಗಳಿಗೆ ಗೌರವ ಸೂಚಕವಾಗಿ ಹೂಮಳೆಗೈದು ವೇದಿಕೆಗೆ ಬರಮಾಡಿಕೊಂಡರು. ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಸಮಾರಂಭದಲ್ಲಿ ಮಾತನಾಡಿದ ನಿವೃತ್ತ ಶಿಕ್ಷಕ ಕೆ.ಎನ್. ಬಡಿಗೇರ್, "ಗುರುಗಳಾಗಿ ನಮ್ಮ ನಿಜವಾದ ಸಂತೋಷ ಮತ್ತು ಹೆಮ್ಮೆ ವಿದ್ಯಾರ್ಥಿಗಳ ಯಶಸ್ಸಿನಲ್ಲಿದೆ. ಇಂದು ನಮ್ಮ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿ ಸಮಾಜಕ್ಕೆ ಸೇವೆ ಸಲ್ಲಿಸುತ್ತಿರುವುದನ್ನು ನೋಡಿದಾಗ ನಮ್ಮ ಪರಿಶ್ರಮ ಸಾರ್ಥಕವಾಗಿದೆ ಎಂಬ ಭಾವನೆ ಮೂಡುತ್ತದೆ. ಇಂತಹ ವಿದ್ಯಾರ್ಥಿಗಳನ್ನು ರೂಪಿಸುವ ಅವಕಾಶ ಸಿಕ್ಕಿರುವುದು ನಮ್ಮ ಭಾಗ್ಯ" ಎಂದು ಹೇಳಿದರು.

ನಿವೃತ್ತ ಕನ್ನಡ ಶಿಕ್ಷಕಿ ಕಾಶಿಬಾಯಿ ಮಾತನಾಡಿ, "ವಿದ್ಯಾರ್ಥಿಗಳ ಯಶಸ್ಸೇ ಗುರುಗಳಿಗೆ ಸಿಗುವ ಅತ್ಯುತ್ತಮ ಗೌರವ. ಅವರು ಸಾಧಿಸಿರುವ ಎತ್ತರವನ್ನು ಕಂಡು ಮನಸ್ಸು ಸಂತೋಷ ಮತ್ತು ಹೆಮ್ಮೆಯಿಂದ ತುಂಬಿದೆ" ಎಂದು ತಿಳಿಸಿದರು.

ಹಳೆಯ ವಿದ್ಯಾರ್ಥಿಗಳು "ಜ್ಞಾನದ ದೀಪ ಹಚ್ಚಿದ ಗುರುಗಳೇ ನಮ್ಮ ಹೆಮ್ಮೆ" ಎಂದು ಗುರುವಂದನೆ ಸಲ್ಲಿಸಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಇದೇ ವೇಳೆ ಇಬ್ಬರು ನಿವೃತ್ತ ಶಿಕ್ಷಕರನ್ನು ಗೌರವಪೂರ್ವಕವಾಗಿ ಸನ್ಮಾನಿಸಿ ಅಭಿನಂದಿಸಲಾಯಿತು. ಸುಮಾರು 27 ವರ್ಷಗಳ ಬಳಿಕ ಒಂದೇ ವೇದಿಕೆಯಲ್ಲಿ ಸೇರಿದ್ದ ಹಳೆಯ ಸ್ನೇಹಿತರಲ್ಲಿ ಸಂಭ್ರಮ ಮನೆಮಾಡಿತ್ತು. ಶಾಲಾ ದಿನಗಳನ್ನು ನೆನೆದು ಹಲವರು ಭಾವುಕರಾದರು.

ವಿದ್ಯಾರ್ಥಿಗಳ ಜೀವನ ರೂಪಿಸುವಲ್ಲಿ ಮಹತ್ತರ ಕೊಡುಗೆ ನೀಡಿದ ಈ ಇಬ್ಬರು ಶಿಕ್ಷಕರ ಸೇವೆಯನ್ನು ಸ್ಮರಿಸಿ ಗೌರವಿಸಿದ ಕಾರ್ಯಕ್ರಮ ಗುರು–ಶಿಷ್ಯರ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸಿತು. ಕಾರ್ಯಕ್ರಮದಲ್ಲಿ ಹಳೆಯ ವಿದ್ಯಾರ್ಥಿಗಳು, ಶಿಕ್ಷಕರು, ಶಿಕ್ಷಣಾಭಿಮಾನಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಡಾ. ನಿಂಗಪ್ಪ ಕಂಬಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಗವಿಸಿದ್ದಪ್ಪ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

## ಸಮಾಜ ಸೇವೆಯಲ್ಲಿ ಭಾರತ ಭೂಷಣ ರಾಷ್ಟ್ರ ಪ್ರಶಸ್ತಿಗೆ ಸೋಮನಗೌಡ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಅಂತರಾಷ್ಟ್ರೀಯ ಹಿಂದೂ ಮಹಾಸಭಾ ಕರ್ನಾಟಕ ವತಿಯಿಂದ ದಿನಾಂಕ 24–06–2026 ರಂದು ಬಾಗಲಕೋಟೆಯ ಲಯನ್ಸ್ ಕ್ಲಬ್ ಸಭಾಭವನದಲ್ಲಿ ಆಯೋಜಿಸಲಾಗಿರುವ ಭಾರತ ಭೂಷಣ ರಾಷ್ಟ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕೊಪ್ಪಳದ ಸಮಾಜಸೇವಕ ಹಾಗೂ ವಿವಿಧ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಸೋಮನಗೌಡ ಹೊಗರನಾಳ ಅವರನ್ನು ಪ್ರಶಸ್ತಿಗೆ*ಆಯ್ಕೆ ಮಾಡಲಾಗಿದೆ. ಸಮಾಜ ಸೇವೆಯಲ್ಲಿ ಸಲ್ಲಿಸಿರುವ ಗಣನೀಯ ಕೊಡುಗೆ, ಜನಪರ ಕಾಳಜಿ ಹಾಗೂ



ಸಾಮಾಜಿಕ ಬದ್ಧತೆಯನ್ನು ಪರಿಗಣಿಸಿ ಈ ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು *ಅಂತರಾಷ್ಟ್ರೀಯ ಹಿಂದೂ ಮಹಾಸಭಾ ಕರ್ನಾಟಕದ ವಿದ್ಯಾರ್ಥಿ ಘಟಕದ ರಾಜ್ಯಾಧ್ಯಕ್ಷರಾದ ಸಾಗರ ಕಲಾದಗಿ ಅವರು ತಿಳಿಸಿದ್ದಾರೆ .

ಈ ಕುರಿತು ಪ್ರತಿಕ್ರಿಯಿಸಿದ ಸೋಮನಗೌಡ ಹೊಗರನಾಳ ಅವರು, "ಈ ಗೌರವವು ನನ್ನ ವೈಯಕ್ತಿಕ ಸಾಧನೆಯಲ್ಲ. ಇದು ನನ್ನ ಕುಟುಂಬದವರು, ಸ್ನೇಹಿತರು, ಸಮಾಜದ ಬಂಧುಗಳು, ಗುರು-ಹಿರಿಯರು ಹಾಗೂ ಪರಮ ಪೂಜ್ಯ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳವರ ಆಶೀರ್ವಾದದ ಫಲವಾಗಿದೆ. ನನ್ನನ್ನು ಸದಾ ಪ್ರೋತ್ಸಾಹಿಸಿ, ಬೆಂಬಲಿಸಿ, ಹಾರೈಸಿದ ಎಲ್ಲರಿಗೂ ನಾನು ಚಿರಋಣಿಯಾಗಿದ್ದೇನೆ" ಎಂದು ಕೃತಜ್ಞತೆ ವ್ಯಕ್ತಪಡಿಸಿದರು.

ಅಲ್ಲದೆ, ತಮ್ಮನ್ನು ಈ ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆ ಮಾಡಿದ ಅಂತರಾಷ್ಟ್ರೀಯ ಹಿಂದೂ ಮಹಾಸಭಾ ಕರ್ನಾಟಕದ ರಾಜ್ಯಾಧ್ಯಕ್ಷರಾದ ಶ್ರೀ ಸಾಗರ ಕಲದಗಿ ಅವರು ಹಾಗೂ ಎಲ್ಲಾ ಪದಾಧಿಕಾರಿಗಳಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಿದರು. ಈ ಪ್ರಶಸ್ತಿಯು ತಮ್ಮ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದ್ದು, ಸಮಾಜಮುಖಿ ಕಾರ್ಯಗಳಲ್ಲಿ ಇನ್ನಷ್ಟು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಪ್ರೇರಣೆ ನೀಡಿದೆ. ಮುಂದಿನ ದಿನಗಳಲ್ಲಿ ಜನಸೇವೆ ಹಾಗೂ ಸಮಾಜದ ಅಭಿವೃದ್ಧಿಗೆ ಹೆಚ್ಚಿನ ಕೊಡುಗೆ ನೀಡುವ ಸಂಕಲ್ಪವನ್ನು ಅವರು ವ್ಯಕ್ತಪಡಿಸಿದರು.

## ಅಧ್ಯಕ್ಷ , ಪ್ರಧಾನ ಕಾರ್ಯದರ್ಶಿ ಆಯ್ಕೆ



• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಘಟಕದ ಅಧ್ಯಕ್ಷರಾಗಿ ಮಾರ್ಥಂಡ ಜೋಶಿ, ಪ್ರಧಾನ ಕಾರ್ಯದರ್ಶಿಯಾಗಿ ಉದಯಕುಮಾರ ಮುಳೆ ಅವರು ಎರಡನೆ ಅವಧಿಗೆ ಅಯ್ಕೆಯಾಗಿದ್ದಾರೆ.

ಸಂಘದ ಜಿಲ್ಲಾಧ್ಯಕ್ಷರಾದ ಆನಂದ ದೇವಪ್ಪ ನೇತೃತ್ವದಲ್ಲಿ ಜಿಲ್ಲಾಪದಾಧಿಕಾರಿಗಳ ಸಮಕ್ಷಮದಲ್ಲಿ ಇಲ್ಲಿನ ತ್ರಿಪುರಾಂತ ಯಾತ್ರಿ ನಿವಾಸದಲ್ಲಿ ನಡೆದ ಸಭೆಯಲ್ಲಿ ಅಧ್ಯಕ್ಷ ಹಾಗೂ ಪ್ರಧಾನ ಕಾರ್ಯದರ್ಶಿ ಆಯ್ಕೆ ಗೌಪ್ಯ ಮತದಾನದ ಮೂಲಕ ಆಯ್ಕೆ ಜರುಗಿತು. ಆಯ್ಕೆ ನಂತರ ಜಿಲ್ಲಾಧ್ಯಕ್ಷರಾದ ಆನಂದ ದೇವಪ್ಪ ಮಾತನಾಡಿ, ಎಲ್ಲರನ್ನು ವಿಶ್ವಾಸಕ್ಕೆ ತೆಗೆದು–ಕೊಂಡು ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶಿವಕುಮಾರ ಸ್ವಾಮಿ ಮಾತನಾಡಿ ಸಂಘದ ನೀತಿ, ನಿಯಮಗಳನ್ನು ತಿಳಿಸಿದರು. ಜಿಲ್ಲಾ ಉಪಾಧ್ಯಕ್ಷರಾದ ಪ್ರಥ್ವಿರಾಜ ಎಸ್. ಜಿಲ್ಲಾ ಕಾರ್ಯದರ್ಶಿಗಳಾದ ಸಂತೋಷಕುಮಾರ ಚಟ್ಟಿ, ಜಿಲ್ಲಾ ಖಜಾಂಚಿ ಸುನೀಲಕುಮಾರ ಕುಲ್ಕರ್ಣಿ, ಜಿಲ್ಲಾ ಕಾರ್ಯಕರಿಣಿ ಸಮಿತಿ ಸದಸ್ಯರಾದ ಗುರುನಾಥ ಗಡ್ಡೆ ಹಾಗೂ ಶ್ರೀಕಾಂತ ಪಾಟೀಲ್ ಸಮಕ್ಷಮದಲ್ಲಿ ಸಭೆ ಜರುಗಿತು.

ಸದಸ್ಯರಾದ ರಾಜೇಂದ್ರ ಗೋಖಲೆ, ಮಾಣಿಕ ಭುರೆ, ಡಿ. ಕೆ. ಪ್ರಹ್ಲಾದ. ಪ್ರದೀಪ ವಿಸಾಜಿ, ವೀರಶೆಟ್ಟಿ. ಕಲ್ಯಾಣರಾವ ಮದರಗಾಂಕರ್, ನೈಮೊದ್ದಿನ್ ಚಾಬುಕಸವಾರ್, ಮಲ್ಲಿಕಾರ್ಜುನ ಬಂಡೆ, ವಿರಶೆಟ್ಟಿ ಮಲಶೆಟ್ಟಿ, ಶಿವಪುತ್ರ ಪಾಟೀಲ್, ಎಂ.ಡಿ. ಖುತಬೊದ್ದಿನ್, ಖಾಜಾ ಸರ್ತಾಜೋದ್ದಿನ್, ಧನರಾಜ ರಾಜೋಳೆ, ಪತ್ರಕರ್ತರಾದ ಶಿವಕುಮಾರ ಮಠಪತಿ, ಆದಿತ್ಯ ಗಜರೆ, ಮೊಹ್ಮದ ಮಿಯಾ, ವಸೀಮ್ ಸೆರಿದಂತೆ ಅನೇಕರು ಉಪಸ್ಥಿತರಿದ್ದರು.

## ಪ್ರತಿಭಾ ಪುರಸ್ಕಾರ -ಸಾದಕರಿಗೆ ಸನ್ಮಾನ

• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ



ಇಲ್ಲಿನ ಅನುಭವ ಮಂಟಪ ಆವರಣದಲ್ಲಿ ಜರುಗಿದ ಅಖಿಲ ಕರ್ನಾಟಕ ಹೂಗಾರ ಮಹಾಸಭಾ ಜಿಲ್ಲಾ ಘಟಕ ಬೀದರ್ ಹಾಗೂ ತಾಲೂಕಾ ಹೂಗಾರ ಸಮಾಜದ ವತಿಯಿಂದ ಏರ್ಪಡಿಸಿದ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭ ಕಾರ್ಯಕ್ರಮವನ್ನು ಶಾಸಕರಾದ ಶರಣು ಸಲಗರ ಅವರು ಉದ್ಘಾಟಿಸಿ ಮಾತನಾಡಿ ಈ ಕ್ಷೇತ್ರದಲ್ಲಿ ಹೂಗಾರ ಸಮುದಾಯದ ಅಭಿವೃದ್ಧಿಗೆ ಪೂರಕವಾಗಿ ಹೂಗಾರ ಮಾದಯ್ಯ ಶರಣರ ಹೆಸರಿನಲ್ಲಿ ಒಂದು ಸುಸಜ್ಜಿತ ಭವನ ನಿರ್ಮಾಣ ಮಾಡಲು ಹಾಗೂ ಅದಕ್ಕೆ ಬೇಕಾದ ನಿವೇಶನ ಒದಗಿಸಲು ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಆಶ್ವಾಸನೆ ನೀಡಿದರು. ಅಖಿಲ ಕರ್ನಾಟಕ ಹೂಗಾರ ಮಹಾಸಭಾ ರಾಜ್ಯ ಅಧ್ಯಕ್ಷರಾದ ಶಂಕರ ಹೂಗಾರ ಮಾತನಾಡಿ ಬಸವರಾಜ್ ಬೊಮ್ಮಾಯಿ ಅವರ ಅವಧಿಯಲ್ಲಿ ಹೂಗಾರ ಅಭಿವೃದ್ಧಿ ನಿಗಮ ಘೋಷಣೆಯಾಗಿತ್ತು ಆದರೆ ಕಾಂಗ್ರೆಸ್ ಸರ್ಕಾರದಲ್ಲಿ ಅದು ಅನುಷ್ಠಾನಗೊಳ್ಳಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಬಸವಣ್ಣನವರ ಜೊತೆಗೆ ಕಾಯಕ ಮಾಡಿದ ಶರಣ ಹೂಗಾರ ಮಾದಯ್ಯ ಅವರಿಗೆ ನ್ಯಾಯ ನೀಡುವ ಕೆಲಸ ಆಗಬೇಕಾಗಿದೆ ಇತಿಹಾಸದಲ್ಲಿ ಕಲ್ಯಾಣ ಕ್ರಾಂತಿಗೆ ಎಲ್ಲಾ ಶರಣರಂತೆ ಹೂಗಾರ ಮಾದಯ್ಯ ಅವರಿಗೂ ಸರ್ಕಾರ ಸೂಕ್ತ ಗೌರವ ದೊರೆಯುವಂತೆ ಒತ್ತಾಯಿಸಿದರು. ಕಾರ್ಯಕ್ರಮದಲ್ಲಿ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ಹಾಗೂ ಐಐಟಿ ಎಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಶಿವಕುಮಾರ್ ಕುಲಾರಿ ದುರ್ಯೋಧನ ಹೂಗಾರ್ ಸವಿತಾ ಹೂಗಾರ್ ಅವರನ್ನು ಸನ್ಮಾನಿಸಲಾಯಿತು. ನೇತೃತ್ವವನ್ನು ಪೂಜ್ಯಶ್ರೀ ಶಿವಾನಂದ ಸ್ವಾಮಿಗಳು ವಹಿಸಿದರು. ಅಧ್ಯಕ್ಷತೆ ಜಿಲ್ಲಾಧ್ಯಕ್ಷ ರಾಜಕುಮಾರ ಹೂಗಾರ ಮತ್ತು ಕಟ್ಟಿ ರಾಜ್ಯ ಸಂಘಟನಾ ಕಾರ್ಯದರ್ಶಿ ಅಶೋಕ್ ಹೂಗಾರ ಜಿಲ್ಲಾ ಗೌರವಾಧ್ಯಕ್ಷ ರೇವಣಪ್ಪ ಹೂಗಾರ. ರಾಜ್ಯ ಸದಸ್ಯ ಕಾಶೀನಾಥ್ ಹೂಗಾರ. ತಾಲೂಕು ಅಧ್ಯಕ್ಷರಾದ ವಿಠ್ಠಲ ಹೂಗಾರ. ತಾಲೂಕ ಅಧ್ಯಕ್ಷ ಪ್ರವೀಣ್ ಹೂಗಾರ. ಚಟುಗುಪ್ಪ ತಾಲೂಕ ಅಧ್ಯಕ್ಷ ಸೂರ್ಯಕಾಂತ್ ಮೈಲಾರಿ. ಕಮಲನಗರ್ ತಾಲೂಕ ಅಧ್ಯಕ್ಷರಾದ ಪ್ರಭಾಕರ್ ಹೂಗಾರ. ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಹೂಗಾರ. ವಿಜಯ್ ಕುಮಾರ್ ಹೂಗಾರ. ರಾಜೇಂದ್ರ ಹೂಗಾರ. ಗೌರ್ ಸಂಚಾಲನೆ ಸಂತೋಷ್ ಹೂಗಾರ. ದಿಲೀಪ್ ಹೂಗಾರ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಕಳಕಪ್ಪ ಕಂಬಳಿ ಹಾಗೂ ಈರಪ್ಪ ಕುಡಗುಂಟಿ ಇಂದ ಬಿ.ಕೆ ಹರಿಪ್ರಸಾದ್ ಭೇಟಿ-ಕಾಂಗ್ರೆಸ್ಸಿಗರಲ್ಲಿ ಮುಜುಗರ

• ಮಲ್ಲಮ್ಮ ನುಡಿ ವಾರ್ತೆ ಕುಕನೂರು

ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿ ಎಂದು ಹೇಳಿಕೊಳ್ಳುವ ಕಳಕಪ್ಪ ಕಂಬಳಿ ಹಾಗೂ ಅವರ ಸಹಚರರಾದ ಈರಪ್ಪ ಕುಡಗುಂಟಿ ಎರಡು ದಿನಗಳ ಹಿಂದೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷ ಬಿಕೆ ಹರಿಪ್ರಸಾದ್ ಅವರನ್ನು ಭೇಟಿ ಮಾಡಿ ಶುಭ ಕೋರಿರುವುದು ಕ್ಷೇತ್ರಾದ್ಯಂತ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಮುಜುಗರವನ್ನುಂಟು ಮಾಡಿದೆ ಎಂದು ಯಲಬುರ್ಗಾ ಹಾಗೂ ಕುಕುನೂರ್ ಬ್ಲಾಕ್ ಕಾಂಗ್ರೆಸ್ ಪ್ರಕಟಣೆ ಹೊರಡಿಸಿದೆ.



ಕಳಕಪ್ಪ ಕಂಬಳಿ ಮತ್ತು ಈರಪ್ಪ ಕುಡುಗುಂಟಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷ ಬಿಕೆ ಹರಿಪ್ರಸಾದ್ ಅವರನ್ನು ಭೇಟಿ ಮಾಡಿ ಶುಭ ಕೋರಿದ್ದು ನಮಗೆ ಅಭ್ಯಂತರವೇನಿಲ್ಲ ಇದು ಸೌಜನ್ಯ ಬೇಟಿಗೆ ಸೀಮಿತವಾಗಿದ್ದಲ್ಲಿ ಒಳ್ಳೆಯದು ಇಲ್ಲದಿದ್ದಲ್ಲಿ ಕ್ಷೇತ್ರದ ನಿಷ್ಠಾವಂತ ಕಾರ್ಯಕರ್ತರು ಮುಜುಗರ ಅನುಭವಿಸುವ ಪರಿಸ್ಥಿತಿ ಎದುರಾಗಿದೆ ಎಂದು ತಿಳಿಸಿದ್ದು. ಇವರಿಬ್ಬರು ಈ ಹಿಂದೆ ಕಾಂಗ್ರೆಸ್ ಪಕ್ಷದ ಶಾಸಕರಾದ ಬಸವರಾಜ ರಾಯರೆಡ್ಡಿ ಅವರಿಂದ ಎಲ್ಲಾ ಅಧಿಕಾರವನ್ನು ಅನುಭವಿಸಿ 2020 ರಿಂದ ಭಾರತೀಯ ಜನತಾ ಪಕ್ಷದೊಂದಿಗೆ ಗುರುತಿಸಿಕೊಂಡು ಕಳೆದ 2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಪರವಾಗಿ ಮತಯಾಚನೆ ಮಾಡಿರುತ್ತಾರೆ ಆನಂತರ ಕಾಂಗ್ರೆಸ್ ಸರ್ಕಾರ ರಚನೆಗೊಂಡ ನಂತರ ಅಧಿಕಾರದ ದುರಾಸೆ ಹಾಗೂ ತಮ್ಮ ಸ್ವಂತ ವ್ಯವಹಾರಗಳ ಲಾಭಕ್ಕೋಸ್ಕರ ಕಾಂಗ್ರೆಸ್ ಪಕ್ಷದ ಕೆಲವು ನಾಯಕರೊಂದಿಗೆ ಗುರುತಿಸಿಕೊಂಡು ಸ್ಥಳೀಯ ಶಾಸಕರ ಬಗ್ಗೆ ಹಾಗೂ ಪಕ್ಷದ ಬಗ್ಗೆ ಅಪಪ್ರಚಾರ ಮಾಡುತ್ತ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ಮುಜುಗರವನ್ನುಂಟು ಮಾಡುತ್ತಿದ್ದಾರೆ.

ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಮತದಾರರು ತುಂಬಾ ಪ್ರಜ್ಞಾವಂತರಾಗಿದ್ದು ಇಂತಹ ರಾಜಕೀಯ ನಾಯಕರುಗಳ ಮಾತಿಗೆ ಮರಳಾಗುವುದು ಅಸಾಧ್ಯ ಆದರೂ ಸಹ ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಇಂತಹ ವ್ಯಕ್ತಿಗಳ ಅಪಪ್ರಚಾರ ಗಳಿಗೆ ಕಿವಿಗೊಡದ ಪಕ್ಷದ ಹಾಗೂ ಕ್ಷೇತ್ರದ ಸರ್ವಾಂಗಿಣ ಅಭಿವೃದ್ಧಿಗೆ ಎಲ್ಲರೂ ಒಗ್ಗಟ್ಟಾಗಿ ಶಾಸಕ ಬಸವರಾಜ ರಾಯರೆಡ್ಡಿ ಅವರೊಂದಿಗೆ ಕೈಜೋಡಿಸಲು ವಿನಂತಿಸಲಾಗಿದೆ ಎಂದು ಯಲಬುರ್ಗಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆರಿಬಸಪ್ಪ ನಿಡುಗುಂದಿ, ಕುಕನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನುಮಂತ ಗೌಡ ಚಂಡೂರ, ವಕ್ತಾರರಾದ ಸಂಗಮೇಶ ಗುತ್ತಿ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

## ಬಸವಕಲ್ಯಾಣದ ಪಾವಿತ್ರ್ಯ ಕಾಪಾಡಲು ಕ್ರಮಕ್ಕೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಬಸವಣ್ಣನವರ ತತ್ವ–ಸಿದ್ಧಾಂತಗಳ ನೆಲೆಬೀಡಾದ ಬಸವಕಲ್ಯಾಣದ ಪಾವಿತ್ರ್ಯ ಹಾಗೂ ಗೌರವವನ್ನು ಕಾಪಾಡುವ ನಿಟ್ಟಿನಲ್ಲಿ ಬಸವಪರ ಸಂಘಟನೆಗಳ ಮುಖಂಡರು ಮತ್ತು ವಿವಿಧ ಮಠಾಧೀಶರು ಸಚಿವ ಈಶ್ವರ ಖಂಡ್ರೆ ಅವರಿಗೆ ಮನವಿ ಸಲ್ಲಿಸಿದರು. ಬಸವಕಲ್ಯಾಣವು ವಿಶ್ವಗುರು ಬಸವಣ್ಣನವರು ಸಮಾನತೆ, ಮಾನವೀಯತೆ ಮತ್ತು ಸಾಮಾಜಿಕ ನ್ಯಾಯದ ಸಂದೇಶವನ್ನು ಸಾರಿದ ಐತಿಹಾಸಿಕ ಕ್ಷೇತ್ರವಾಗಿದೆ. ಇಂತಹ ಪವಿತ್ರ ಸ್ಥಳದಲ್ಲಿ ನಡೆಯಲಿರುವ ಕೆಲ ಕಾರ್ಯಕ್ರಮಗಳು ಬಸವತತ್ವದ ಆಶಯಗಳಿಗೆ ವಿರುದ್ಧವಾಗಿರುವ ಆತಂಕ ವ್ಯಕ್ತವಾಗಿದ್ದು, ಈ ಕುರಿತು ಸರ್ಕಾರ ಸೂಕ್ತ ಗಮನ ಹರಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಜಾಗತಿಕ ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಉಪಾಧ್ಯಕ್ಷ ಬಸವರಾಜ ಧನ್ನೂರು ಮಾತನಾಡಿ, ಬಸವಪರ ಸಂಘಟನೆಗಳ ಭಾವನೆಗಳನ್ನು ಸಚಿವರ ಗಮನಕ್ಕೆ ತಂದರು. ಬಸವಣ್ಣನವರ ವಿಚಾರಧಾರೆಗೆ ಧಕ್ಕೆಯಾಗದಂತೆ ಹಾಗೂ ಬಸವಕಲ್ಯಾಣದ ಐತಿಹಾಸಿಕ ಮಹತ್ವ ಉಳಿಯುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಮನವಿ ಸಲ್ಲಿಸುವ ಸಂದರ್ಭದಲ್ಲಿ ಭಾಲ್ಕಿ ಹಿರೇಮಠದ ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರು, ಗೋತ್ರಾದ ಪ್ರಭುದೇವ ಸ್ವಾಮೀಜಿ, ಉರಿಲಿಂಗಪದ್ದಿ ಮಠದ ಪಂಚಾಕ್ಷರಿ ಸ್ವಾಮೀಜಿ, ಅಂಬಿಗರ ಚೌಡಯ್ಯ ಮಠದ ರತ್ನಕಾಂತ ಶಿವಯೋಗಿಗಳು ಸೇರಿದಂತೆ ವಿವಿಧ ಮಠಗಳ ಪೂಜ್ಯರು ಹಾಗೂ ಬೀದರ್, ಕಲಬುರಗಿ ಜಿಲ್ಲೆಗಳ ಬಸವಪರ ಸಂಘಟನೆಗಳ ಪದಾಧಿಕಾರಿಗಳು ಮತ್ತು ಮುಖಂಡರು ಉಪಸ್ಥಿತರಿದ್ದರು. ಸಚಿವ ಈಶ್ವರ ಖಂಡ್ರೆ ಅವರು ಮನವಿಯನ್ನು ಸ್ವೀಕರಿಸಿ, ವಿಷಯವನ್ನು ಪರಿಶೀಲಿಸಿ ಕಾನೂನು ಚೌಕಟ್ಟಿನಡಿ ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



# ಹತ್ತಿ ನಾಟಿ ಯಂತ್ರದಿಂದ ದುಬಾರಿ ಕೂಲಿಕಾರರ ಸಮಸ್ಯೆ ತಪ್ಪಿಸಿ: ಪ್ರಕಾಶ್ ಚೌಹಾಣ್

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಜೂ 15 : ಹತ್ತಿ ನಾಟಿ ಯಂತ್ರಗಳು ಹತ್ತಿ ಬೀಜಗಳನ್ನು ನಿಖರವಾದ ಆಳ ಮತ್ತು ಸಾಲುಗಳಲ್ಲಿ ಬಿತ್ತನೆ ಮಾಡಲು ಬಳಸುವ ಅತ್ಯುತ್ತಮ ಕೃಷಿ ಸಾಧನಗಳಾಗಿವೆ. ಇವು ದುಬಾರಿ ಕೂಲಿಕಾರರ ಸಮಸ್ಯೆಯನ್ನು ತಪ್ಪಿಸಿ, ಬೀಜದಿಂದ ಬೀಜಕ್ಕೆ ಹಾಗೂ ಸಾಲಿನಿಂದ ಸಾಲಿಗೆ ಸರಿಯಾದ ಅಂತರವನ್ನು ಕಾಯ್ದುಕೊಳ್ಳಲು ನೆರವಾಗುತ್ತವೆ ಎಂದರು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಪ್ರಕಾಶ್ ಚೌಹಾಣ್ ಅವರು ಹೇಳಿದರು.

ಜೂನ್ 15ರ ಸೋಮವಾರ ದಂದು ರಾಯಚೂರು ತಾಲೂಕಿನ ಮಿಟಿಮಲ್ಕಾಪುರ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಹತ್ತಿ ಉತ್ಪಾದಕತೆ ಮಿಷನ್ ಯೋಜನೆಯ ಕ್ಷೇತ್ರ ಪ್ರಾತ್ಯಕ್ಷಿಕೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರವು 5,659 ಕೋಟಿ ರೂ. ವೆಚ್ಚದಲ್ಲಿ ಹತ್ತಿ ಉತ್ಪಾದಕತೆ ಮಿಷನ್ ಯೋಜನೆಯನ್ನು ಜಾರಿಗೊಳಿಸಿದೆ. ಯೋಜನೆಯು 2026ರಿಂದ 31ರವರೆಗೆ ಮಹತ್ವಾಕಾಂಕ್ಷೆಯ ಯೋಜನೆಯು ಹತ್ತಿ ಇಳುವರಿ ಹೆಚ್ಚಿಸಲು ಮತ್ತು ರೈತರ ಆದಾಯವನ್ನು ವೃದ್ಧಿಸಲು ವೈಜ್ಞಾನಿಕ ಹಾಗೂ ತಾಂತ್ರಿಕ ಬೆಂಬಲವನ್ನು ಒದಗಿಸುತ್ತದೆ ಎಂದರು.



2031ರ ವೇಳೆಗೆ ಹತ್ತಿ ಉತ್ಪಾದಕತೆಯನ್ನು ಪ್ರತಿ ಹೆಕ್ಟೇರ್‌ಗೆ 440 ಕೆ.ಜಿ ಯಿಂದ 755 ಕೆ.ಜಿ.ಗೆ ಹೆಚ್ಚಿಸುವುದು. ಹೆಚ್ಚಿನ ಇಳುವರಿ ನೀಡುವ, ಹವಾಮಾನ ವೈಪರೀತ್ಯ ಮತ್ತು ಕೀಟಗಳನ್ನು ತಡೆದುಕೊಳ್ಳ ಬಲ್ಲ ಬೀಜಗಳ ಅಭಿವೃದ್ಧಿ, ದಾರಗಳು ಉದ್ದವಾಗಿರುವ ಮತ್ತು ಬಲವಾಗಿರುವ ಹತ್ತಿ ಉತ್ಪಾದನೆಗೆ ಹೆಚ್ಚಿನ ಒತ್ತು ನೀಡುವ ಮೂಲಕ ದೇಶದ 14 ರಾಜ್ಯಗಳ 140 ಜಿಲ್ಲೆಗಳ ಸುಮಾರು 32 ಲಕ್ಷ ರೈತರಿಗೆ ತರಬೇತಿ ಮತ್ತು ಆಧುನಿಕ ಕೃಷಿ ತಂತ್ರಜ್ಞಾನಗಳ ಮೂಲಕ ನೆರವು ನೀಡಲಾಗುತ್ತದೆ ಎಂದರು.

ಹತ್ತಿ ಬೆಳೆಯ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಮಿಷನ್ ಹತ್ತಿ ಯೋಜನೆಯನ್ನು 2026–27 ಸಾಲಿನಲ್ಲಿ ಜಾರಿಗೊಳಿಸಲಾಗಿದೆ. ಈ ಯೋಜನೆಯಡಿ ಹತ್ತಿ ಬೆಳೆಯನ್ನು ಅಧಿಕ ಸಾಂದ್ರತೆ ಪದ್ಧತಿಯಲ್ಲಿ ನಾಟಿ ಮಾಡಬೇಕು. ಸಾಲಿನಿಂದ ಸಾಲಿಗೆ 90 ಸೇ.ಮಿ ಅಂತರ ಗಿಡ ದಿಂದ ಗಿಡ್ಡಕ್ಕೆ 15 ಸೇ.ಮಿ ಅಂತರ ಕಾಪಾಡಬೇಕು. ಈ ಅಂತರ ಮಟ್ಟವನ್ನು ಅತ್ಯಂತ ನಿಖರತೆಯಿಂದ ನಾಟಿ ಮಾಡುವಲ್ಲಿ ಈ ಹೊಸ ಉಪಕರಣ ವಾದ ವಾಯು ಚಾಲಿತ ಬಿತ್ತನೆ ಯಂತ್ರದ ಮೂಲಕ ನಾಟಿ ಮಾಡಬಹುದಾಗಿದೆ ಎಂದರು.

ಇದೇ ಸಂದರ್ಭದಲ್ಲಿ ರಾಯಚೂರು ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕಿ ದೀಪ ಎಲ್., ಕೃಷಿ ವಿಜ್ಞಾನಿ ಡಾ.ಭೀಮಣ್ಣ, ಐಎಟಿ ಸಂಸ್ಥೆಯ ಆರ್.ಎ.ಪಾಟೀಲ್, ಪ್ರಗತಿ ಪರ ರೈತ ಸಿದ್ದನಗೌಡ ಸೇರಿದಂತೆ ಕೃಷಿ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ರೈತರು ಇದ್ದರು.

## ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಆರ್ಥಿಕ ನೇರ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಜೂ 15 : ಕೈಮಗ್ಗ ಮತ್ತು ಜವಳಿ ಇಲಾಖೆಯ ನೇಕಾರ ಸಮ್ಮಾನ್ ಯೋಜನೆಯಡಿ 2026–27ನೇ ಸಾಲಿಗೆ ಕೈಮಗ್ಗ ನೇಕಾರಿಕೆ ಹಾಗೂ ಇತರೆ ಕೈಮಗ್ಗ ನೇಕಾರಿಕೆ ವೃತ್ತಿಯನ್ನು ಹೊಂದಿದ ನೇಕಾರರಿಗೆ ವಾರ್ಷಿಕವಾಗಿ 5000 ರೂ. ಆರ್ಥಿಕ ನೇರವನ್ನು ಡಿಬಿಟಿ ಮೂಲಕ ನೀಡಲಾಗುತ್ತಿದೆ.2025–26ನೇ ಸಾಲಿನಲ್ಲಿ ನೇಕಾರ ಸಮ್ಮಾನ್ ಯೋಜನೆಯಡಿ 5000 ರೂ. ಆರ್ಥಿಕ ನೇರವನ್ನು ಪಡೆದ ನೇಕಾರರು ಪ್ರಸ್ತುತ ಸಾಲಿನಲ್ಲಿ ಕಡ್ಡಾಯವಾಗಿ ಪ್ರಧಾನಮಂತ್ರಿ ಜಿವನ್ ಜ್ಯೋತಿ ಭೀಮಾ ಯೋಜನೆ (ಪಿಎಮ್‌ಜೆಜೆಬಿವೈ) ಹಾಗೂ ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ (ಪಿಎಮ್‌ಎಸ್‌ಬಿವೈ) ಗಳಡಿ ನೋಂದಾಯಿಸಿ ಕೊಳ್ಳಬೇಕಾಗಿರುತ್ತದೆ.2026–27ನೇ ಸಾಲಿನ ನೇಕಾರ ಸಮ್ಮಾನ್ ಯೋಜನೆಯಡಿ ಹೊಸದಾಗಿ ಅರ್ಜಿಯನ್ನು ಜೂನ್ 30ರ ಸಂಜೆ 5ಗಂಟೆಣಟಿಜಜಜಿಟಿಜಜಯೊಳಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ರಾಯಚೂರು–584101 ಅಥವಾ ದೂರವಾಣಿ ಸಂಖ್ಯೆ: 08532–233429ಗೆ ಕಚೇರಿಯ ಸಮಯದಲ್ಲಿ ಸಂಪರ್ಕ ಮಾಡಬಹುದಾಗಿದೆ ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಸ ಸಂಗ್ರಹಣೆ ಹಾಗೂ ನರೇಗಾ ಯೋಜನೆಗಳ ಪರಿಶೀಲನೆ



• ಮಲ್ಲಮ್ಮ ನುಡಿ ವಾರ್ತೆ ಕುಕನೂರ

ಇಂದು ಕೊಪ್ಪಳ ಜಿಲ್ಲಾ ಪಂಚಾಯತ್ ನಿರ್ದೇಶಕರಾದ ಖ.ಓ ಕಾಂಬ್ಳೆ ಅವರು ತಳಕಲ್ ಗ್ರಾಮ ಪಂಚಾಯತ ಕಾರ್ಯಾಲಯಕ್ಕೆ ಭೇಟಿ ನೀಡಿ ಸ್ವಚ್ಛ ಭಾರತ ಮಿಷನ್ ವಾಹನ ಚಾಲನೆ ಹಾಗೂ ಕಸ ಸಂಗ್ರಹಣೆ, ನರೇಗಾ ಯೋಜನೆಗಳ ಪರೀಶೀಲನೆ ಮಾಡಿದರು ನಂತರ ಭಾನಾಪೂರ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೊಮಲಾಪೂರ ಗ್ರಾಮದಲ್ಲಿ ಪ್ರಾರಂಭವಾಗಿದ್ದ ನರೇಗಾ ನಾಲಾ ಸುಧಾರಣೆ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕೂಲಿಕಾರರೊಂದಿಗೆ ಸಂವಾದ ನಡೆಸಿದರು ನಂತರ ರೋಜಗಾರ ದಿನಾಚರಣೆ ಕಾರ್ಯಕ್ರಮದಲ್ಲಿ ಕೂಲಿಕಾರರಿಗೆ ಯೋಜನೆಯಡಿ ದೊರಕುವ ಹಕ್ಕುಗಳ ಕುರಿತು ಮಾಹಿತಿ ನೀಡಿ ಯೋಜನೆಯಡಿ ನೀಡುವ ಕೂಲಿ ಪಡೆಯಬೇಕಾದರೆ ಕನಿಷ್ಠ ಅಳತೆಯ ಕೆಲಸ ಮಾಡಲು ಸಲಹೆ ನೀಡಿದರು. ಎಲ್ಲರೂ ಕಡ್ಡಾಯವಾಗಿ ಓಒಒಖ ಹಾಜರಾತಿ ಹಾಕಲು ಸುಚಿಸಿದರು. ನಂತರ ತಳಕಲ್ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸಮುದಾಯ ಶೌಚಾಲಯ ಕಾಮಗಾರಿ ತಳಬಾಳ ಗ್ರಾಮದಲ್ಲಿ ಈಊಖಿಅ ಮತ್ತು ಖಘಒ ಕಾಮಗಾರಿಗಳ ಸ್ಥಳ ಪರಿಶೀಲನೆ ಮಾಡಿದರು.

ಸ್ಥಳದಲ್ಲಿ ತಳಕಲ್ ಗ್ರಾಮ ಪಂಚಾಯತಿಯ ಪಿ.ಡಿ.ಓ ವೀರನಗೌಡ್ರ ಚೆನ್ನವೀರಗೌಡ್ರ, ಭಾನಾಪೂರ ಗ್ರಾಮ ಪಂಚಾಯತಿ ಪಿ.ಡಿ.ಓ ರಮೇಶ್ ತಿಮ್ಮಾರಡ್ಡಿ, ಜಿಲ್ಲಾ ಪಂಚಾಯತ ಖಃಒ ಸಮಾಲೋಚಕಿ ಬಸಮ್ಮ ಹುಡೇದ್ ತಾಂತ್ರಿಕ ಸಂಯೋಜಕ ಸುರೇಶ್ ದೇಸಾಯಿ, ಐ.ಇ.ಸಿ ಸಂಯೋಜಕ ಲಕ್ಷ್ಮಣ ಕೆರಳ್ಳಿ, ತಾಅಮತ್ರಿಕ ಸಹಾಕರು, ಗ್ರಾಮ ಪಂಚಾಯತಿ ಸಿಬ್ಬಂದಿಗಳು.

## ಫಿಟ್‌ನೆಸ್ ಇಲ್ಲದ ವಾಹನಗಳ ಮೇಲೆ ದಾಳಿ:117 ಪ್ರಕರಣ ದಾಖಲು




• ಮಲ್ಲಮ್ಮ ನುಡಿ ವಾರ್ತೆ ಬೀದರ

ಜೂನ ತಿಂಗಳಿಂದ ಜಿಲ್ಲೆಯಲ್ಲಿ ಶಾಲೆಗಳು ಆರಂಭವಾಗಿರುವ ಹಿನ್ನೆಲೆ ಬೀದರ ಪ್ರಾದೇಶಿಕ ಸಾರಿಗೆ ಇಲಾಖೆಯಿಂದ ಹಿರಿಯ ಮೋಟಾರು ವಾಹನ ನಿರೀಕ್ಷಕರು ಮತ್ತು ಮೋಟಾರು ವಾಹನ ನಿರೀಕ್ಷರರ ತಂಡವನ್ನು ರಚಿಸಾಗಿದೆ. ಎಂದು ಬೀದರ ಪ್ರಾದೇಶಿಕ ಸಾರಿಗೆ ಅಧಿಕಾರಿ ಮಹ್ಮದಜಾಫರ್ ಸಾದಿಕ ಅವರು ಈ ತಂಡಗಳು ಜಿಲ್ಲೆಯ ನಾನಾ ಕಡೆಗಳಲ್ಲಿ ಕಳೆದ ಒಂದು ವಾರದಿಂದ ಶಾಲಾ ವಾಹನಗಳ ಮೇಲೆ ದಾಳಿ ನಡೆಸಲಾಗಿದೆ. ಇನ್ಶೂರೆನ್ಸ್, ಪರ್ಮಿಟ್, ಟ್ಯಾಕ್ಸ್ ಹಾಗೂ ಫಿಟ್‌ನೆಸ್ ಇಲ್ಲದೆ ರಸ್ತೆಯಲ್ಲಿ ತಿರುಗಾಡುತ್ತಿದ್ದ ಶಾಲಾ ವಾಹನಗಳಿಗೆ ದಾಳಿ ನಡೆಸಿರುವ ಬೀದರ ಪ್ರಾದೇಶಿಕ ಸಾರಿಗೆ ಇಲಾಖೆಯ ಅಧಿಕಾರಿಗಳು 20 ವಾಹನಗಳನ್ನು ಜಪ್ತಿ ಮಾಡಿ, 8,04,728ರೂಪಾಯಿ ಹೆಚ್ಚಿನ ದಂಡವನ್ನು ವಸೂಲಿ ಮಾಡಿದ್ದಾರೆ. ಇದೇ ವೇಳೆ ವಿವಿಧ ಶಾಲೆಗಳ ವಾಹನಗಳಿಗೆ ದಾಖಲೆಗಳು ಇಲ್ಲದಕಾರಣ ಒಟ್ಟು 93 ಮತ್ತು ಇತರೆ ವಾಹನ ಗಳ 117 ಪ್ರಕರಣಗಳನ್ನು ದಾಖಲಿಸಲಾಗಿದೆ. ಈ ಎಲ್ಲ ವಾಹನಗಳಿಂದ ದಂಡ ಹಾಗೂ ತೆರಿಗೆ ರೂಪದಲ್ಲಿ 8,04,728 ರೂಪಾಯಿಗಳನ್ನು ವಸೂಲಿ ಮಾಡಿದ್ದು ಸರಕಾರಕ್ಕೆ ತುಂಬಲಾಗಿದೆ. ಶಾಲಾ ವಾಹನಗಳಿಗೆ ಕಾಲ ಕಾಲಕ್ಕೆ ತೆರಿಗೆ ಭರಿಸಬೇಕು.



ಇನ್ಸುರೆನ್ಸ್ ಮಾಡಿಸಬೇಕು. ಫಿಟ್‌ನೆಸ್ ಮಾಡಿಸದ ಬಳಿಕವೇ ವಾಹನವನ್ನು ರಸ್ತೆಗೆ ಬಿಡಬೇಕು ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳು ಶಾಲೆಗಳ ಮುಖ್ಯಸ್ಥರಿಗೆ ಸೂಚನೆಗಳನ್ನು ನೀಡಿದರು.

ಬೀದರ ಜಿಲ್ಲೆಯಲ್ಲಿನ ಶಾಲಾ, ಕಾಲೇಜುಗಳ ವಾಹನಗಳ ಮೇಲಿನ ತಪಾಸಣೆ ಮುಂದೊರೆಯಲಿದೆ. ಶಾಲೆ, ಕಾಲೇಜುಗಳ ವಾಹನಗಳ ದಾಖಲಾತಿಗಳನ್ನು ಸರಿಯಾಗಿ ಇಟ್ಟುಕೊಳ್ಳಬೇಕು. ದಾಖಲೆ ನವೀಕರಣ ಮಾಡಿಸಿಕೊಳ್ಳಬೇಕು. ಒಂದು ವೇಳೆ ಸೂಕ್ತ ದಾಖಲೆಗಳು ಇಲ್ಲದೆ ವಾಹನಗಳನ್ನು ರಸ್ತೆಗೆ ತೆಗೆದುಕೊಂಡು ಬಂದರೆ ಕೂಡಲೇ ಅಂತಹ ವಾಹನವನ್ನು ಜಪ್ತಿ ಮಾಡಲಾಗುವುದು. ಎಂದು ಬೀದರ ಪ್ರಾದೇಶಿಕ ಸಾರಿಗೆ ಅಧಿಕಾರಿ ಮಹ್ಮದಜಾಫರ್ ಸಾದಿಕ ಅವರು ತಿಳಿಸಿದ್ದಾರೆ .ವಿದ್ಯಾರ್ಥಿಗಳ ಸುರಕ್ಷತೆಯೇ ನಮ್ಮ ಆದ್ಯ ಕರ್ತವ್ಯವಾಗಿದೆ.

# ಕಮಲನಗರದಲ್ಲಿ ಖಾಸಗಿ ಶಾಲಾ ಆಡಳಿತ ಮಂಡಳಿ ಸಭೆ: ಸಾಧಕರಿಗೆ ಪ್ರತಿಭಾ ಪುರಸ್ಕಾರ ಸನ್ಮಾನ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಪಟ್ಟಣದ ಪ್ರಸಿದ್ಧ 'ದಿ ಗೋಲ್ಡನ್ ವ್ಯಾಲಿ ಇಂಟರ್ ನ್ಯಾಷನಲ್ ಪಬ್ಲಿಕ್ ಶಾಲೆ'ಯಲ್ಲಿ ಭಾನುವಾರ ಕಲ್ಯಾಣ ಕರ್ನಾಟಕ ಅನುದಾನ ರಹಿತ ಖಾಸಗಿ ಶಾಲಾ ಆಡಳಿತ ಮಂಡಳಿಯ ಔರಾದ್ ತಾಲ್ಲೂಕು ಘಟಕದ ವತಿಯಿಂದ ಮಹತ್ವದ ಸಾಮಾನ್ಯ ಸಭೆ ಹಾಗೂ ನೂತನ ಪದಾಧಿಕಾರಿಗಳ ಚರ್ಚಾಕೂಟ ಹಮ್ಮಿಕೊಳ್ಳಲಾಗಿತ್ತು. ಇದೇ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಸಾಧಕರನ್ನು ಗುರುತಿಸಿ, ಸಂಘಟನೆಯ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಸಾಧಕರಿಗೆ ಗೌರವ ಸನ್ಮಾನ ಔರಾದ್ ತಾಲ್ಲೂಕು ಘಟಕದ ಅಧ್ಯಕ್ಷರಾದ ಗುರುನಾಥ ದೇಶಮುಖ ಅವರ ನೇತೃತ್ವದಲ್ಲಿ ನಡೆದ ಈ ಸಮಾರಂಭದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆ ಮುನ್ನಡೆಸಿದ ಲಕ್ಷ್ಮೀಕಾಂತ ಅಚ್ಚೆಗಾಂವೆ, ಬಾಲಾಜಿ ಫಿರಂಗೆ ಹಾಗೂ ಸತೀಷ ಸಿಂಧೆ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ, ಶಾಲು ಹೊದಿಸಿ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು."ಸೌಲಭ್ಯ ಪಡೆಯಲು ಸಂಘಟನೆ ಅತ್ಯಗತ್ಯ" : ಬಸವರಾಜ ಶೇಟಕಾರ್ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಜಿಲ್ಲಾ ಉಪಾಧ್ಯಕ್ಷರಾದ ಬಸವರಾಜ ಶೇಟಕಾರ, ಪ್ರಸ್ತುತ ದಿನಮಾನಗಳಲ್ಲಿ ಅನುದಾನ ರಹಿತ ಖಾಸಗಿ ಶಾಲೆಗಳನ್ನು



ಮುನ್ನಡೆಸುವುದು ಅತ್ಯಂತ ಸವಾಲಿನ ಮತ್ತು ಕಷ್ಟಕರವಾದ ಸಂಗತಿಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಗಣ್ಯರ ಉಪಸ್ಥಿತಿ

ಸಭೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಗುರುನಾಥ ರೆಡ್ಡಿ, ಕಮಲನಗರ ತಾಲ್ಲೂಕು ಘಟಕದ ಅಧ್ಯಕ್ಷರಾದ ಸಂಜೀವಕುಮಾರ ಕಂಠಾಳೆ, ಪ್ರವೀಣ ಬಿರಾದಾರ, ಮನೋಜಕುಮಾರ ಹಿರೇಮಠ, ಬಾಲಾಜಿ ಫಿರಂಗೆ, ಸಂಜೀವಕುಮಾರ ಬಿರಾದಾರ, ಲಕ್ಷ್ಮೀಕಾಂತ ಅಚ್ಚೆಗಾಂವೆ, ರಾಜಕುಮಾರ ಹಮೀಲಪುರೆ, ಆರ್‌ಕೆ ಪಾಟೀಲ, ಧನಾಜಿ ಕುಡ್ಲೆ, ಸೂರ್ಯಕಾಂತ ಬಿರಾದಾರ, ಸತೀಷ ಸಿಂಧೆ ಹಾಗೂ ಸಿಎಂ ಗಳಗೆ ಸೇರಿದಂತೆ ಮುಖಂಡರು ಮತ್ತು ಶಿಕ್ಷಣ ಸಂಸ್ಥೆಗಳ ಪ್ರಮುಖರು ಉಪಸ್ಥಿತರಿದ್ದರು.

"ಶಾಲೆಗಳ ಅಭಿವೃದ್ಧಿ, ಎದುರಿಸುತ್ತಿರುವ ಕುಂದುಕೊರತೆಗಳ ನಿವಾರಣೆ, ಆಧುನಿಕ ಕಟ್ಟಡಗಳ ನಿರ್ಮಾಣ ಮತ್ತು ತಂತ್ರಜ್ಞಾನ ಆಧಾರಿತ ಅತ್ಯಾಧುನಿಕ ಪರಿಕರಗಳನ್ನು ಬಳಸಿಕೊಂಡು ಶಿಕ್ಷಣ ಸಂಸ್ಥೆಗಳನ್ನು ಉತ್ತಮವಾಗಿ ಕಟ್ಟಲು ಈಗ ದೊಡ್ಡ ಅವಕಾಶಗಳಿವೆ. ಆದರೆ, ಇವೆಲ್ಲವೂ ಸಾಧ್ಯವಾಗಬೇಕಾದರೆ ಬಲಿಷ್ಠ ಸಂಘಟನೆ ಬೇಕು. ಆಡಳಿತ ಮಂಡಳಿಗಳು ಒಗ್ಗಟ್ಟಾಗಿ ಒಕ್ಕೂಟದ ಮೂಲಕ ಸಂಘ ರಚಿಸಿಕೊಂಡರೆ, ಸರ್ಕಾರ ಹಾಗೂ ಜಿಲ್ಲಾಡಳಿತದಿಂದ ಸಿಗುವ ವಿವಿಧ ಸೌಲಭ್ಯ ಹಾಗೂ ಸವಲತ್ತುಗಳನ್ನು ಸುಲಭವಾಗಿ ಪಡೆದುಕೊಳ್ಳಬಹುದು."

– ಬಸವರಾಜ ಶೇಟಕಾರ, ಜಿಲ್ಲಾ ಉಪಾಧ್ಯಕ್ಷರು

## ಇನ್ನರ್ ವೀಲ್ ಸಂಸ್ಥೆಯಿಂದ ಸ್ಯಾನಿಟರಿ ಪ್ಯಾಡ್ ಯಂತ್ರಗಳ ಅಳವಡಿಕೆ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಇನ್ನರ್ ವೀಲ್ ಕ್ಲಬ್ ಕೊಪ್ಪಳ ವತಿಯಿಂದ ಶ್ರೀ ಗವಿಸಿದ್ದೇಶ್ವರ ಗುರುಕುಲ ವಿದ್ಯಾರ್ಥಿನಿಯರ ಪದವಿ ಪೂರ್ವ ವಸತಿ ಕಾಲೇಜು, ಕಾಟ್ರಳ್ಳಿಯಲ್ಲಿ ಆರು ಸ್ಯಾನಿಟರಿ ಪ್ಯಾಡ್ ಇನ್ಸಿನರೇಟರ್ (ಬರ್ನಿಂಗ್) ಯಂತ್ರಗಳನ್ನು ಅಳವಡಿಸಲಾಯಿತು. ಈ ಯಂತ್ರಗಳನ್ನು ಸಂಸ್ಥೆಯ ದಾನಿಗಳಾದ ಮಧು ಶೆಟ್ಟರ್, ಸುವರ್ಣ ಶೆಟ್ಟರ್, ಪ್ರತಿಭಾ ಹಿರೇಮಠ, ವಿದ್ಯಾ ಶರಣಪ್ಪ ಸಜ್ಜನ, ಪಾಷಾ ಕಾಟನ್ ಹಾಗೂ ಸುಶೀಲ ಹತ್ತಿ ಅವರ ಸಹಕಾರದಿಂದ ಕೊಡುಗೆಯಾಗಿ ನೀಡಲಾಯಿತು. ವಿದ್ಯಾರ್ಥಿನಿಯರ ಆರೋಗ್ಯ, ಸ್ವಚ್ಛತೆ, ಸುರಕ್ಷತೆ ಹಾಗೂ ಶಿಸ್ತುಬದ್ಧ ವಾತಾವರಣವನ್ನು ಉತ್ತೇಜಿಸುವ ಉದ್ದೇಶದಿಂದ ಈ ಯಂತ್ರಗಳನ್ನು ಅಳವಡಿಸಲಾಗಿದೆ.



ಕೊಪ್ಪಳದ "ಪ್ಯಾಡ್ ವುಮನ್" ಎಂದೇ ಖ್ಯಾತರಾಗಿರುವ ಭಾರತಿ ಗುಡ್ಲಾನೂರ್ ಅವರ ಮಾರ್ಗದರ್ಶನದಲ್ಲಿ ಈ ಆರು ಯಂತ್ರಗಳನ್ನು ಸ್ಥಾಪಿಸಲಾಯಿತು. ಅವರು ವಿದ್ಯಾರ್ಥಿನಿಯರಿಗೆ ಯಂತ್ರಗಳ ಉಪಯೋಗದ ಬಗ್ಗೆ ಮಾಹಿತಿ ನೀಡುವುದರ ಜೊತೆಗೆ ಮುಟ್ಟಿನ ಆರೋಗ್ಯ, ಸ್ವಚ್ಛತೆ ಹಾಗೂ ಅದರ ಮಹತ್ವದ ಕುರಿತು ಅರಿವು ಮೂಡಿಸಿದರು. ಒಟ್ಟು 62,000 ವೆಚ್ಚದಲ್ಲಿ ಅಳವಡಿಸಲಾದ ಈ ಯಂತ್ರಗಳು ಬಳಸಿದ ಸ್ಯಾನಿಟರಿ ಪ್ಯಾಡ್‌ಗಳ ಸುರಕ್ಷಿತ ಹಾಗೂ ಪರಿಸರ ಸ್ನೇಹಿ ವಿಲೇವಾರಿಗೆ ಸಹಕಾರಿಯಾಗಿದ್ದು, ವಿದ್ಯಾರ್ಥಿನಿಯರ ಉತ್ತಮ ಆರೋಗ್ಯ ಮತ್ತು ಶುಚಿತ್ವವನ್ನು ಖಚಿತಪಡಿಸುತ್ತವೆ.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಮಧು ಶೆಟ್ಟರ್ ಅವರು ಮಾತನಾಡಿ, "ಮುಟ್ಟು ಎನ್ನುವುದು ಹೆಣ್ಣಿನ ಸಹಜ ಪ್ರಕ್ರಿಯೆಯಾಗಿದ್ದು, ಇದರ ಬಗ್ಗೆ ಯಾವುದೇ ಸಂಕೋಚ ಹೊಂದುವ ಅಗತ್ಯವಿಲ್ಲ. ಪ್ರತಿಯೊಬ್ಬ ಹೆಣ್ಣು ಮಗು ಸ್ವಚ್ಛತೆ–ಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ವಿದ್ಯಾರ್ಥಿನಿಯರು ಉತ್ತಮವಾಗಿ ವಿದ್ಯಾಭ್ಯಾಸ ಮಾಡಿ ಉತ್ತಮ ಫಲಿತಾಂಶ ಪಡೆಯಬೇಕು ಹಾಗೂ ತಮ್ಮ ತಂದೆ–ತಾಯಿಗಳಿಗೆ ಹೆಮ್ಮೆಯ ಮಕ್ಕಳಾಗಬೇಕು" ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಡಾ.ರಾಧಾ ಕುಲಕರ್ಣಿ, ಸುಮಂಗಲ ಹಂಚಿನಾಳ, ಕೋಮಲ ಕುದುರಿಮೋತಿ, ಇನ್ನರ್ ವೀಲ್ ಸಂಸ್ಥೆಯ ಮಾಜಿ ಅಧ್ಯಕ್ಷೆಯರು, ಪದಾಧಿಕಾರಿಗಳು, ಸದಸ್ಯೆಯರು, ಯಂತ್ರಗಳನ್ನು ದಾನ ಮಾಡಿದ ದಾನಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಸಮುದಾಯದ ಸಂಘಟನೆಗಾಗಿ ಒಂದಾಗಿ ಕಾರ್ಯನಿರ್ವಹಿಸಿ : ಸಂಗಮೇಶ ಗುತ್ತಿ

• ಮಲ್ಲಮ್ಮ ನುಡಿ ವಾರ್ತೆ ಕುಕನೂರ

ಸರ್ಕಾರದ ಸೌಲಭ್ಯ ಪಡೆಯಲು ಸಂಘಟನೆ ಅವಶ್ಯವಾಗಿದ್ದು, ಬಣಜಿಗ ಸಮಾಜ ಬಾಂಧವರು ಸಣ್ಣ– ಪುಟ್ಟ ಭಿನ್ನಾಭಿಪ್ರಾಯ ಬದಿಗೊತ್ತಿ ಗ್ರಾಮ ಮಟ್ಟದಿಂದ ಸಮಾಜದ ಸಂಘಟನೆಗೆ ಒತ್ತು ನೀಡಬೇಕು' ಎಂದು ಸಮಾಜದ ಯುವ ಮುಖಂಡ ಸಂಗಮೇಶ್ ಗುತ್ತಿ ಹೇಳಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಭಾನುವಾರ ನಡೆದ ಸಮಾಜದ ಸಭೆಯಲ್ಲಿ ನೂತನ ನಗರ ಘಟಕಡದ ಪದಾಧಿಕಾರಿಗಳನ್ನು ಆಯ್ಕೆ ಮಾಡಿ ಮಾತನಾಡಿದರು.

'ಬಣಜಿಗ ಸಮಾಜದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆ ಸಂಘಟನೆ ಶ್ರಮಿಸಬೇಕು. ಯುವಪೀಳಿಗೆಯಲ್ಲಿ ಸಂಘಟನಾತ್ಮಕ ಶಕ್ತಿ



ವೃದ್ಧಿಸುವುದಕ್ಕೆ ನೂತನ ಪದಾಧಿಕಾರಿಗಳು ಮುತುವರ್ಜಿವಹಿಸಬೇಕು' ಎಂದು ಹೇಳಿದರು. ನೂತನ ಅಧ್ಯಕ್ಷ ರವಿ ನಾಲ್ವಾಡ ಮಾತನಾಡಿ, 'ಸಮಾಜ ನೀಡಿರುವ ಜವಾಬ್ದಾರಿಯನ್ನು ಸಮರ್ಪಕವಾಗಿ ನಿಭಾಯಿಸುತ್ತೇನೆ, ಹಿರಿಯರ ಮಾರ್ಗದರ್ಶನ, ಯುವಕರ ಸಲಹೆಗಳೊಂದಿಗೆ ಸಮಾಜದಲ್ಲಿ ಬಣಜಿಗ ಸಮುದಾಯದ ಗೌರವ ಹೆಚ್ಚಿಸಲು ಪ್ರಯತ್ನ ನಡೆಸುತ್ತೇನೆ' ಎಂದರು.

ಪದಾಧಿಕಾರಿಗಳ ಆಯ್ಕೆ: ಬಣಜಿಗ ಸಮಾಜ ಕ್ಷೇಮಾಭಿವೃದ್ಧಿ ಸಂಘದ ನಗರ ಘಟಕದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ರವಿ ನಾಲ್ವಾಡ (ಅಧ್ಯಕ್ಷ), ನಂದೀಶಪ್ಪ ಗುತ್ತಿ (ಗೌರವಾಧ್ಯಕ್ಷ), ರವಿ ಗದಗ್ (ಉಪಾಧ್ಯಕ್ಷ), ಮಾಂತೇಶ್ ಜೋಳದ (ಪ್ರಧಾನ ಕಾರ್ಯದರ್ಶಿ), ವೀರೇಶ್ ವಾರದ ( ಸಂಘಟನಾ ಕಾರ್ಯದರ್ಶಿ), ವೀರೇಶ್ ಯಕ್ಲಾಸ್ಪುರ್ (ಖಜಾಂಚಿ).

ಮಲ್ಲಪ್ಪ ಗುತ್ತಿ, ಬಸವರಾಜ ಮಂಡಲಗೇರಿ, ಈಶಪ್ಪ ನಾಲವಾಡ, ಮಹೇಶ್ ಯಾಕ್ಲಾಸಪುರ್, ಪಂಚಾಕ್ಷರಿ ಯಾಕ್ಲಾಸಪುರ, ಮಂಜುನಾಥ್ ಗದಗ್, ಸಿ.ಎಸ್ ಅಂಗಡಿ,

ಮಹಾಂತೇಶ್ ಅಂಗಡಿ, ಎಫ್. ಜಿ ಅಂಗಡಿ, ರಾಜು ಹುಲ್ಲೂರ್, ಮಹೇಶ್ ಗುತ್ತಿ, ಪ್ರವೀಣ್ ಮಾನ್ ಶೆಟ್ಟರ,

ಚನ್ನಪ್ಪ ವಾಲಿ, ಬಸವರಾಜ್ ಗದ್ದಿ, ಶಿವರಾಜ ಗುತ್ತಿ,

ನಾಗರಾಜ್ ಶೆಟ್ಟರ್, ಮಂಜುನಾಥ್ ಮಟ್ಟಿ, ಸಿದ್ದು ನಿಡುಗುಂದಿ ಇದ್ದರು.

# ಜೂ 16ರಂದು ವಿಶ್ವ ರಕ್ತದಾನಿಗಳ ದಿನಾಚರಣೆ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಜೂ15 : ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ತಡೆ ಮತ್ತು ನಿಯಂತ್ರಣ ಘಟಕ ರಾಯಚೂರು, ಲಯನ್ಸ್ ಕ್ಲಬ್, ರೆಡ್ ಕ್ರಾಸ್ ಸಂಸ್ಥೆ, ರೆಡ್ ರಿಬ್ಬನ್ ಕ್ಲಬ್, ಎನ್. ಎಸ್.ಎಸ್. ಎನ್.ಸಿ.ಸಿ, ರಾಯಚೂರು ಜಿಲ್ಲೆಯ ಎಲ್ಲ ರಕ್ತ ಕೇಂದ್ರಗಳು ಹಾಗೂ ವಿವಿಧ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ವಿಶ್ವರಕ್ತದಾನಿಗಳ ದಿನಾಚರಣೆಯನ್ನು ಜೂನ್ 16ರ ಬೆಳಿಗ್ಗೆ 9.30ಗಂಟೆಗೆ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾಧಿಕಾರಿ ಪೂವಿತಾ ಎಸ್. ಅವರು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸುವರು. ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ ಕಾಂದೂ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ರಿಮ್ಸ್ ಆಸ್ಪತ್ರೆಯ ನಿರ್ದೇಶಕ ಡಾ.ರಮೇಶ ಬಿ.ಹೆಚ್., ರಿಮ್ಸ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಸೂರ್ಯಕಾಂತ ಮಂಡೂಲಕರ್, ನವೋದಯ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಗುರುದತ್ತಾ ಎಸ್.ಪವಾರ್, ಜಿಲ್ಲಾ ಶಸ್ತ್ರ ಚಿಕಿತ್ಸಕರು ಡಾ.ವಿಜಯ ಶಂಕರ, ರಿಮ್ಸ್ ವೈದ್ಯಕೀಯ ಕಾಲೇಜು ಪ್ರಾಂಶುಪಾಲ ಡಾ.ರಾಹುಲ್ ಕೀರ್ತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರಬಾಬು ಸೇರಿದಂತೆ ಆರೋಗ್ಯ ಇಲಾಖೆಯ ಎಲ್ಲಾ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು, ವೈದ್ಯಾಧಿಕಾರಿಗಳು, ರಕ್ತ ಕೇಂದ್ರದ ಡ್ಯಾಪ್ಕು /ಕೆಸಾಪ್ಸ್ ನ ಹಾಗೂ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಜಿಲ್ಲಾ ಕ್ಷಯ ಮತ್ತು ಏಡ್ಸ್ ನಿಯಂತ್ರಣಾಧಿಕಾರಿಗಳಾದ ಡಾ. ಮಹ್ಮದ್ ಶಾಕೀರ ಮೊಹಿಯುದ್ದೀನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೊಳಗಲ್ಲು ಗ್ರಾಮದಲ್ಲಿ ವಿದ್ಯುತ್ ತಂತಿ ತುಂಡಾಗಿ ಬಿದ್ದು 2 ಹಸುಗಳ ಸಾವು




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬಳ್ಳಾರಿ ತಾಲೂಕಿನ ಕೊಳಗಲ್ಲು ಗ್ರಾಮದಲ್ಲಿ ಶನಿವಾರ ಸಂಜೆ ಸುರಿದ ಭಾರೀ ಗಾಳಿ ಮತ್ತು ಮಳೆಯಿಂದ ವಿದ್ಯುತ್ ತಂತಿ ತುಂಡಾಗಿ ನೆಲಕ್ಕೆ ಬಿದ್ದ ಪರಿಣಾಮ ಎರಡು ಹಸುಗಳು ವಿದ್ಯುತ್ ಸ್ಪರ್ಶಕ್ಕೆ ಒಳಗಾಗಿ ಮೃತಪಟ್ಟಿರುವ ದುರ್ಘಟನೆ ಸಂಭವಿಸಿದೆ.

ಮಳೆಯೊಂದಿಗೆ ಬಲವಾದ ಗಾಳಿ ಬೀಸಿದ ಕಾರಣ ವಿದ್ಯುತ್ ಕಂಬಗಳ ಮೇಲಿನ ತಂತಿಗಳು ಹರಿದು ಕೆಳಗೆ ಬಿದ್ದಿವೆ ಎಂದು ತಿಳಿದುಬಂದಿದೆ. ಇದೇ ವೇಳೆ ಮೇಯಲು ಅಥವಾ ಮನೆಯ ಸಮೀಪದಲ್ಲಿದ್ದ ಎರಡು ಹಸುಗಳು ನೆಲಕ್ಕೆ ಬಿದ್ದಿದ್ದ ವಿದ್ಯುತ್ ತಂತಿಯನ್ನು ಸ್ಪರ್ಶಿಸಿದ ಪರಿಣಾಮ ಸ್ಥಳದಲ್ಲೇ ಸಾವನ್ನಪ್ಪಿವೆ. ಘಟನೆಯಿಂದ ಪಶುಗಳ ಮಾಲೀಕರಿಗೆ ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದ್ದು, ಗ್ರಾಮಸ್ಥರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಾಹಿತಿ ತಿಳಿದ ತಕ್ಷಣ ಸ್ಥಳೀಯ ಅಧಿಕಾರಿಗಳು ಹಾಗೂ ವಿದ್ಯುತ್ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ ಎನ್ನಲಾಗಿದೆ.ಗ್ರಾಮಸ್ಥರು ವಿದ್ಯುತ್ ತಂತಿಗಳ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ಆರೋಪಿಸಿದ್ದು, ಮೃತಪಟ್ಟ ಹಸುಗಳ ಮಾಲೀಕರಿಗೆ ಸೂಕ್ತ ಪರಿಹಾರ ನೀಡುವಂತೆ ಸರ್ಕಾರ ಮತ್ತು ವಿದ್ಯುತ್ ಇಲಾಖೆಯನ್ನು ಆಗ್ರಹಿಸಿದ್ದಾರೆ.ಇತ್ತೀಚೆಗೆ ಬಳ್ಳಾರಿ ಜಿಲ್ಲೆಯಲ್ಲಿ ಭಾರೀ ಮಳೆ ಮತ್ತು ಗಾಳಿಯಿಂದ ಹಲವು ಕಡೆ ಹಾನಿ ಸಂಭವಿಸಿದೆ.

# ಲಲಿತ ಕಲಾ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಮಂಜುನಾಥ ಗೋವಿಂದವಾಡ ಇನ್ನಿಲ್ಲ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ನಗರದ ಖ್ಯಾತ ಚಿತ್ರಕಲಾವಿದ, ಕರ್ನಾಟಕ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ ಪುರಸ್ಕೃತ. ಮಂಜುನಾಥ ಗೋವಿಂದವಾಡ(52) ಇವರು ಇಂದು ಬೆಳಗಿನ ಜಾವ 5 ಕ್ಕೆ ಇಲ್ಲಿನ ಅಚ್ಯುತ್ ನಗರದನಿವಾಸದಲ್ಲಿಹೃದಯಾಘಾತದಿಂದ ದೈವಾಧೀನರಾಗಿದ್ದಾರೆ.

ತಾಯಿ ಸರ್ವಮಂಗಳಮ್ಮ, ಪತ್ನಿ ಭಾವನ, ಪುತ್ರಿ ಅಶ್ವಿನಿ, ಪುತ್ರ ಮಹಾಂತೇಶಮತ್ತುಬಂಧು ಬಳಗವನ್ನು ಅಗಲಿದ್ದಾರೆ.ಇಂದು ಸಂಜೆ 4 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ಜರುಗಿತು. ಖ್ಯಾತ ಹಿಂದುಸ್ತನಿ ಗಾಯಕ ಜಾಲಿಬೆಂಚಿ ದೊಡ್ಡಬಸವಾರ್ಯ ಗವಾಯಿಗಳವರ ಮೊಮ್ಮಗನಾಗಿದ್ದ.ಮಂಜುನಾಥ ಗೋವಿಂದವಾಡ ಇವರು ತೈಲ, ಜಲ ವರ್ಣ, ರೇಖಾ ಚಿತ್ರ, ಮರಳಿನಿಂದ ಚಿತ್ರಕಲೆಯನ್ನು ಕುಂಚದಲ್ಲಿ ಅರಳಿಸಿ ಕಲಾ ಮನಸ್ಸುಗಳಲ್ಲಿ ಅಚ್ಚಳಿಯದ ನೆನಪುಗಳನ್ನು ಬಿಟ್ಟುಹೋಗಿದ್ದಾರೆ.ಹಂಪಿ ಉತ್ಸವ ಸೇರಿದಂತೆ ಜಿಲ್ಲೆಯ ಅನೇಕ ಉತ್ಸವ, ಬೃಹತ್ ಸಮಾರಂಭಗಳ ವೇದಿಕೆಯ ನಿರ್ಮಾಣ ಮಾಡುವ ಮೂಲಕ ಬ್ಯಾನರ್ ಮಂಜುನಾಥ ಎಂದು ಸಹ ಸ್ನೇಹಿತರು ಕರೆಯುತ್ತಿದ್ದರು.ನಗರಕ್ಕೆ ಬಂದ ಅನೇಕ ಗಣ್ಯರಿಗೆ ತಮ್ಮ ಚಿತ್ರ ಕಲಾ ಗ್ಯಾಲರಿಯನ್ನು ಪರಿಚಯಿಸಿದರು. ಆದರೂ ಇವರ ಕಲಾ ಪ್ರತಿಭಗೆ ಸೂಕ್ತವಾದ ಸಹಕಾರ ಕಲಾ ಕ್ಷೇತ್ರದಲ್ಲಿ ದೊರೆಯಲಿಲ್ಲ ಎನ್ನಬಹುದು.

# 17ರಂದು ವಿದ್ಯುತ್ ವ್ಯತ್ಯಯ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಜೂ 15 : ಜೆಸ್ಕಾಂ ಕರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಗೆ ಬರುವ ಗುಂಜಳ್ಳಿ ಕೆರೆಗೆ ನೀರು ಒದಗಿಸುವ ಏತಾ ನೀರಾವರಿ ಯೋಜನೆಗೆ (ಎಲ್‌ಐಎಸ್) ವಿದ್ಯುತ್ ಪೂರೈಸಲು ಕಾಮಗಾರಿಯನ್ನು ಹಮ್ಮಿಕೊಂಡಿರುವ ಪ್ರಯುಕ್ತ ಜೂನ್ 17ರ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕೋರಲಾಗಿದೆ.

ಅಂದು ಇಡಪನೂರು, ಗಿಲ್ಲೇಸೂಗೂರು, ಪಂಚಮುಖಿ, ಗಾಣದಾಳ, ಬಿಚ್ಚಾಲಿ, ಕೆರೆಬೂದೂರು, ಧುಗನೂರು, ತಲಮಾರಿ, ಎನ್. ಹನುಮಪುರ, ತುಂಗಭದ್ರ, ಬುಡುದಿನ್ನಿ, ಗುಂಡ್ರವೇಲಿ, ಮಿಡಗಲದಿನ್ನಿ, ಪುಚ್ಚಲದಿನ್ನಿ, ಗುಂಜಳ್ಳಿ, ಉಪ್ರಾಳ, ಗೋಡಿಹಾಳ, ಅಲ್ಕೂರು, ವೈ.ಮಲ್ಲಾಪುರ, ಜಂಬಲದಿನ್ನಿ, ಕೊತ್ತದೊಡ್ಡಿ, ಕನ್ಯದೊಡ್ಡಿ, ಮಾಲದೊಡ್ಡಿ, ಎಲ್.ಕೆ ದೊಡ್ಡಿ, ಜುಲಮಗೇರಾ, ಮಾಸದೊಡ್ಡಿ,ಮರ್ಚೆದೊಡ್ಡಿಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜೆಸ್ಕಾಂ ಕರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕರ್ಯನರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೀನುಗಾರಿಕೆ ಇಲಾಖೆಯಿಂದ ಪರವಾನಿಗೆ ಪಡೆದುಕೊಳ್ಳಲು ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಜೂ 15 : ರಾಯಚೂರು ಜಿಲ್ಲೆಯ ಮಾನವಿ ತಾಲ್ಲೂಕಿನ ತುಂಗಾಭದ್ರಾ ನದಿಭಾಗದ ಆಯನೂರನಿಂದ ದದ್ದಲ್‌ವರೆಗೆ ಮೀನು ಪಾಶುವಾರು ಹಕ್ಕು (ಮೀನು ಹಿಡಿಯಲು) ಪರವಾನಗಿ (ಲೈಸೆನ್ಸ್) ಜುಲೈ 18ರೊಳಗೆ ಕಚೇರಿಯಲ್ಲಿ ಸ್ಥಳೀಯ ಮೀನುಗಾರರು ವಾಸಸ್ಥಳ ಗುರುತಿನ ಚೀಟಿಯೊಂದಿಗೆ ನಿಗದಿತ ಶುಲ್ಕ ಪಾವತಿಸಿ ಪರವಾನಿಗೆ (ಲೈಸೆನ್ಸ್‌ಗಳನ್ನು) ಪಡೆದುಕೊಳ್ಳಬಹುದಾಗಿದೆ.

# ಬಡ್ಡಿ ದಂಧೆ ಕೋರರ ಅಟ್ಟಹಾಸಕ್ಕೆ ಕಡಿವಾಣ ಹಾಕಲು ಆಗ್ರಹ


• ಮಲ್ಲಮ್ಮ ನುಡಿ ವಾರ್ತೆ ಪಿರಿಯಾಪಟ್ಟಣ

ಬಡ್ಡಿದಂಧೆ ಕೋರರ ಅಟ್ಟಹಾಸಕ್ಕೆ ಸಿಲುಕಿ ರೈತರು ಆಸ್ತಿ ಕಳೆದುಕೊಂಡು ಅವರ ಕುಟುಂಬಗಳು ಬೀದಿ ಪಾಲಾಗುತ್ತಿರುವುದಕ್ಕೆ ಸರ್ಕಾರ ಕಡಿವಾಣ ಹಾಕದಿದ್ದರೆ ಹೋರಾಟ ಅನಿವಾರ್ಯ ಎಂದು ಕರ್ನಾಟಕ ರೈತ ಸಂಘದ ರಾಜ್ಯದ್ಯಕ್ಷ ಮಂಜುನಾಥಗೌಡ ಎಚ್ಚರಿಕೆ ನೀಡಿದರು.

ತಾಲೂಕಿನ ಕೊಣಸೂರು ಗ್ರಾಮದಲ್ಲಿ ಕಳೆದೆರಡು ದಿನಗಳ ಹಿಂದೆ ಸಾಲಗಾರನೊಂದಿಗೆ ಕೆಲವು ಸಹಚರರು ಸೇರಿಕೊಂಡು ಅಕ್ರಮವಾಗಿ ಜಮೀನಿಗೆ ಪ್ರವೇಶ ಮಾಡಿ ಬೆಳೆನಾಶ ಮಾಡಿದ್ದಲ್ಲದೆ ಬೇಲಿಯನ್ನು ಅಳವಡಿಸಿದನ್ನು ತೆರವು ಗೊಳಿಸಿ ಭಾನುವಾರ ಮಾತನಾಡಿದರು.

5 ಎಕ್ರೆ ಜಮೀನನ್ನು ಸಾಲದ ಬಡ್ಡಿಕ್ಕಾಗಿ ವಶಪಡಿಸಿಕೊಂಡು ಅನ್ಯಾಯ ಮಾಡುತ್ತಿರುವುದು ಸರಿಯಲ್ಲ ಪಡೆದ ಹಣವನ್ನು ಸಂದಾಯ ಮಾಡಿಕೊಂಡು ಜಮೀನಿನ ಕಡೆ ನೋಡಬಾರದು ಎಂದು ಸಾಲಗಾರನಿಗೆ ಎಂದು ತಿಳಿಸಿದರು.

ಜೊತೆಗೆ ಇಟ್ಟಳ್ಳಿ, ನರಳಾಪುರ, ಆಲನಹಳ್ಳಿ, ಹಸ್ವಾಳು, ಬೆಕ್ಯ, ನಂದಿಪುರ, ಕೊತ್ತಬಳ್ಳಿ, ಆರ್ ತುಂಗ ಸೇರಿದಂತೆ ಇನ್ನಿತರ ಗ್ರಾಮಗೊಳ್ಳಲಿನ ರೈತರು ಮತ್ತು ದಲಿತರು ವಿವಿಧ ರೀತಿಯ ಹಣದ ಸಮಸ್ಯೆಯ ಕಾರಣಗಳಿಗಾಗಿ ಸಾಲದ ರೂಪದಲ್ಲಿ ಬಡ್ಡಿದಾರದಿಂದ ತಮ್ಮ ಜಮೀನುಗಳನ್ನು ಪೂರ್ಣವಾಗಿ



ಒತ್ತೆ ಇಟ್ಟು ಸಾಲ ಪಡೆದುಕೊಂಡಿದ್ದಾರೆ.

ಅದರಲ್ಲೂ ರೈತರಾದ ಕೆ ಸಿ ಶಶಿಕುಮಾರ್ , ಕೆಸಿ ಲೋಕೇಶ್, ರಾಜೇಗೌಡ, ಸೇರಿದಂತೆ ಹಲವಾರು ರೈತರು ತಮ್ಮ ಹಣಕಾಸಿನ ವ್ಯವಹಾರವನ್ನೇ ಮುಂದಿಟ್ಟುಕೊಂಡು ಕೋಟ್ಯಾಂತರರು ಬೆಲೆ ಬಾಳುವ ತೋಟ ಮತ್ತು ಜಮೀನು ಗಳನ್ನು ಕೇವಲ 25 ಅಥವಾ 50 ಸಾವಿರ ರೂ ಗಳಿಗೆ ಸಾಲ ಪಡೆದು- ಕೊಂಡು ಉಪನಂದಾಣ ಅಧಿಕಾರಿಗಳ ಕಚೇರಿಯಲ್ಲಿ ನೋಂದಾಯಿಸಿ ಕೆಲವು ತಿಂಗಳುಗಳು ಮತ್ತು ವರ್ಷಗಳ ವರವಿಗೂ ರೈತರು ಸಾಲದ ಮೇಲಿನ ಬಡ್ಡಿಯೊಂದಿಗೆ ಸಾಲವನ್ನು ಹಿಂದಿರುಗಿಸಿದರು ಸಹ ಆಸ್ತಿಯನ್ನು ವಾಪಸ್ ಬರೆದು ಕೊಡದೆ ಸತಾಯಿಸಿ ಮತ್ತಷ್ಟು ಬಡ್ಡಿಯನ್ನು ಏರಿಸಿಕೊಂಡು ನ್ಯಾಯಾಲಯದ ಮೆಟ್ಟಿಲೇರಿ ಬಡ್ಡಿಕೋರರು ಆಸ್ತಿಯನ್ನು ವಶಕ್ಕೆ ಪಡೆಯುತ್ತಿರುವುದರಿಂದ ಕೆಸಿ ಶಶಿ ಕುಮಾರ್ ಮತ್ತು ಇನ್ನಿತರ ರೈತರು ಮತ್ತು ದಲಿತರ ಕುಟುಂಬಗಳು ಬೀದಿ ಪಾಲಾಗುತ್ತಿರುವುದು ತಾಲೂಕಿನಲ್ಲಿ ದಿನೇ ದಿನೇ ಹೆಚ್ಚಾಗುತ್ತಿದೆ ಎಂದು ತಿಳಿಸಿದ್ದಾರೆ.

ಸಾಲ ನೀಡಿದ ಬಡ್ಡಿ ದಂಧೆ ಕೋರರು ರೈತರು ತಮ್ಮ ತೋಟ ಹಾಗೂ ಜಮೀನಿನಲ್ಲಿ ಬೆಳೆಯಲಾಗಿದ್ದ ಬೆಳೆಯನ್ನು ನ್ಯಾಯಾಲಯದಲ್ಲಿ ಸ್ವಾಧೀನಕ್ಕೆ ಪಡೆಯುವ ಯಾವುದೇ ಸ್ಪಷ್ಟ ಆದೇಶ ಇಲ್ಲದಿದ್ದರೂ ಸಹ ಬೆಳೆ ಧ್ವಂಸ ಮಾಡಿ ತೆ- ೂಟದ ತೆಂಗಿನ ಮರಕ್ಕೆ ಸಿಸಿ ಕ್ಯಾಮೆರಾ ವನ್ನು ದಬ್ಬಾಳಿಕೆಯಿಂದ ಅತಿಕ್ರಮವಾಗಿ ಅಳವಡಿಸಲಾಗಿದೆ ಎಂದು ಶಶಿಕುಮಾರ್ ತಿಳಿಸಿದ್ದು ತಮ್ಮ ಕುಟುಂಬದ ಮಹಿಳೆಯರ ಮೇಲೆ ಹಲ್ಲೆ ನಡೆಸಿದರು ಈ ಬಗ್ಗೆ ಬೆಟ್ಟದಪುರ ಪೊಲೀಸ್ ಠಾಣೆಗೆ ದೂರು ನೀಡಿದರು ಸಹ ಯಾವುದೇ ಪ್ರಯೋಜನವಾಗಿಲ್ಲ ಎಂದು ಶಶಿ ಕುಮಾರ್ ತಮ್ಮ ಅಸಹಾಯಕತೆ ವ್ಯಕ್ತಪಡಿಸುತ್ತಿದ್ದಾರೆ.

ರೈತರು ಮತ್ತು ದಲಿತರು ಈ ಬಡ್ಡಿ ದಂಧೆ ಕೋರರ ಕುತಂತ್ರಕ್ಕೆ ಸಿಲುಕಿ ಒಂದಲ್ಲ ಒಂದು ರೀತಿಯಲ್ಲಿ ತೊಂದರೆಗೆ ಒಳಗಾಗಿ ಅವರ ಆಸ್ತಿ ಕಳೆದುಕೊಂಡು ಕುಟುಂಬಗಳು ಬೀದಿ ಪಾಲಾಗುತ್ತಿರುವುದನ್ನು ರಾಜ್ಯಸರ್ಕಾರ ಮತ್ತು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಈ ಬಗ್ಗೆ ವಿಶೇಷ ತಂಡ ರಚಿಸಿ ಅವರಿಂದ ತನಿಖೆ ನಡೆಸಿ ದಂದೆಕೋರರ ವಿರುದ್ಧ ಕಾನೂನು ಕ್ರಮ ಕೈಗೊಂಡು ರಕ್ಷಣೆ ಮಾಡಬೇಕೆಂದು ಮಂಜುನಾಥೇ ಗೌಡ ಆಗ್ರಹಿಸಿದ್ದಾರೆ.

ಗ್ರಾಮಸ್ಥರು ಎಲ್ಲರೂ ಒಟ್ಟಾಗಿ ನೊಂದ ಕುಟುಂಬಕ್ಕೆ ಸಹಕಾರ ನೀಡಬೇಕೆಂದು ಸಲಹೆ ನೀಡಿದ ಅವರು ಬೆಂಬಲಕ್ಕೆ ನಿಲ್ಲುವುದಾಗಿ ಭರವಸೆ ನೀಡಿದರು ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳಾದ ಕಾವೇರಮ್ಮ. ಆನಂದ್. ಪ್ರಕಾಶ್. ಕೆಬಿ ಮೂರ್ತಿ. ಕೆಸಿ ರಾಜ ಶೇಖರಯ್ಯ. ಯೋಗೀಶ್. ಗೌರಮ್ಮ. ವೀರಪ್ಪ ಸೇರಿದಂತೆ ಮತ್ತಿತರರು ಹಾಜರಿದ್ದರು.

# ನಮ್ಮದು ಭಯೋತ್ಪಾದಕರಿಗೆ ಬಿರಿಯಾನಿಕೊಟ್ಟು ಸಲಹುವ ಸರ್ಕಾರವಲ್ಲ: ಸಿ.ಟಿ.ರವಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ದೇಶದಲ್ಲಿ ಆತಂಕ ಸೃಷ್ಟಿ ಮಾಡುತ್ತಿದ್ದ ಭಯೋತ್ಪಾದಕರನ್ನು ನಿಗೂಡವಾಗಿ ಸಂಹಾರ ಮಾಡುತ್ತದೆ ಹೊರತು ಅವರಿಗೆ ಬಿರಿಯಾನಿ ನೀಡಿ ಸಲಹುವ ಸರ್ಕಾರ ನಮ್ಮದಲ್ಲ ಎಂದು ಬಿಜೆಪಿ ನಾಯಕ ಸಿ.ಟಿ.ರವಿ ಹೇಳಿದ್ದಾರೆ.ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗೋಷ್ಟಿ ನಡೆಸಿ ಅವರು ಇಂದು ಮಾತನಾಡುತ್ತಿದ್ದರು.ಭಯೋತ್ಪಾದಕರ ನಿಗೂಢ ಸಾವಿನ ಹಿಂದೆ ಚಾಣಕ್ಯನ ನೀತಿ ಇದೆಂದ ಅವರು ಭಯೋತ್ಪಾದಕರನ್ನು ಬ್ರದರ್ಸ್ ಎನ್ನುವ ಪಕ್ಷ ಕಾಂಗ್ರೆಸ್ ಎಂದರು. ನಕ್ಸಲ್ ಮುಕ್ತ ಭಾರ ನಿರ್ಮಾಣ ಮಾಡಲಾಗಿದೆ. ನಗರ ನಕ್ಸಲರು ಬಿಜೆಪಿಯೇತರ ಸರ್ಕಾರ ಇರುವ ರಾಜ್ಯಗಳಲ್ಲಿ ಇದ್ದಾರೆ ಅವರು ಹೋಗಬೇಕಿದೆಂದರು

ಜನ ಸಾಮಾನ್ಯರಿಗೆ ಅಭಿವೃದ್ಧಿಯ ವಿತರಣೆ ಮಾಡುತ್ತ. ವಿಕಾಸ, ವಿಶ್ವಾಸದಿಂದ ಜನಪರವಾದ ಪ್ರಧಾನಿಗಳಾಗಿದ್ದಾರೆ ಮೋದಿ ಅವರು. ಅವರ 12 ವರ್ಷಗಳ ಆಡಳಿತದಲ್ಲಿ ಶೌಚಾಲಯಗಳ ನಿರ್ಮಾಣ,ಜನಧನ್ 32 ಕೋಟಿ ಬ್ಯಾಂಕ್ ಖಾತೆ ತೆರೆಯುವ ಮೂಲಕ ಸರ್ಕಾರದ ಹಣ ನೇರವಾಗಿ ಜನರಿಗೆ ತಲುಪುವಂತೆ ಮಾಡಿದ್ದಾರೆ.

ಉಜ್ವಲ ಯೋಜನೆ ಮೂಲಕ ಹೊಗೆ ರಹಿತ ಅಡುಗೆ ಮನೆಗೆ ಕಾರಣರಾದರು. 81 ಕೋಟಿ ಜನರಿಗೆ ತಲಾ ಐದು ಕಿಲೋ ಅಕ್ಕಿ ಮಾಸಿಕವಾಗಿ ನೀಡುತ್ತಿದೆ.11 ಕೋಟಿ ರೈತರಿಗೆ ವಾರ್ಷಿಕ 6000 ರೂ ಗಳ ಪಿಎಂ ಸಮ್ಮಾನಯೋಜನೆ. ಜಲಜೀವನ್ ಮಿಷನ್ ಮೂಲಕ ಹಳ್ಳಿಗಳಿಗೆ ಶುದ್ದಕುಡಿಯುವ ನೀರಿನ ಯೋಜನೆಹೀಗೆ ಶಿಕ್ಷಣ, ಆರೋಗ್ಯ, ಸಾರಿಗೆ,



ದೇಶದ ರಕ್ಷಣೆ, ಔದ್ಯೋಗಿಕತೆ ಸೇರಿದಂತೆ ಎಲ್ಲಾ ರಂಗದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದೆ.

2014 ರ ಮುನ್ನ ಮತ್ತು ಈಗಿನ ಅಭಿವೃದ್ಧಿನ್ನ ಅವಲೋಕಿಸಿದರೆ ಮೋದಿ ಅವರು ಪ್ರಧಾನಿಯಾಗಿ ಏನು ಮಾಡಿದ್ದಾರೆ ಎಂಬುದು ಅರ್ಥವಾಗುತ್ತೆ.

ಆಗ ಭ್ರಷ್ಟಚಾರದ್ದೇ ಸುದ್ದಿಯಾಗುತ್ತಿತ್ತು ಈಗ ಭ್ರಷ್ಟಾಚಾರ ರಹಿತ ಆಡಳಿತವಿದೆಂದರು.

ಮೋದಿ ಅವರು ಆಡಳಿತ ಸುಧಾರಣೆ, ಜಾಗತಿಕ ಸಂಕಷ್ಟದಿಂದ ಪಾರು, ಆರ್ಥಿಕ ಅಭಿವೃದ್ಧಿಗೆ ಕಾರಣರಾಗಿದ್ದಾರೆಂದರು.

ಜಾಗತಿಕ ಯುದ್ಧದ ಪರಿಣಾಮ ಬೆಲೆ ಏರಿ- ಕೆಯಾಗಿದೆ.

ಹಲವು ದೇಶಗಳಲ್ಲಿ ಬೆಲೆ ಏರಿಕೆ ಹೆಚ್ಚಾಗ್ತಿದೆ ನಮ್ಮದು ನಿಯಂತ್ರಣದಲ್ಲಿದೆಂದು ಪೆಟ್ರೋಲ್ ದರ ಹೆಚ್ಚಳ ಸಮರ್ಥನೆ ಮಾಡಿಕೊಂಡ ಸಿಟಿ ರವಿ.

ಅಯಿಲ್ ಬಾಂಡ್ ಹೊರೆ ಯುಪಿಎ ಸರ್ಕಾರ ನಮ್ಮ ಮೇಲೆ ಹಾಕ್ತಿದೆ. ಸಾಲವನ್ನು ದೇಶದ ಮೇಲೆ ಹಾಕಿ ಆಡಳಿತ ನಡೆಸಿದ್ದರು. ಏಥನಾಲ್, ಸೋಲಾರ್ ಪ್ಲಾಂಟ್ ಗೆ ಹೆಚ್ಚು ಪೋಕಸ್ ಮಾಡಲಾಯಿತು. ಅದಾನಿ ಅಂಬಾನಿ ಹೆಚ್ಚು ಪೋಕಸ್ ಮಾಡ್ತಿದ್ದಾರೆ ಎನ್ನುವ ಆರೋಪಕ್ಕೆ ಅದಾನಿ ಅಂಬಾನಿ ಅವರು ಭಾರತೀಯರೇ.

ಎಸ್ ಐ ಆರ್ ವಿರೋಧಿಗಳು ದೇಶದ್ರೋಹಿಗಳು:

ಮತದಾರರ ಪಟ್ಟಿಯಲ್ಲಿ ಸತ್ತವರು, ಎರೆಡು ಮೂರು ಕಡೆ ಹೆಸರು ಇಧದವರು, ನಕಲಿ ದಾಖಲೆ ನೀಡಿದ ಹೊರ ದೇಶದವರು ಇರಕೂಡದೆಂದು ಎಸ್ ಐಆರ್ ಪ್ರಕ್ರಿಯೆ ನಡೆಯುತ್ತಿದೆ ಶುದ್ಧ ಮತದಾರರ ಉಳಿಯಲೆಂದು. ಇದು ಹೊಸದೇನಲ್ಲ ಸ್ವಾತಂತ್ರ್ಯ ನಂತರ ಹಲವು ಬಾರಿ ನಡೆದಿದೆ.

ಇದನ್ನು ವಿರೋಧಿಸುವವರು ದೇಶ ದ್ರೋಹಿಗಳು.

ಸಿಎಂ ಕಚೇರಿಯೇ ಭ್ರಷ್ಟಾಚಾರ ಕೇಂದ್ರವಾದರೆ:

ರಾಜ್ಯದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹಿಸದಾಗಿ ರಾಜ್ಯದ ಜನತೆಗೆ ಅನೇಕ ಭರವಶೆಗಳನ್ನು ನೀಡುತ್ತ ಆಡಳಿತ ಸುಧಾರಣೆ ಮಾಡಲು ಯಾರಾದರೂ ಲಂಚ ಕೇಳಿದರೆ ನಮ್ಮ ಕಚೇರಿಗೆ ದೂರು ನೀಡಿ ಎಂದಿದ್ದಾರೆ. ಸ್ವಾಗತ ಆದರೆ ಸಿಎಂ ಕಚೇರಿಯೇ ಭ್ರಷ್ಟಾಚಾರದ ಕೇಂದ್ರವಾದರೆ ಯಾರಗಿ ದೂರು ಕೊಡಬೇಕು. ಹಾಗಾಗದಿರಲಿ ಒಳ್ಳೆ ಆಡಳಿತ ನೀಡಲಿ. ಆದರೆ ಅದು ಸಾಧ್ಯವಿಲ್ಲದ ಕೆಲಸ ಏಕೆಂದರೆ ಕಾಂಗ್ರೆಸ್ ಭ್ರಷ್ಟತೆಯನ್ನೇ ಹಾಸು ಹೊದ್ದು ಮಲಗಿದೆ. ಎಲ್ಲವುದನ್ನು ಕಾದು ನೋಡುತ್ತೇವೆ. ಭ್ರಷ್ಟಾಚಾರ ನಡೆದರೆ ಪ್ರತಿಪಕ್ಷವಾಗಿ ಹೋರಾಟ ಮಾಡುತ್ತೇವೆ ಎಂದರು

ತುಕಡೆ ಗ್ಯಾಂಗ್ ಗಳು ಅರಾಜಕತೆ ಸೃಷ್ಟಿ ಮಾಡಲು ಇದರ ವಿರುದ್ದ ಹೋರಾಟ ಮಾಡ್ತಿದ್ದಾರೆಂದು ಆಪಾದಿಸಿದರು.

ಸುದ್ದಿಗೋಷ್ಟಿಯಲ್ಲಿ ವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ್, ಮಾಜಿ ಶಾಸಕರಾದ ಗಾಲಿ ಸೋಮಶೇಖರ ರೆಡ್ಡಿ, ಎಂ.ಎಸ್.ಸೋಮಲಿಂಗಪ್ಪ, ಮಾಜಿ ಸಂಸದ ಸಣ್ಣ ಪಕ್ಕೀರಪ್ಪ, ಪಕ್ಷದ ಜಿಲ್ಲಾ ಅಧ್ಯಕ್ಷ ಅನಿಲ್ ನಾಯ್ಡು ಮುಖಂಡರಾದ ಎಂ.ಎಸ್.ದಿವಾಕರ್, ಪಾಲಣ್ಣ, ಹೆಚ್.ಹನುಮಂತಪ್ಪ, ಕೆ.ಎ.ರಾಮಲಿಂಗಪ್ಪ, ಎಸ್.ಗುರುಲಿಂಗನಗೌಡ, ಮುದ್ದನಗೌಡ, ತಿಮ್ಮಪ್ಪ, ಎರ್ರಂಗಳಿ ತಿಮ್ಮಾರೆಡ್ಡಿ, ಸುರೇಖ ಮಲ್ಲಗೌಡ ಮೊದಲಾದವರು ಇದ್ದರು.

# ಸಾರ್ವಜನಿಕ ಅಭಿವೃದ್ಧಿಗಾಗಿ ಮಾಧ್ಯಮಗಳು ಕಾರ್ಯನಿರ್ವಹಿಸಬೇಕು:ಶ್ರೀಧರ್ ಬಾರಿಕೇರ್

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಸಮಾಜದ ಅಭಿವೃದ್ಧಿ ಮತ್ತು ಜನಸಾಮಾನ್ಯರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಮಾಧ್ಯಮಗಳು ಕಾರ್ಯನಿರ್ವಹಿಸಬೇಕು ಎಂದು ಬಳ್ಳಾರಿ ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಶ್ರೀಧರ್ ಬಾರಿಕೇರ್ ಅಭಿಪ್ರಾಯಪಟ್ಟರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಧ್ಯಮಗಳು ನಾಲ್ಕನೇ ಅಂಗವಾಗಿ ಮಹತ್ವದ ಪಾತ್ರ ವಹಿಸುತ್ತಿವೆ. ಸಮಾಜದಲ್ಲಿನ ಸಮಸ್ಯೆಗಳು, ಅಭಿವೃದ್ಧಿ ಕಾರ್ಯಗಳು ಹಾಗೂ ಜನರ ಆಶೋತ್ತರಗಳನ್ನು ಸರ್ಕಾರ ಮತ್ತು ಆಡಳಿತದ ಗಮನಕ್ಕೆ ತರುವಲ್ಲಿ ಮಾಧ್ಯಮಗಳ ಕೊಡುಗೆ ಅಪಾರವಾಗಿದೆ ಎಂದು ಹೇಳಿದರು.




ಇಂದಿನ ತಂತ್ರಜ್ಞಾನ ಯುಗದಲ್ಲಿ ಮಾಹಿತಿ ವೇಗವಾಗಿ ಜನರಿಗೆ ತಲುಪುತ್ತಿದ್ದು, ಮಾಧ್ಯಮಗಳು ನಿಖರ ಹಾಗೂ ವಸ್ತುನಿಷ್ಠ ಸುದ್ದಿಗಳನ್ನು ನೀಡುವ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸಬೇಕು ಎಂದು ಕರೆ ನೀಡಿದರು. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ, ಶಿಕ್ಷಣ, ಆರೋಗ್ಯ, ಸ್ವಚ್ಛತೆ ಮತ್ತು ಮೂಲಸೌಕರ್ಯಗಳ ಕುರಿತ ಮಾಹಿತಿಯನ್ನು ಜನರಿಗೆ ತಲುಪಿಸುವ ಮೂಲಕ ಅಭಿವೃದ್ಧಿಗೆ ಪೂರಕ ವಾತಾವರಣ ನಿರ್ಮಿಸಬಹುದು ಎಂದು ತಿಳಿಸಿದರು.

ಸರ್ಕಾರದ ವಿವಿಧ ಜನಪರ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಜನರಿಗೆ ಅರಿವು ಮೂಡಿಸುವಲ್ಲಿ ಮಾಧ್ಯಮಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಅಭಿವೃದ್ಧಿ ಕಾರ್ಯಗಳ ಬಗ್ಗೆ ರಚನಾತ್ಮಕ ವಿಮರ್ಶೆ ಹಾಗೂ ಸಲಹೆಗಳನ್ನು ನೀಡುವುದರಿಂದ ಆಡಳಿತ ವ್ಯವಸ್ಥೆಯ ಕಾರ್ಯಕ್ಷಮತೆ ಹೆಚ್ಚಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿವಿಧ ಮಾಧ್ಯಮ ಪ್ರತಿನಿಧಿಗಳು, ಗಣ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ಮಾಧ್ಯಮ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಕೆಲವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

"ಸಾರ್ವಜನಿಕ ಅಭಿವೃದ್ಧಿಯೇ ಮಾಧ್ಯಮಗಳ ಪ್ರಮುಖ ಧ್ಯೇಯವಾಗಬೇಕು. ಸಮಾಜದ ಒಳಿತಿಗಾಗಿ ಜವಾಬ್ದಾರಿಯುತ ಪತ್ರಿಕೋದ್ಯಮ ಅಗತ್ಯವಾಗಿದೆ" ಎಂದು ಶ್ರೀಧರ್ ಬಾರಿಕೇರ್ ಹೇಳಿದರು.

# ದಸಂಸದಿಂದ ಮಕ್ಕಳಿಗೆ ನೋಟ್‌ಬುಕ್,ಪೆನ್ ವಿತರಣೆ

• ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ

ಹಗರಿಬೊಮ್ಮನಹಳ್ಳಿ ತಾಲೂಕಿನ ಚಿಂತ್ರಪಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ,ಪ್ರೊ, ಬಿ ಕೃಷ್ಣಪ್ಪನವರ ಸ್ಥಾಪಿಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಿ ) 47/74-75 ವತಿಯಿಂದ ಒಂದರಿಂದ ಏಳನೇ ತರಗತಿ ಮಕ್ಕಳಿಗೆ ನೋಟ್ ಪುಸ್ತಕ ಮತ್ತು ಪೆನ್ನುಗಳ ವಿತರಣೆ ಕಾರ್ಯಕ್ರಮವನ್ನು ಮಾಡಲಾಯಿತು. ಕಾರ್ಯಕ್ರಮವನ್ನು ಉದ್ದೇಶಿಸಿ ಪ್ರಾಸ್ತಾವಿಕ ಮಾತನಾಡಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲೂಕು ಅಧ್ಯಕ್ಷರಾದ ಹೆಗ್ಡಾಳ್ ಪರಶುರಾಮ್ ಅವರು, ಆಖಖ ನ ಸಂಸ್ಥಾಪಕರಾದ ಪ್ರೊಫೆಸರ್ ಕೃಷ್ಣಪ್ಪನವರು, 1938 ಜೂನ್ 9 ನೇ ತಾರೀಕು ಹರಿಹರ ತಾಲೂಕಿನಲ್ಲಿ ತಂದೆ ಬಸಪ್ಪ ತಾಯಿ ಚೌಡಮ್ಮ ದಂಪತಿಯ ಪುತ್ರರಾಗಿ ಜನಿಸುತ್ತಾರೆ. ಅವರು ಬಾಲ್ಯದಿಂದಲೇ ಉತ್ತಮ ವಿದ್ಯಾರ್ಥಿಯಾಗಿ ರೂಪುಗೊಂಡು,ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ ಎ ಪದವಿ ಪಡೆದ ಇವರು ಶಿವಮೊಗ್ಗ, ಭದ್ರಾವತಿ, ಸಾಗರ, ಸೇರಿದಂತೆ ಪ್ರತಿಷ್ಠಿತ ಕಾಲೇಜು ಗಳಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ನಂತರ 1995 ರಲ್ಲಿ ಸ್ವ- ಯಂ ನಿವೃತ್ತಿ ಪಡೆದು ಸಾಹಿತ್ಯ ಆಸಕ್ತಿಯನ್ನು ಬೆಳೆಸಿಕೊಂಡು ಚರ್ಚೆ ಸಂವಾದ ನಾಟಕ ಕಲೆ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸಲು ಮುಂದಾದರು.ಜೊತೆಗೆ ಆಗ ಸಮಾಜದಲ್ಲಿ ತಾಂಡವವಾಡುತ್ತಿದ್ದ ವರ್ಣಬೇಧ ವ್ಯವಸ್ಥೆ, ಜಾತಿ ಪದ್ಧತಿ, ಮೂಢನಂಬಿಕೆಗಳ ವಿರುದ್ಧ ಹೋರಾಟಗಳನ್ನು ಮಾಡುತ್ತ ಶೋಷಿತರ ಏಳ್ಗೆಗೆ ಶ್ರಮಿಸಿದರು. ಅವರ



ಪ್ರಮುಖ ಹೋರಾಟಗಳು, ಚಂದ್ರಗುತ್ತಿಯ ಎಲ್ಲಮ್ಮ ದೇವಸ್ಥಾನದಲ್ಲಿ ನಡೆಯುತ್ತಿದ್ದ ಬೆತ್ತಲೆ ಸೇವೆ ವಿರುದ್ಧದ ಹೋರಾಟ ಹಾಗೂ ದಲಿತರು ಕೃಷಿ ಮಾಡುತ್ತಿದ್ದ ಸಾಗುವಳಿ ಭೂಮಿಗಳ ಪಟ್ಟಾ ನೀಡುವ ಕುರಿತ ಹೋರಾಟ ಇನ್ನೂ ಹಲವಾರು ಹೋರಾಟ ಮಾಡಿದ ನಾಯಕ ಪ್ರೊಫೆಸರ್ ಕೃಷ್ಣಪ್ಪನವರು. ಹಾಗಾಗಿ ಅವರ ಜನ್ಮದಿನದ ಪ್ರಯುಕ್ತ ಮಕ್ಕಳಿಗೆ ನೋಟ್ ಪುಸ್ತಕ ಹಾಗೂ ಪೆನ್ನುಗಳ ವಿತರಣೆ ಮಾಡುವುದು ಹೆಮ್ಮೆಯ ವಿಷಯ ಎಂದರು. ನಂತರ ಮಾತನಾಡಿದ ತಾಲೂಕು ಸಂಘಟನಾ ಸಂಚಾಲಕರು ದಶಮಾಪುರ ಮರಿಯಪ್ಪ ಅವರು, ಸಮಾಜದಲ್ಲಿ ಬದಲಾವಣೆ ಮತ್ತು ಬೆಳವಣಿಗೆ ಆಗಬೇಕೆಂದರೆ ಶಿಕ್ಷಣವೇ ಪ್ರಮುಖ ಅಸ್ತ್ರವಾಗಿದ್ದು, ಅಂಬೇಡ್ಕರ ಅವರು ಅದಕ್ಕಾಗಿಯೇ ಸಂವಿಧಾನದಲ್ಲಿ ಕಡ್ಡಾಯ ಶಿಕ್ಷಣ ಹಕ್ಕನ್ನು ಜಾರಿಗೆ ತಂದರು.ನಮ್ಮ ಹಿರಿಯರ ತಲೆಮಾರಿನಲ್ಲಿ ಊಟ ಬಟ್ಟೆ ಗೂ ಅನುಕೂಲವಿಲ್ಲದ ಪರಿಸ್ಥಿತಿ ಇತ್ತು ಆದ್ದರಿಂದ ವಿದ್ಯಾಭ್ಯಾಸದಿಂದ ವಂಚಿತರಾದರು. ಆ ಪರಿಸ್ಥಿತಿ ಈಗ ಇಲ್ಲಾ. ಈಗ ಸರ್ಕಾರಗಳು ಸಂಘ ಸಂಸ್ಥೆಗಳು ಹಲವಾರು ಯೋಜನೆಗಳನ್ನ ಓದುವ ಮಕ್ಕಳಿಗೆ ನೀಡುತ್ತಿದ್ದಾರೆ. ಹಾಗಾಗಿ ಅದನ್ನು ಸದುಪಯೋಗ ಮಾಡಿಕೊಂಡು ಉತ್ತಮ ವಿದ್ಯಾಭ್ಯಾಸ ಮಾಡಿ ಶಾಲೆಗೆ ತಂದೆ ತಾಯಿಗೆ ಊರಿಗೆ ಕೀರ್ತಿ ತರಬೇಕು ಎಂದರು. ನಂತರ ಮಾತನಾಡಿದ ಮಾಜಿ ತಾಲೂಕು ಪಂಚಾಯಿತಿ ಸದಸ್ಯ ಹಾಗೂ ಊರಿನ ಹಿರಿಯರಾದ ಚಿಂತ್ರಪಳ್ಳಿ ದೇವೇಂದ್ರಪ್ಪ ಅವರು ಕರ್ನಾಟಕ ದಲಿತ ಸಂಘರ್ಷ ಸಮಿತಿಯವರು ಒಂದು ಉತ್ತಮ ತಂಡವಾಗಿ ಶಾಲೆಯಲ್ಲಿ ಮಕ್ಕಳಿಗೆ ಪುಸ್ತಕ ಪೆನ್ನು ಕೊಡುತ್ತಿರುವುದು ತುಂಬಾ ಹೆಮ್ಮೆ ಪಡುವ ವಿಷಯ, ತಾಲೂಕಿನಲ್ಲಿ ಹಲವಾರು ಸಂಘಟನೆಗಳು ಇದ್ದಾವೆ!ಅದರಲ್ಲಿ ಶಾಲೆಗೆ ಮಕ್ಕಳಿಗೆ ಶಿಕ್ಷಣಕ್ಕೆ ಒತ್ತು ಕೊಟ್ಟು ಕೆಲಸ ಮಾಡುವ ಇವರ ಉದ್ದೇಶ ತುಂಬಾ ಒಳ್ಳೆಯದಾಗಿದೆ. ಅದು ಮೊದಲು ನಮ್ಮೂರಲ್ಲೇ ಕೊಟ್ಟಿರುವುದು ತುಂಬಾ ಖುಷಿಯಾಗಿದೆ ಎಂದರು. ನಂತರ ಮಾತನಾಡಿದ ಗ್ಯಾರಂಟಿ ಅಧ್ಯಕ್ಷರಾದ ಸೊನ್ನದ ಗುರುಬಸವರಾಜ್ ಅವರು ಆಖಖ ನ ಈ ಕಾರ್ಯಕ್ರಮ ಸಮಾಜದಲ್ಲಿ ಉತ್ತಮ ಸಂದೇಶ ನೀಡಿದೆ. ಮಕ್ಕಳ ಮನಸ್ಸು ಖಾಲಿ ನೋಟ್ ಬುಕ್ ತರಹ ಇರುತ್ತೆ, ನಿಮ್ಮ ಭವಿಷ್ಯವನ್ನು ನಿಮ್ಮ ಜೀವನವನ್ನು ಪುಸ್ತಕದಲ್ಲಿ ಒಳ್ಳೆಯ ರೀತಿ ಬರೆದುಕೊಂಡು ಜೀವನ ರೂಪಿಸಿಕೊಳ್ಳಿ ಎಂದು ಮಕ್ಕಳಿಗೆ ಕಿವಿ ಮಾತು ಹೇಳಿದರು. ನಂತರ ಮಾತನಾಡಿದ ಜಿಲ್ಲಾ ಸಂಘಟನಾ ಸಂಚಾಲಕರು ಪ್ರಭಾಕರ್ ಆನಂದಳ್ಳಿ ಅವರು, ಶಿಕ್ಷಣ ಎನ್ನುವುದು ಹುಲಿಯ ಹಾಲಿದ್ದಂತೆ ಅದನ್ನು ಕುಡಿದವರು ಘರ್ಜಿಸಲೇಬೇಕು ಎನ್ನುವ ಹಾಗೆ ಮಕ್ಕಳು ಚನ್ನಾಗಿ ಓದಿಕೊಂಡು ಪ್ರಶ್ನೆ ಮಾಡುವ ಗುಣ ಬೆಳೆಸಿಕೊಂಡು ಕತ್ತಲೆಯಿಂದ ಬೆಳಕಿನೆಡೆಗೆ ಬರಬೇಕೆಂದು ಮಕ್ಕಳಿಗೆ ಕಿವಿ ಮಾತು ಹೇಳಿದರು.

ಈ ಸಂದರ್ಭದಲ್ಲಿ ಖಆಖಅ ಅಧ್ಯಕ್ಷರಾದ ಶ್ರೀನಿವಾಸ್, ಮುಖ್ಯಗುರುಗಳಾದ ಬಸವರಾಜ್, ಊರಿನ ಹಿರಿಯರಾದ ಹುಲುಗಪ್ಪ, ಅಂಜಿನಪ್ಪ, ಪ್ರಕಾಶ ಮಂಜು, ತಳವಾರ ಕೊಟ್ರೇಶ, ಶಿಕ್ಷಕರಾದ ವಾಮದೇವಪ್ಪ, ಭಾರತಿ ಮೇಡಮ್, ವಿರುಪಾಕ್ಷಿ, ರಾಘವೇಂದ್ರ ಮತ್ತು ದಲಿತ ಸಂಘರ್ಷ ಸಮಿತಿಯಜಿಲ್ಲಾ ಸಂಘಟನಾ ಸಂಚಾಲಕ ನಾಗರಾಜ್ ಕಲ್ಲಹಳ್ಳಿ ಶಿವಮೂರ್ತಿ ನೆಲ್ಕುದ್ರಿ, ತೀರ್ಥಪ್ರಸಾದ್ ಮೈಲಪ್ಪ ಕೋಗಳಿ, ಆನಂದಳ್ಳಿ ಬಸವರಾಜ್, ಹೊಸಕೇರಿ ಚಾರೆಪ್ಪ, ಬ್ಯಾಲಾಳ್ ಅಜಯ್, ಹಾಗೂ ಕಾರ್ಯಕ್ರಮದ ಉಸ್ತುವಾರಿ ಹಾಗೂ ದಲಿತ ಸಂಘರ್ಷ ಸಮಿತಿಯ ಖಜಾಂಚಿ ರಮೇಶ್ ಚಿಂತ್ರಪಳ್ಳಿ ಇನ್ನೂ ಮುಂತಾದವರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

# ಗಡಿ ದಾಟಿ ಬಂದ ಅಕ್ರಮ ಸೇಂದಿ: ಸ್ಕೂಟಿ ಸಮೇತ ಸಿಕ್ಕಿಬಿದ್ದ ಯುವಕ



**ಸಿರುಗುಪ್ಪ:** ಆಂಧ್ರದಿಂದ ಕರ್ನಾಟಕಕ್ಕೆ ಅಕ್ರಮವಾಗಿ ಸೇಂದಿ ಸಾಗಿಸುತ್ತಿದ್ದ ಯುವಕನೊಬ್ಬ ಸ್ಕೂಟಿ ಸಮೇತ ಹಚ್ಚೊಳ್ಳಿ ಗ್ರಾಮದಲ್ಲಿ ಸಿಕ್ಕಿಬಿದ್ದಿದ್ದಾನೆ. 100ಕ್ಕೂ ಹೆಚ್ಚು ಬಾಟಲ್ ಸೇಂದಿ ಪತ್ತೆಯಾಗಿದ್ದು, ಪೊಲೀಸರು ಇನ್ನೂ ದೂರು ದಾಖಲಿಸದೆ "ಮೀನಾಮೇಷ" ಎಣಿಸುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

**ಘಟನೆ ವಿವರ:** ಆಂಧ್ರ ಪ್ರದೇಶದಲ್ಲಿ ಅಕ್ರಮ ಸೇಂದಿ ಮಾರಾಟ ಜೋರಾಗಿದ್ದು, ಅಲ್ಲಿಂದ ಕರ್ನಾಟಕಕ್ಕೆ ಸೇಂದಿ ಸಾಗಾಟದ ದಂಧೆ ನಡೆಯುತ್ತಿದೆ. ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಶ್ರೀರಾಮನಗರದ ಯುವಕನೊಬ್ಬ KA 37 E S 4967 ನಂಬರಿನ ಬೂದು ಬಣ್ಣದ ಹೋಂಡಾ ಡಿಯೋ ಸ್ಕೂಟಿಯಲ್ಲಿ 100ಕ್ಕೂ ಹೆಚ್ಚು ಸೇಂದಿ ಬಾಟಲ್‌ಗಳನ್ನು ತುಂಬಿಕೊಂಡು ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲೂಕಿನ ಗಡಿ ಗ್ರಾಮ ಹಚ್ಚೊಳ್ಳಿಯ ಮುಖ್ಯರಸ್ತೆ ಮೂಲಕ ಅಕ್ರಮವಾಗಿ ಸಾಗಿಸುತ್ತಿದ್ದ.

**ಸಿಕ್ಕಿಬಿದ್ದಿದ್ದು ಹೇಗೆ?:** ಅನುಮಾನಗೊಂಡ ಸ್ಥಳೀಯರು ಹಾಗೂ ಪೊಲೀಸರು ಯುವಕನನ್ನು ಸ್ಕೂಟಿ ಸಮೇತ ಹಿಡಿದಿದ್ದಾರೆ. ತಪಾಸಣೆ ನಡೆಸಿದಾಗ ಸ್ಕೂಟಿಯಲ್ಲಿ 100ಕ್ಕೂ ಹೆಚ್ಚು ಸೇಂದಿ ಬಾಟಲ್‌ಗಳು ಪತ್ತೆಯಾಗಿವೆ. ತಕ್ಷಣ ಯುವಕನನ್ನು ಠಾಣೆ ಸಿಬ್ಬಂದಿ ವಶಕ್ಕೆ ಪಡೆದಿದ್ದಾರೆ.

**ದೂರು ದಾಖಲಿಸುತ್ತಿಲ್ಲವೇ?:** ಯುವಕ ಸಿಕ್ಕಿಬಿದ್ದು ಗಂಟೆಗಳಾದರೂ ಹಚ್ಚೊಳ್ಳಿ ಪೊಲೀಸರು ಈ ಪ್ರಕರಣದ ಬಗ್ಗೆ ತನಿಖೆ ನಡೆಸಿ ದೂರು ದಾಖಲಿಸುತ್ತಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ. ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನ ನಡೆಯುತ್ತಿದೆಯಾ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಮೂಡಿದೆ. ಅಕ್ರಮ ಸೇಂದಿ ದಂಧೆಗೆ ಕಡಿವಾಣ ಹಾಕಿ ಆರೋಪಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಪೊಲೀಸರು ದೂರು ದಾಖಲಿಸಿ ಮುಂದಿನ ಕ್ರಮ ಕೈಗೊಳ್ಳುತ್ತಾರಾ ಎಂದು ಕಾದು ನೋಡಬೇಕಿದೆ.

# ಭಾರತೀಯ ಮನೆಗಳಿಗೆ AI ಚಾಲಿತ ಶಿಕ್ಷಣ




**ಬೆಂಗಳೂರು:** ಭಾರತದ ಪ್ರಮುಖ ಬ್ರಾಡ್‌ಬ್ಯಾಂಡ್ ಸೇವಾ ಪೂರೈಕೆದಾರರಲ್ಲಿ ಒಂದಾದ ACT Fibernet, ವಿದ್ಯಾರ್ಥಿಗಳಿಗಾಗಿ ಜನರೇಟಿವ್ AI ಆಧಾರಿತ ಪ್ರಮುಖ ಇಜಖಿಜಝ ವೇದಿಕೆಯಾದ Turito ಜೊತೆ ಒಂದು ಕಾರ್ಯತಂತ್ರ ಪಾಲುದಾರಿಕೆಯನ್ನು ಇಂದು ಘೋಷಿಸಿದೆ. ಈ ಸಹಯೋಗದ ಮೂಲಕ, ACT Fibernet ಜನವರಿ 2025 ರಲ್ಲಿ AI-ಚಾಲಿತ Wi-Fi ಪ್ರಾರಂಭಿಸಿದ ನಂತರ ಕನೆಕ್ಟಿವಿಟಿಯನ್ನು ಮೀರಿ ತನ್ನ ಪಾತ್ರವನ್ನು ವಿಸ್ತರಿಸುತ್ತಿದೆ—ಭಾರತೀಯ ಮನೆಗಳಲ್ಲಿ ವೈಯಕ್ತಿಕ, AI-ಚಾಲಿತ ಶಿಕ್ಷಣಕ್ಕೆ ಪ್ರವೇಶ ಕಲ್ಪಿಸುವ ಗುರಿ ಹೊಂದಿದೆ. AI-ಚಾಲಿತ ಸ್ಮಾರ್ಟ್ Wi-Fiಯಿಂದ AI-ಸಮಗ್ರ ಕಲಿಕೆಯವರೆಗೆ, ACT Fibernet AI ಅನ್ನು ಅತ್ಯುತ್ತಮವಾಗಿ ಬಳಸಿಕೊಳ್ಳಲು ಶ್ರಮಿಸುತ್ತಿದೆ. ಸಾಂಪ್ರದಾಯಿಕ ತರಗತಿ ಕಲಿಕೆ ಮತ್ತು ನೈಜ-ಜಗತ್ತಿನ ಕೌಶಲ್ಯಗಳ ನಡುವಿನ ಅಂತರ ಹೆಚ್ಚುತ್ತಿರುವ ಸಂದರ್ಭದಲ್ಲಿ—ವಿಶೇಷವಾಗಿ ಕೃತಕ ಬುದ್ಧಿಮತ್ತೆಯ ಯುಗದಲ್ಲಿ—ಹೆಚ್ಚಿನ ವಿದ್ಯಾರ್ಥಿಗಳಿಗೆ ವೈಯಕ್ತಿಕ ಮತ್ತು ಭವಿಷ್ಯಕ್ಕೆ ಸನ್ನದ್ಧ ಶಿಕ್ಷಣದ ಪ್ರವೇಶ ಇನ್ನೂ ಸೀಮಿತವಾಗಿದೆ. ಈ ಪಾಲುದಾರಿಕೆಯು ಆ ಅಂತರವನ್ನು ಕಡಿಮೆ ಮಾಡಲು ಗುರಿ ಇಟ್ಟು-ಕೊಂಡಿದ್ದು—ಸಂಪರ್ಕಿತ ಮನೆಯಲ್ಲಿ ಕಲಿಕೆಯನ್ನು ಸಮಗ್ರಗೊಳಿಸುವ ಮೂಲಕ ಮುಂದುವರಿದ ಶೈಕ್ಷಣಿಕ ಬೆಂಬಲವನ್ನು ಹೆಚ್ಚು ಸುಲಭವಾಗಿ ಮತ್ತು ನಿರಂತರವಾಗಿ ಲಭ್ಯವಾಗಿಸುತ್ತದೆ.ವಿದ್ಯಾರ್ಥಿಗಳು ಉತ್ತಮವಾಗಿ ಮುನ್ನಡೆಯಲು ಸಿದ್ಧರಾಗುವಂತೆ ಮಾಡುವ ಉದ್ದೇಶ ಹೊಂದಿವೆ.

# ವಿಶ್ವ ರಕ್ತದಾನಿಗಳ ದಿನಾಚರಣೆ



**ಚಿಕ್ಕಬಳ್ಳಾಪುರ:** ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ವತಿಯಿಂದ ಚಿಕ್ಕಬಳ್ಳಾಪುರದ ಅಂಬೇಡ್ಕರ್ ಭವನದಲ್ಲಿ ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ಜಿಲ್ಲಾಧಿಕಾರಿ ಜಿ.ಪ್ರಭು ಅವರು ಅಧ್ಯಕ್ಷತೆಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಪ್ರಭು ಜಿ. ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಹಲವು ವರ್ಷಗಳಿಂದ ಮಾನವೀಯ ಸೇವೆಯಲ್ಲಿ ತೊಡಗಿಕೊಂಡಿದ್ದು,ಜಿಲ್ಲೆಯ ಜನರಿಗೆ ನಿರಂತರವಾಗಿ ರಕ್ತ ಪೂರೈಕೆ ಮಾಡುವ ಮೂಲಕ ಮಹತ್ವದ ಸೇವೆ ಸಲ್ಲಿಸುತ್ತಿದೆ ಎಂದು ಶ್ಲಾಘಿಸಿ ಸಮಾಜದ ಒಳಿತಿಗಾಗಿ ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯನ್ನು ಅರಿತು ರಕ್ತದಾನಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ ಮಾತನಾಡಿ,ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನದಲ್ಲಿ ಭಾಗವಹಿಸಬೇಕು.ಶಿಕ್ಷಣ ಸಂಸ್ಥೆಗಳಲ್ಲಿ ರಕ್ತದಾನದ ಕುರಿತು ಜಾಗೃತಿ ಮೂಡಿಸಿ,ಅಗತ್ಯ ಸಂದರ್ಭದಲ್ಲಿ ಜೀವ ಉಳಿಸುವ ಈ ಕಾರ್ಯಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಎಸ್‌ಜೆಸಿಐಟಿ ಪ್ರಾಂಶುಪಾಲ ಡಾ. ಜಿ.ಟಿ. ರಾಜು,ನಾಗಾರ್ಜುನ ತಾಂತ್ರಿಕ ಕಾಲೇಜಿನ ಪ್ರಾಂಶುಪಾಲ ಡಾ.ತಿಪ್ಪೇಸ್ವಾಮಿ,ಉಪವಿಭಾಗಾಧಿಕಾರಿ ಅಶ್ವಿನ್,ತಹಶೀಲ್ದಾರ್ ರಶ್ಮಿ,ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಜಿಲ್ಲಾಧ್ಯಕ್ಷ ಎಂ.ಜಯರಾಮ್,ಡಾಕ್ಟರ್ ಪ್ರಶಾಂತ್ ಮೂರ್ತಿ,ಸೇರಿದಂತೆ ಹಲವು ಗಣ್ಯರು ಭಾಗವಹಿಸಿದರು.ಕಾರ್ಯಕ್ರಮದಲ್ಲಿ ಹೆಚ್ಚು ಬಾರಿ ರಕ್ತದಾನ ಮಾಡಿದ ದಾನಿಗಳನ್ನು ಸನ್ಮಾನಿಸಲಾಯಿತು.2025ರಲ್ಲಿ ರಕ್ತದಾನ ಶಿಬಿರಗಳನ್ನು ಯಶಸ್ವಿಯಾಗಿ ಆಯೋಜಿಸಿದ ಸಂಘ,ಸಂಸ್ಥೆಗಳಿಗೂ ಗೌರವ ಸಲ್ಲಿಸಲಾಯಿತು.

# ಭೂ ಅತಿಕ್ರಮಣ, ಜಿಲ್ಲಾಧಿಕಾರಿ ಕಚೇರಿ ಚಲೋ ಘೋಷಣೆ

• **ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ**



ಲೋಕಪ್ಪನಹೊಲ ಗ್ರಾಮದ ವಿವಿಧ ಸಮಸ್ಯೆಗಳ ಪರಿಹಾರ ಹಾಗೂ ಗ್ರಾಮಾಭಿವೃದ್ಧಿಗೆ ಸಂಬಂಧಿಸಿದ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಗ್ರಾಮಸ್ಥರು ಹೋರಾಟದ ಹಾದಿ ಹಿಡಿದಿದ್ದಾರೆ. ಈ ಕುರಿತು ಸೋಮವಾರ ಹಗರಿಬೊಮ್ಮನಹಳ್ಳಿಯ ಅಂಬೇಡ್ಕರ್ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಗ್ರಾಮಸ್ಥರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಪಾದಯಾತ್ರೆ ಚಳುವಳಿಯನ್ನು ಘೋಷಿಸಿದರು.

ಲೋಕಪ್ಪನಹೊಳ ಗ್ರಾಮಕ್ಕೆ ಹೊಂದಿಕೊಂಡು ಎಸ್ ಎಲ್ ಆರ್ ಕಂಪನಿಯ ಕೈಗಾರಿಕೆ ಸ್ಥಾಪನೆಯಾಗಿದ್ದು, ಆರಂಭದಲ್ಲಿ ಗ್ರಾಮಾಭಿವೃದ್ಧಿ ಹಾಗೂ ಸ್ಥಳೀಯರಿಗೆ ಉದ್ಯೋಗ ಸಿಗುವ ನಿರೀಕ್ಷೆಯಿಂದ ಗ್ರಾಮಸ್ಥರು ಅದನ್ನು ಸ್ವಾಗತಿಸಿದ್ದರು. ಆದರೆ ಕಂಪನಿಯು ಗ್ರಾಮದ ಅಭಿವೃದ್ಧಿಯನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದ್ದು, ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆ ಉಂಟುಮಾಡಿದೆ ಎಂದು ಆರೋಪಿಸಲಾಯಿತು.

ಗ್ರಾಮಕ್ಕೆ ಹೊಂದಿಕೊಂಡಿರುವ ನೂರಾರು ಎಕರೆ ಸರ್ಕಾರಿ ಭೂಮಿಯನ್ನು ಕಂಪನಿ ಅತಿಕ್ರಮಿಸಿಕೊಂಡಿದ್ದು, ಈ ಭೂಮಿಯಲ್ಲಿ ರೈತರು ಕೃಷಿ ಚಟುವಟಿಕೆ ನಡೆಸುತ್ತಿದ್ದರು ಹಾಗೂ ಜಾನುವಾರುಗಳಿಗೆ ಮೇವು ಮತ್ತು ನೀರಿನ ಆಶ್ರಯ ತಾಣವಾಗಿತ್ತು ಎಂದು ಗ್ರಾಮಸ್ಥರು ದೂರಿದರು. ಅಲ್ಲದೆ, ಹುಲಿಗುಡ್ಡದಿಂದ ವೆಂಕಟಾಪುರಕ್ಕೆ ಸಂಪರ್ಕ ಕಲ್ಪಿಸುವ ನಕ್ಷೆಯಲ್ಲಿ ಗುರುತಿಸಲಾದ ರೈತರ ಬಂಡಿ ರಸ್ತೆಯನ್ನು ಕಂಪನಿ ಮುಚ್ಚಿರುವುದರಿಂದ ರೈತರು ಹಲವು ಕಿಲೋಮೀಟರ್ ಸುತ್ತುವರಿದು ತಮ್ಮ ಜಮೀನುಗಳಿಗೆ ತೆರಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ತಿಳಿಸಿದರು.

ಇದೇ ವೇಳೆ ವ್ಯಾಸನಕೆರೆ ಏತ ನೀರಾವರಿ ಯೋಜನೆಯ ಮೊದಲ ಹಾಗೂ ಎರಡನೇ ಹಂತದ ಕಾಲುವೆಗಳನ್ನು ಕಂಪನಿ ತನ್ನ ವಶಕ್ಕೆ ಪಡೆದು-ಕೊಂಡ ಪರಿಣಾಮ ರೈತರಿಗೆ ನೀರು ತಲುಪದೇ ಕೃಷಿ ಚಟುವಟಿಕೆಗಳಿಗೆ ತೀವ್ರ ಹಿನ್ನಡೆಯಾಗಿದೆ ಎಂದು ಆರೋಪಿಸಿದರು. ಕೈಗಾರಿಕೆಯಿಂದ ಹೊರಬರುವ ಧೂಳು ಕೃಷಿ ಹಾಗೂ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಕುಡಿಯುವ ನೀರಿನ ಸಮಸ್ಯೆ ದಿನದಿಂದ ದಿನಕ್ಕೆ ಗಂಭೀರವಾಗುತ್ತಿದೆ. ಶಾಲಾ ಮಕ್ಕಳು ಮನೆಗಳಿಂದಲೇ ನೀರು ತೆಗೆದುಕೊಂಡು ಹೋಗಬೇಕಾದ ಪರಿಸ್ಥಿತಿ ಉಂಟಾಗಿದೆ. ಕೈಗಾರಿಕಾ ತ್ಯಾಜ್ಯವನ್ನು ತುಂಗಭದ್ರಾ ನದಿಗೆ ಹರಿಸಲಾಗುತ್ತಿದ್ದು, ಇದರಿಂದ ಜಲಚರ ಜೀವಿಗಳಿಗೂ ಹಾನಿಯಾಗುತ್ತಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕು, ಜಿಲ್ಲಾ ಆಡಳಿತ, ರಾಜ್ಯ ಸರ್ಕಾರ ಹಾಗೂ ಎಸ್ ಎಲ್ ಆರ್ * ಕಂಪನಿ ಗ್ರಾಮವನ್ನು ನಿರಂತರವಾಗಿ ನಿರ್ಲಕ್ಷ್ಯ ಮಾಡಿವೆ. ಹಲವು ಬಾರಿ ಮನವಿ ಸಲ್ಲಿಸಿದರೂ ಸಮಸ್ಯೆಗಳಿಗೆ ಪರಿಹಾರ ದೊರಕಿಲ್ಲ. ಹೀಗಾಗಿ *ಕರ್ನಾಟಕ ಮಹಾಜನ ಸೇನೆ, ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ *ಹಗರಿಬೊಮ್ಮನಹಳ್ಳಿ ಬಸವೇಶ್ವರ ವೃತ್ತದಿಂದ ಹೊಸಪೇಟೆ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಪಾದಯಾತ್ರೆಯ ಮೂಲಕ ಸರ್ಕಾರಿ ಭೂಮಿಯನ್ನು ಗ್ರಾಮಕ್ಕೆ ಮರಳಿ ನೀಡುವುದು, ಮುಚ್ಚಿರುವ ರೈತರ ರಸ್ತೆ ಹಾಗೂ ಕಾಲುವೆಗಳನ್ನು ತೆರವುಗೊಳಿಸುವುದು, ಭೂಮಿ ಕಳೆದುಕೊಂಡ ರೈತರು ಮತ್ತು ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗ ನೀಡುವುದು, ಆಶ್ರಯ ನಿವೇಶನಕ್ಕಾಗಿ ಸರ್ಕಾರಿ ಜಮೀನು ಮೀಸಲಿಡುವುದು ಹಾಗೂ ಹೊಸದಾಗಿ ನಿರ್ಮಾಣವಾಗುತ್ತಿರುವ ಕೋಕ್ ಪ್ಲಾಂಟ್ ಕಾಮಗಾರಿ ಸ್ಥಗಿತಗೊಳಿಸುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡಲಾಗುತ್ತಿದೆ ಎಂದು ಮುಖಂಡರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ಮಹಾಜನ ಸೇನೆ ಅಧ್ಯಕ್ಷ ಮಲ್ ಶಿವಕುಮಾರ , ಅಂಗವಿಕಲರ ಮುಖಂಡ ರಂಗಪ್ಪ ದಾಸರ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಸಂಚಾಲಕಿ ಸರ್ದಾರ್ ಹುಲಿಗೆಮ್ಮ ಸೇರಿದಂತೆ ಕೆ. ಲಕ್ಷ್ಮಣ, ಸಿ. ಹನುಮಂತ, ಪಿ. ಹನುಮಂತ, ಎಂ. ಸೋಹೇಲ್, ಬಾಬುಲ್, ವಿ. ಮೈಬುಸಾಬ್, ಯು. ಮಾಬುಸಾಬ್, ಪಿ. ಹುಲಿಗಪ್ಪ, ಸಿ. ನಾಗರಾಜ, ಚೌಟಿ ನಾಗರಾಜ, ಎಂ. ರಾಜಸಾಬ್, ಕಾಳಿ ಬಸಪ್ಪ, ಬಂಗಿ ಬಸಪ್ಪ, ಕಾಳೆ ಮಂಜುಳ, ತಂಬ್ರಹಳ್ಳಿ ಜಯಲಕ್ಷ್ಮಮ್ಮ, ರೇಖಾಮ್ಮ ಹಾಗೂ ಬಸಮ್ಮ ಉಪಸ್ಥಿತರಿದ್ದರು.

# ಶಾಲಾ–ಕಾಲೇಜು ಕಟ್ಟಡಗಳ ಸ್ಥಿತಿಗತಿ ಕುರಿತು ವರದಿ ನೀಡಲು ಸೂಚನೆ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**



ಜಿಲ್ಲೆಯಲ್ಲಿ ಕಳೆದ ಒಂದು ವಾರದಲ್ಲಿ ಶಾಲಾ ಕಟ್ಟಡಗಳ ಮೇಲ್ಛಾವಣಿ ಪದರ ಕುಸಿದು ಬಿದ್ದಿರುವ ಪ್ರಕರಣಗಳು ಕಂಡುಬಂದಿರುವ ಪ್ರಯುಕ್ತ ಇಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಸಂಕನೂರ ಅವರ ಅಧ್ಯಕ್ಷತೆಯಲ್ಲಿ ಸಂಬಂಧಿಸಿದ ಅಧಿಕಾರಗಳ ಸಭೆ ಹಮ್ಮಿಕೊಳ್ಳಲಾಗಿತ್ತು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಕಲಬುರಗಿ ಹಿರಿಯ ಅಧಿಕಾರಿಗಳು, ಶಿಕ್ಷಣ ಇಲಾಖೆ ಹಾಗೂ ಪಂಚಾಯತ್ ರಾಜ್,ಕೆ.ಆರ್.ಐ.ಡಿ.ಎಲ್ ಹಾಗೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

ಜಿಲ್ಲೆಯಲ್ಲಿನ ಸರಕಾರಿ ಶಾಲೆಗಳ ಕಟ್ಟಡದ ಪ್ರಸ್ತುತ ಸ್ಥಿತಿ ಗತಿಗಳ ಕುರಿತು ಜಿಲ್ಲೆಯ ಎಲ್ಲಾ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರಿಗೆ ಜಂಟಿಯಾಗಿ ತಮ್ಮ ತಾಲೂಕಿನ ಸರಕಾರಿ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಿ ಜಂಟಿ ವರದಿಯನ್ನು ಕೂಡಲೇ ಸಲ್ಲಿಸಲು ಸೂಚಿಸಲಾಯಿತು.

ಈ ಕುರಿತು ಮೇಲುಸ್ತುವಾರಿ ಮಾಡಲು ಉಪ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ಸೂಚಿಸುತ್ತಾ ರಿಪೇರಿ ಹಾಗೂ ಇನ್ನಿತರ ಸಣ್ಣ ಪುಟ್ಟ ದುರಸ್ತಿಗಳ ಶಾಲೆಗಳ ಪಟ್ಟಿ ಹಾಗೂ ದೊಡ್ಡ ಪ್ರಮಾಣದ ದುರಸ್ತಿ ಇದ್ದಲ್ಲಿ ಅಂತಹ ಪ್ರಸ್ತಾವನೆಯನ್ನು ತುರ್ತಾಗಿ ಸಲ್ಲಿಸಲು ಸಿಇಒ ಅವರು ತಿಳಿಸಿದರು. ಮುಂದುವರೆದು, ಮುಂಬರುವ ದಿನಗಳಲ್ಲಿ ಯಾವುದೇ ಅನಾಹುತಗಳು ಆಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಲು ಸಂಬಂದಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದರು.

# ಪತ್ರಕರ್ತರ ಸಂಘಕ್ಕೆ ನೂತನ ಸಾರಥಿಗಳ ಆಯ್ಕೆ

• **ಮಲ್ಲಮ್ಮ ನುಡಿ ವಾರ್ತೆ ಕಮಲನಗರ**



ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಮಲನಗರ ತಾಲ್ಲೂಕು ಘಟಕದ 2026–27ನೇ ಸಾಲಿನ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಶನಿವಾರ ಯಶಸ್ವಿಯಾಗಿ ಜರುಗಿತು. ಸಂಘದ ನೂತನ ಅಧ್ಯಕ್ಷರಾಗಿ ಮನೋಜ್‌ಕುಮಾರ್ ಹಿರೇ ಮಠ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಮಹಾದೇವ ಬಿರಾದಾರ ಅವರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ಜಿಲ್ಲಾಧ್ಯಕ್ಷ ಆನಂದ ದೇವಪ್ಪ ಅವರ ನೇತೃತ್ವದಲ್ಲಿ ನಡೆದ ಈ ಆಯ್ಕೆ ಪ್ರಕ್ರಿಯೆಯಲ್ಲಿ ನೂತನ ಪದಾಧಿಕಾರಿಗಳನ್ನು ಅಧಿಕೃತವಾಗಿ ಘೋಷಿಸಲಾಯಿತು.

**ಸನ್ಮಾನ ಮತ್ತು ಗೌರವ ಸಲ್ಲಿಕೆ**

ಜಿಲ್ಲಾಧ್ಯಕ್ಷ ಆನಂದ ದೇವಪ್ಪ, ಉಪಾಧ್ಯಕ್ಷರಾದ ಪ್ರಥ್ವಿ ಎಸ್. ಹಾಗೂ ಸ್ವಾಮಿದಾಸ ನಾಗುರೆ, ಜಿಲ್ಲಾ ಕಾರ್ಯಕಾರಣಿ ಸದಸ್ಯ ಶ್ರೀಕಾಂತ ಪಾಟೀಲ, ಪ್ರಧಾನ ಕಾರ್ಯದರ್ಶಿ ಶಿವಕುಮಾರ ಸ್ವಾಮಿ, ಕಾರ್ಯದರ್ಶಿಗಳಾದ ಸಂತೋಷ ಚಟ್ಟಿ ಮತ್ತು ರಾಜಕುಮಾರ ಸಗರ ಅವರನ್ನೊಳಗೊಂಡ ಜಿಲ್ಲಾ ತಂಡವು ನೂತನ ಅಧ್ಯಕ್ಷ ಮನೋಜ್ ಹಿರೇಮಠ ಮತ್ತು ಪ್ರಧಾನ ಕಾರ್ಯದರ್ಶಿ ಮಹಾದೇವ ಬಿರಾದಾರ ಅವರ ಹೆಸರುಗಳನ್ನು ಅಧಿಕೃತವಾಗಿ ಪ್ರಕಟಿಸಿ, ಮಾಲಾರ್ಪಣೆ ಮಾಡಿ ಸನ್ಮಾನಿಸಿತು.

**ಪತ್ರಿಕೋದ್ಯಮದ ಹಿತ ಕಾಯಲು ಶ್ರಮಿಸಲಿ:** "ತಾಲ್ಲೂಕಿನ ಪತ್ರಕರ್ತರ ಹಿತರಕ್ಷಣೆ ಹಾಗೂ ಸಂಘಟನೆಯ ಬಲವರ್ಧನೆಗೆ ನೂತನ ಪದಾಧಿಕಾರಿಗಳ ನೇತೃತ್ವದ ತಂಡ ಯಶಸ್ವಿಯಾಗಿ ಕಾರ್ಯನಿರ್ವಹಿಸಲಿ" ಎಂದು ಈ ಸಂದರ್ಭದಲ್ಲಿ ಜಿಲ್ಲಾ ಮುಖಂಡರು ಆಶಿಸಿದರು.

**ಗಣ್ಯರ ಉಪಸ್ಥಿತಿ**

ಈ ಮಹತ್ವದ ಪದಗ್ರಹಣ ಕಾರ್ಯಕ್ರಮದಲ್ಲಿ ತಾಲ್ಲೂಕಿನ ಪ್ರಮುಖರು ಹಾಗೂ ಪತ್ರಕರ್ತರಾದ ಡಾ. ಎಸ್.ಎಸ್.ಮೈನಾಳೆ, ಬಿ.ಬಿ. ಹೆಡೆ, ಪ್ರಶಾಂತ ಮಠಪತಿ, ಸಿ.ಎಂ. ಗಳಗೆ, ಬಾಲಾಜಿ ಫಿರಂಗೆ, ರಾಜಶೇಖರ ಅಜ್ಜ, ಸವಿತಾ ರಾಜಶೇಖರ ಅಜ್ಜ, ನಿತಿನ ಶಿವಣಕರ್, ಪರಮೇಶ ರಾಂಪುರೆ, ಸಂಗಮೇಶ ಮುರ್ಕೆ, ಮಹಾದು ಬರ್ಗೆ, ಸಂಜೀವಕುಮಾರ ನವಾಡೆ, ಮೊಯಿನ್ ಅತನೂರೆ, ಶಿವಾನಂದ ಬಿಚಕುಂದೆ, ಇಲಾಹಿ ಬಾಗವಾನ, ಪ್ರವೀಣ ಹೊಂಡಾಳೆ, ಸಂತೋಷ ದಿಂಡೆ ಹಾಗೂ ಸಂತೋಷ ಕಳಗಾಪುರಕರ್ ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದು, ನೂತನ ಸಾರಥಿಗಳಿಗೆ ಶುಭ ಹಾರೈಸಿದರು.

# 6 ಸಾವಿರ ಉಚಿತ ಪುಸ್ತಕಗಳ ವಿತರಣೆ

• **ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ**



ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ನಗರದ ಗ್ರಾಮದೇವತೆ ದುರ್ಗಾದೇವಿ ದೇವಸ್ಥಾನ ಸಮಿತಿಯ ಅಧ್ಯಕ್ಷರಾದ ಜೋಗದ ನಾರಾಯಣಪ್ಪ ನಾಯಕ್ ಹಾಗೂ ಜೆಎನ್‌ಎನ್ ಕುಟುಂಬಸ್ಥರ ವತಿಯಿಂದ 16ನೇ ವರ್ಷದ ಉಚಿತ ಪುಸ್ತಕ ವಿತರಣಾ ಕಾರ್ಯಕ್ರಮವನ್ನು ಸೋಮವಾರ ದುರ್ಗಾದೇವಿ ದೇವಸ್ಥಾನದ ಸಭಾಂಗಣದಲ್ಲಿ ಆಯೋಜಿಸಲಾಯಿತು.

ಕಾರ್ಯಕ್ರಮಕ್ಕೆ ಶಾಸಕ ಜನಾರ್ಧನ್ ರೆಡ್ಡಿ ಚಾಲನೆ ನೀಡಿ ಮಾತನಾಡಿ, ಕಡು ಬಡತನದಿಂದ ಬೆಳೆದು ಬಂದ ಜೋಗದ ನಾರಾಯಣಪ್ಪ ನಾಯಕ್ ಅವರು ಇಂದು ಸಾವಿರಾರು ಬಡ ವಿದ್ಯಾರ್ಥಿಗಳಿಗೆ ನೆರವಾಗುತ್ತಿರುವುದು ಮಾದರಿಯ ಕಾರ್ಯವಾಗಿದೆ ಎಂದು ಶ್ಲಾಘಿಸಿದರು.

ಎರಡು ಲಕ್ಷ ರೂಪಾಯಿ ಮೌಲ್ಯದ ನೋಟ್ ಪುಸ್ತಕಗಳನ್ನು ಸುಮಾರು 6 ಸಾವಿರ ಪುಸ್ತಕ, ಉಚಿತವಾಗಿ ವಿದ್ಯಾರ್ಥಿಗಳಿಗೆ ವಿತರಿಸುತ್ತಿರುವುದು ಶಿಕ್ಷಣ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಿದೆ ಎಂದರು.

ದೇವರು ನೀಡಿದ ಸಂಪತ್ತಿನ ಒಂದು ಭಾಗವನ್ನು ಸಮಾಜ ಸೇವೆಗೆ ಬಳಸಿದಾಗ ಬದುಕಿನಲ್ಲಿ ಸುಖ, ಶಾಂತಿ ಮತ್ತು ನೆಮ್ಮದಿ ದೊರೆಯುತ್ತದೆ ಎಂದು ತಿಳಿಸಿದ ಅವರು, ತಾವು ಸಹ ಬಡತನದಿಂದ ಬೆಳೆದು ಬಂದಿದ್ದು, ದೇವರ ಅನುಗ್ರಹ ಹಾಗೂ ಹಿರಿಯರ ಆಶೀರ್ವಾದದಿಂದ ಇಂತಹ ಪುಣ್ಯ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗಿದೆ ಎಂದು ಹೇಳಿದರು.

ಮಾಜಿ ಶಾಸಕ ಪರಣ್ಣ ಮನವಳ್ಳಿ ಮಾತನಾಡಿ, ಬಡತನ ನಿವಾರಣೆಗೆ ಶಿಕ್ಷಣವೇ ಪ್ರಮುಖ ಸಾಧನವಾಗಿದ್ದು, ಸರ್ಕಾರಿ ಶಾಲೆಗಳ ಬಡ ವಿದ್ಯಾರ್ಥಿಗಳಿಗೆ ನೀಡುವ ಇಂತಹ ನೆರವು ಅವರ ಭವಿಷ್ಯವನ್ನು ರೂಪಿಸಲು ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಆಯೋಜಕರಾದ ಜೋಗದ ನಾರಾಯಣಪ್ಪ ನಾಯಕ್ ಮಾತನಾಡಿ, ಶ್ರೀ ದುರ್ಗಾದೇವಿಯ ಆಶೀರ್ವಾದದಿಂದ ಕಳೆದ ಹಲವು ವರ್ಷಗಳಿಂದ ಬಡ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕಗಳನ್ನು ವಿತರಿಸುತ್ತ ಬಂದಿರುವುದಾಗಿ ತಿಳಿಸಿದರು. ತಮ್ಮ ಬಾಲ್ಯದ ಬಡತನದ ದಿನಗಳನ್ನು ಸ್ಮರಿಸಿಕೊಂಡ ಅವರು, ಶಿಕ್ಷಣದ ಮಹತ್ವವನ್ನು ಮನಗಂಡು ಈ ಸೇವಾ ಕಾರ್ಯವನ್ನು ನಿರಂತರವಾಗಿ ಮುಂದುವರಿಸುತ್ತಿರುವುದಾ ಗಿ ಹೇಳಿದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಮಲ್ಲಿಕಾರ್ಜುನ ನಾಗಪ್ಪ, ಮಾಜಿ ಸಂಸದ ಎಸ್. ಶಿವರಾಮೇಗೌಡ, ಶಿಕ್ಷಣ ಪ್ರೇಮಿ ನೆಕ್ಕಂಟಿ ಸೂರಿ ಬಾಬು, ಕೆ.ಆರ್.ಪಿ.ಪಿ ಮುಖಂಡ ಸಿದ್ದು ಮುದ್ದೇಬಿಹಾಳ, ಬಿಜೆಪಿ ಮುಖಂಡ ಸಿಂಗನಾಳ ವಿರೂಪಾಕ್ಷಪ್ಪ, ಅಮರಜ್ಯೋತಿ ನರಸಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ನಟೇಶ್, ಹನುಮಂತಪ್ಪ ನಾಯಕ್, ವೀರಭದ್ರಪ್ಪ ನಾಯಕ್, ಹೊಸಮಲಿ ಮಲ್ಲೇಶಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಗಂಗಾವತಿ ನಗರ ಹಾಗೂ ತಾಲೂಕಿನ ವಿವಿಧ ಸರ್ಕಾರಿ ಶಾಲೆಗಳ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಚಿತ ಪುಸ್ತಕಗಳನ್ನು ಪಡೆದು ಜೆಎನ್‌ಎನ್ ಕುಟುಂಬಸ್ಥರ ಸಮಾಜಮುಖಿ ಕಾರ್ಯವನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದರು.

## ಉಚಿತ ಲಸಿಕಾ ಕಾರ್ಯಕ್ರಮ



**ವಿಜಯಪುರ:** ಬಿಜಾಪುರ್ ಪೆಟ್ ಮಾರ್ಟ್ ಕೇವಲ ವ್ಯಾಪಾರಕ್ಕಷ್ಟೇ ಸೀಮಿತವಾಗದೆ, ಸಾಮಾಜಿಕ ಕಳಕಳಿಯನ್ನೂ ಮೆರೆದಿದೆ. ವಿಜಯಪುರ ನಗರವನ್ನು "ರೇಬಿಸ್ ಮುಕ್ತ ವಿಜಯಪುರ" ವನ್ನಾಗಿಸುವ ಮಹತ್ತರ ಉದ್ದೇಶವನ್ನು ಹೊಂದಿರುವ ಪೆಟ್ ಮಾರ್ಟ್ ಪ್ರತಿ ತಿಂಗಳು ಪ್ರಾಣಿಗಳ ಕಲ್ಯಾಣಕ್ಕಾಗಿ ಒಂದೊಂದು ವಿಶೇಷ ಅಭಿಯಾನವನ್ನು ನಡೆಸಲು ನಿರ್ಧರಿಸಿದ್ದು ಅದರ ಮೊದಲ ಹೆಜ್ಜೆಯಾಗಿ ರವಿವಾರದಂದು ಉಚಿತ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಂಡು ನೂರಾರು ಸಾಕು ಶ್ವಾನ ಮತ್ತು ದೇಶಿ ತಳಿಯ ಶ್ವಾನ ಮತ್ತು ಬೆಕ್ಕುಗಳಿಗೆ ಉಚಿತ ಲಸಿಕೆಯನ್ನು ನುರಿತ ವೈದ್ಯರಾದ ಸೋಯಲ್ ಮದ್ದು ನೀಡಿ ಆರೋಗ್ಯ ಪರಿಶೀಲಿಸಿದರು.

ನೂರಾರು ಬೆಕ್ಕು, ಬೀದಿ ಹಾಗೂ ಸಾಕು ನಾಯಿಗಳಿಗೆ ಉಚಿತ ರೇಬಿಸ್ ಪ್ರತಿರೋಧಕ ಲಸಿಕೆ ನೀಡಿ ಶ್ವಾನಗಳ ಆರೋಗ್ಯ ವೃದ್ಧಿಗಾಗಿ ಉನ್ನತ ಗುಣಮಟ್ಟದ ಆಹಾರದ ಸ್ಯಾಂಪಲ್‌ಗಳ ಉಚಿತ ವಿತರಣೆ ನಡೆಸಿದರು ಈ ಕಾರ್ಯಕ್ರಮದಲ್ಲಿ ನೂರಾರು ಪ್ರಾಣಿ ಪ್ರಿಯರು ಭಾಗವಹಿಸಿ ತಮ್ಮ ಮುದ್ದು ಪ್ರಾಣಿಗಳ ಜೊತೆಗೆ ಭೇಟಿ ನೀಡಿದರು.

ಒಟ್ಟಾರೆಯಾಗಿ ಬಿಜಾಪುರ ಪೆಟ್ ಮಾರ್ಟ್ ಮಾದರಿ ಕಾರ್ಯದಿಂದ ಮೂಕ ಪ್ರಾಣಿಗಳ ಹಿತದೃಷ್ಟಿಯಿಂದ ಪ್ರತಿ ತಿಂಗಳು ವಿಭಿನ್ನ ಜಾಗೃತಿ ಹಾಗೂ ಸೇವಾ ಕಾರ್ಯಕ್ರಮಗಳ ಆಯೋಜನೆಗೆ ನಗರದ ಶ್ವಾನ ಪ್ರೇಮಿಗಳು, ಸಾರ್ವಜನಿಕರು ಬಿಜಾಪುರ್ ಪೆಟ್ ಮಾರ್ಟ್‌ನ ಈ ಮಹತ್ಕಾರ್ಯಕ್ಕೆ ವ್ಯಾಪಕ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ರೀತಿಯ ಅಭಿಯಾನಗಳು ನಗರದಲ್ಲಿ ಸಾಕುಪ್ರಾಣಿಗಳ ಆರೈಕೆಯ ಬಗ್ಗೆ ಜಾಗೃತಿ ಮೂಡಿಸಲು ಪ್ರೇರಣೆಯಾಗಿವೆ.




**ಸಾಕು ಪ್ರಾಣಿಗಳ ಜೊತೆಗೆ ನಗರದಲ್ಲಿ ಬೀದಿ ಶ್ವಾನಗಳ ಆರೋಗ್ಯ ಕಾಪಾಡುವುದು ಮತ್ತು ರೇಬಿಸ್ ಮುಕ್ತ ಪರಿಸರ ನಿರ್ಮಿಸುವುದು ನಮ್ಮ ಮುಖ್ಯ ಉದ್ದೇಶ. ಸಾರ್ವಜನಿಕರು ತಮ್ಮ ಸಾಕುಪ್ರಾಣಿಗಳಿಗೆ ಮತ್ತು ಆಹಾರ ನೀಡುವವರು ಸಕಾಲದಲ್ಲಿ ಲಸಿಕೆ ಹಾಕಿಸುವ ಮೂಲಕ ಈ ಅಭಿಯಾನಕ್ಕೆ ಕೈಜೋಡಿಸಬೇಕು.**

**–ಬಿಜಾಪುರ್ ಪೆಟ್ ಮಾರ್ಟ್ ಪ್ರಮುಖರು**

## ಖಂಡ್ರೆಗೆ ನಮ್ಮ ಕರ್ನಾಟಕ ಸೇನೆ ಸನ್ಮಾನ



**ಬೀದರ್:** ನಮ್ಮ ಕರ್ನಾಟಕ ಸೇನೆಯ ಜಿಲ್ಲಾ ಘಟಕದ ವತಿಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಖಾತೆ ನೂತನ ಸಚಿವ ಈಶ್ವರ ಖಂಡ್ರೆ ಅವರನ್ನು ಬೆಂಗಳೂರಿನಲ್ಲಿ ಭಾನುವಾರ ಸನ್ಮಾನಿಸಲಾಯಿತು. ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ಗಣೇಶ ಪಾಟೀಲ ಜ್ಯಾಂತಿ ಶಾಲು ಹೊದಿಸಿ, ಪುಷ್ಪಗುಚ್ಛ ನೀಡಿ ಸತ್ಕರಿಸಿದರು.

ಈಶ್ವರ ಖಂಡ್ರೆ ಅವರಿಗೆ ಮಹತ್ವದ ಖಾತೆ ದೊರೆತಿದ್ದು, ರಾಜ್ಯದಲ್ಲಿ ಬಹಳಷ್ಟು ಅಭಿವೃದ್ಧಿ ಕಾರ್ಯಗಳು ಆಗಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸೇನೆಯ ಜಿಲ್ಲಾ ಘಟಕದ ಪದಾಧಿಕಾರಿಗಳಾದ ಸಂಜು ಯಾದವ್, ರವಿ ಪಾಟೀಲ, ನಾಗೇಶ ಪಾಟೀಲ, ಸುರೇಶ ಕಲಬುರಗಿ, ತಾಲ್ಲೂಕು ಅಧ್ಯಕ್ಷರಾದ ಬಸವರಾಜ ಕಾರಬಾರಿ, ಅನಿಲ್ ರಾಜಗೀರಾ, ಸುಧೀರ್ ದಡ್ಡೆ ಮತ್ತಿತರರು ಇದ್ದರು.

## ಪುರುಷೋತ್ತಮ ಹೋಮ ಸಂಪನ್ನ



**ಗಂಗಾವತಿ:** ನಗರದ ಯೋಗೀಶ್ವರ ಯಜ್ಞ ಮಂದಿರದಲ್ಲಿ ರವಿವಾರದಂದು ಅಧಿಕಮಾಸದ ಪ್ರಯುಕ್ತ ಜರುಗಿದ ಶ್ರೀ ಪುರುಷೋತ್ತಮ ಹೋಮ ಹುಣಸಿ ಹೊಳಿಮಠದ ಕಣ್ವ ಮಠದ ಪೀಠಾಧಿಕಾರಿಗಳ ದಿವ್ಯ ಸಾನಿಧ್ಯದಲ್ಲಿ ಪುರೋಹಿತರಾದ ಪ್ರದೀಪ ಆಚಾರ್ ಅನಿಲ್ ಭಟ್ ಪವನ್ ಕುಮಾರ್ ಇವರ ನೇತೃತ್ವದಲ್ಲಿ ಶ್ರದ್ಧೆ ಭಕ್ತಿಯಿಂದ ಭಕ್ತಿಯಿಂದ ಶ್ರೀಮತಿ ಜ್ಯೋತಿ ಸತ್ಯನಾರಾಯಣ ದಂಪತಿಗಳು ಹಾಗೂ ದೇವಸ್ಥಾನ ಸಮಿತಿಯ ಅಧ್ಯಕ್ಷ ಮುರಳಿಧ ಗಂಗಾನಾಳ್ ಪೂರ್ಣಾಹು ತಿಯನ್ನು ಸಾಂಗತವಾಗಿ ನೆರವೇರಿಸಿದರು.

ಈ ಸಂದರ್ಭದಲ್ಲಿ ಭಕ್ತಾದಿಗಳಿಗೆ ಪೂಜ್ಯರು ಮುದ್ರಾ ದಾರ ಣ ನೆರವೇರಿಸಿದರು. ಅಪಾರ ಸಂಖ್ಯೆಯ ಭಕ್ತಾದಿಗಳು ಕಣ್ವ ಪೀಠದ ಗುರುಗಳಿಗೆ ಪಾದಪೂಜೆಯನ್ನು ನೆರವೇರಿಸುವುದರ ಮೂಲಕ ತಮ್ಮ ಭಕ್ತಿ ಪರಾಕಾಸ್ಟ್ ಮೆರೆದರು. ಬಳಿಕ ಪೂಜ್ಯರಿಂದ ಸಂಸ್ಥಾನ ಪೂಜೆ ಶ್ರೀ ಸತ್ಯನಾರಾಯಣ ಪೂಜೆ ಆಶೀರ್ವಚನ ಹಾಗೂ ತೀರ್ಥ ಪ್ರಸಾದ ನಡೆಸಲಾಯಿತು. ಒಟ್ಟಾರೆ ಅಧಿಕಮಾಸದ ಎಲ್ಲಾ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ಅತ್ಯಂತ ಅರ್ಥಪೂರ್ಣವಾಗಿ ನಡೆಸಲಾಯಿತು.

# ನಿರ್ಭೀತ ವರದಿಗಾರ ರತ್ನ ಪ್ರಶಸ್ತಿ ಪ್ರದಾನ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ನಗರದ ಬಾಲ ಹೋಟೆಲ್‌ನಲ್ಲಿ ಸೂರ್ಯ ನ್ಯೂಸ್ ಕನ್ನಡ ಮಾಧ್ಯಮದ ವತಿಯಿಂದ ಭಾನುವಾರ ಅದ್ಧೂರಿಯಾಗಿ ಆಯೋಜಿಸಲಾದ ವಾರ್ಷಿಕೋತ್ಸವ ಹಾಗೂ ಸಾಧಕರ ಸನ್ಮಾನ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ ಗಣ್ಯರನ್ನು ಗೌರವಿಸಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮವನ್ನು ಸೂರ್ಯ ನ್ಯೂಸ್ ಕನ್ನಡದ ಸಂಪಾದಕರಾದ ಹೇಮಂತ್ ರಾಜ್ ಅವರು ಅಚ್ಚುಕಟ್ಟಾಗಿ ನಿರ್ವಹಿಸಿ, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರನ್ನು ಗುರುತಿಸಿ ಸನ್ಮಾನಿಸುವ ಮೂಲಕ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ತಂದರು.

ಈ ಸಂದರ್ಭದಲ್ಲಿ ಸಮಾಜಮುಖಿ ಪತ್ರಿಕೋದ್ಯಮ, ಜನಪರ ಹೋರಾಟಗಳು ಹಾಗೂ ನಿರಂತರ ಮಾಧ್ಯಮ ಸೇವೆಯ ಮೂಲಕ ಗುರುತಿಸಿಕೊಂಡಿರುವ ಸಿಂಧೂರ ಭಾರತ ವಾರಪತ್ರಿಕೆಯ ಸಂಪಾದಕರಾದ ಹೊನ್ನುರಸ್ವಾಮಿ ಕೆ.ಟಿ. ಅವರಿಗೆ ಪ್ರತಿಷ್ಠಿತ "ನಿರ್ಭೀತ ವರದಿಗಾರ ರತ್ನ" ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಪ್ರಶಸ್ತಿ ಸ್ವೀಕರಿಸಿದ ಹೊನ್ನುರಸ್ವಾಮಿ ಕೆ.ಟಿ. ಅವರು ಮಾತನಾಡಿ, "ಮಾಧ್ಯಮ ಕ್ಷೇತ್ರದಲ್ಲಿ ಪ್ರಾಮಾಣಿಕತೆ, ಧೈರ್ಯ ಮತ್ತು ಜನಪರ ಬದ್ಧತೆಯನ್ನು ಉಳಿಸಿಕೊಂಡು ಪತ್ರಿಕೋದ್ಯಮವನ್ನು ಜನರ ಧ್ವನಿಯನ್ನಾಗಿ ರೂಪಿಸುವ ಕಾರ್ಯದಲ್ಲಿ ಸೂರ್ಯ ನ್ಯೂಸ್ ಕನ್ನಡ ಮಹತ್ತರ ಪಾತ್ರ ವಹಿಸುತ್ತಿದೆ. ವಿಶೇಷವಾಗಿ ಸಂಪಾದಕರಾದ ಹೇಮಂತ್ ರಾಜ್ ಅವರು ಪ್ರತಿಭಾವಂತರನ್ನು ಗುರುತಿಸಿ ಪ್ರೋತ್ಸಾಹಿಸುವ ಮೂಲಕ ಮಾಧ್ಯಮ ಕ್ಷೇತ್ರಕ್ಕೆ ಹೊಸ ಚೈತನ್ಯ ತುಂಬುತ್ತಿದ್ದಾರೆ. ನನ್ನಂತಹ ಸಾಮಾನ್ಯ ಪತ್ರಕರ್ತನ ಸೇವೆಯನ್ನು ಗುರುತಿಸಿ 'ನಿರ್ಭೀತ ವರದಿಗಾರ ರತ್ನ' ಪ್ರಶಸ್ತಿ ನೀಡಿ ಗೌರವಿಸಿರುವುದು ನನ್ನ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ. ಈ ಗೌರವವನ್ನು ನಾನು ಜನಸೇವೆ, ಸತ್ಯನಿಷ್ಠೆ ಹಾಗೂ ಪತ್ರಿಕೋದ್ಯಮದ ಮೌಲ್ಯಗಳಿಗೆ ಸಮರ್ಪಿಸುತ್ತೇನೆ" ಎಂದು ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪರಮ ಪೂಜ್ಯ ಶ್ರೀ ಮ.ನಿ. ಪ್ರಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಶಾಖಾ ಮಠ, ಸೋಮಸಮುದ್ರ ಹಾಗೂ ಪರಮ ಪೂಜ್ಯ ಶ್ರೀ ಮರಿಕೊಟ್ಟೂರು ದೇವರು, ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಸಂಸ್ಥಾನ ಶಾಖಾ ವಿರಕ್ತ ಮಠ, ಶ್ರೀಧರಗಡ್ಡೆ ವಹಿಸಿದ್ದರು.

## ಶಿಕ್ಷಣ ಸಂಸ್ಥೆಗಳ ಮೇಲೆ ನಿಗಾ: ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬಳ್ಳಾರಿ, : ಬಳ್ಳಾರಿ ಜಿಲ್ಲೆಯ ಹಲವಾರು ಖಾಸಗಿ ಶಿಕ್ಷಣ ಸಂಸ್ಥೆಗಳ ವಿರುದ್ಧ ಪೋಷಕರು ಹಾಗೂ ಸಾರ್ವಜನಿಕರಿಂದ ಅಸಮಾಧಾನ ವ್ಯಕ್ತವಾಗುತ್ತಿದೆ. ಶಿಕ್ಷಣ ಸಂಸ್ಥೆಗಳು ಸರ್ಕಾರ ನಿಗದಿಪಡಿಸಿದ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕವನ್ನು ವಸೂಲಿ ಮಾಡುತ್ತಿವೆ ಎಂಬ ಆರೋಪಗಳು ಕೇಳಿಬರುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ಕಟ್ಟುನಿಟ್ಟಿನ ನಿಗಾ ವಹಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ಪೋಷಕರ ಪ್ರಕಾರ, ಶಾಲಾ ಶುಲ್ಕದ ಜೊತೆಗೆ ಪ್ರವೇಶ ಶುಲ್ಕ, ವಾರ್ಷಿಕ ಅಭಿವೃದ್ಧಿ ಶುಲ್ಕ, ಸಾರಿಗೆ ಶುಲ್ಕ ಹಾಗೂ ವಿವಿಧ ಹೆಸರಿನಲ್ಲಿ ಹೆಚ್ಚುವರಿ ಹಣ ಸಂಗ್ರಹಿಸಲಾಗುತ್ತಿದೆ. ಇದರಿಂದ ಮಧ್ಯಮ ಮತ್ತು ಬಡ ಕುಟುಂಬಗಳ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿದೆ ಎಂದು ಅವರು ದೂರಿದ್ದಾರೆ. ಇದರ ಜೊತೆಗೆ, ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳ ಕೊರತೆ ಇದೆ ಎಂಬ ಆರೋಪವೂ ಕೇಳಿಬಂದಿದೆ. ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಸ್ವಚ್ಛ ಶೌಚಾಲಯಗಳು, ಸುರಕ್ಷಿತ ಕಟ್ಟಡಗಳು, ಸಮರ್ಪಕ ಆಟದ ಮೈದಾನ, ಗ್ರಂಥಾಲಯ ಮತ್ತು ಪ್ರಯೋಗಾಲಯ ಸೌಲಭ್ಯಗಳು ಸಮರ್ಪಕವಾಗಿ ಲಭ್ಯವಿಲ್ಲ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಶಿಕ್ಷಣ ಇಲಾಖೆ ಅಧಿಕಾರಿಗಳು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ನಿಯಮಿತ ತಪಾಸಣೆ ನಡೆಸಿ, ಶುಲ್ಕ ನಿಯಮಾವಳಿಗಳ ಪಾಲನೆ ಹಾಗೂ ಮೂಲಭೂತ ಸೌಕರ್ಯಗಳ ಲಭ್ಯತೆಯನ್ನು ಪರಿಶೀಲಿಸಬೇಕು ಎಂದು ಪೋಷಕರು ಆಗ್ರಹಿಸಿದ್ದಾರೆ. ನಿಯಮ ಉಲ್ಲಂಘಿಸುವ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಮೂಲಕ ವಿದ್ಯಾರ್ಥಿಗಳ ಹಿತಾಸಕ್ತಿ ಕಾಪಾಡಬೇಕು ಎಂಬುದು ಅವರ ಒತ್ತಾಯವಾಗಿದೆ. ಸಾರ್ವಜನಿಕ ಸಂಘಟನೆಗಳ ಪ್ರತಿನಿಧಿಗಳು ಕೂಡ ಈ ಕುರಿತು ಜಿಲ್ಲಾಡಳಿತ ಹಾಗೂ ಶಿಕ್ಷಣ ಇಲಾಖೆಗೆ ಮನವಿ ಸಲ್ಲಿಸಲು ಮುಂದಾಗಿದ್ದು, ಜಿಲ್ಲೆಯ ಎಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳ ಕಾರ್ಯವೈಖರಿಯ ಕುರಿತು ಸಮಗ್ರ ಪರಿಶೀಲನೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

# ಸಚಿವ ಈಶ್ವರ ಖಂಡ್ರೆಗೆ ಗುದಗೆ ಆಸ್ಪತ್ರೆ ವತಿಯಿಂದ ಸನ್ಮಾನ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಕರ್ನಾಟಕ ಸರ್ಕಾರದ ನೂತನ ಸಚಿವ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಬಾರಿಗೆ ಬೀದರ್ ಜಿಲ್ಲೆಗೆ ಆಗಮಿಸಿದ ಸಚಿವ ಈಶ್ವರ ಖಂಡ್ರೆ ಅವರಿಗೆ ನಗರದ ಪ್ರತಿಷ್ಠಿತ ಗುದಗೆ ಆಸ್ಪತ್ರೆ ವತಿಯಿಂದ ಆತ್ಮೀಯ ಹಾಗೂ ಗೌರವಪೂರ್ಣ ಸನ್ಮಾನ ನೆರವೇರಿಸಲಾಯಿತು.

ಬೀದರ್ ನಗರದ ಆರೋಗ್ಯ ಕ್ಷೇತ್ರದಲ್ಲಿ ವಿಶಿಷ್ಟ ಸೇವೆ ಸಲ್ಲಿಸುತ್ತಿರುವ ಗುದಗೆ ಆಸ್ಪತ್ರೆಯ ಅಧ್ಯಕ್ಷರು ಹಾಗೂ ಖ್ಯಾತ ಹೃದಯ ತಜ್ಞರಾದ ಡಾ.ಚಂದ್ರಕಾಂತ್ ಗುದಗೆ ಅವರು ಸಚಿವ ಈಶ್ವರ ಖಂಡ್ರೆ ಅವರನ್ನು ಶಾಲು ಹೊದಿಸಿ, ಪುಷ್ಪಗುಚ್ಛ ನೀಡಿ ಸನ್ಮಾನಿಸಿದರು. ಸಚಿವರ ನೂತನ ಜವಾಬ್ದಾರಿಯ ಯಶಸ್ಸಿಗೆ ಶುಭ ಹಾರೈಸಿದ ಅವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೂಲಕ ರಾಜ್ಯದ ಗ್ರಾಮೀಣ ಭಾಗಗಳ ಸಮಗ್ರ ಅಭಿವೃದ್ಧಿಗೆ ಹೊಸ ಚೈತನ್ಯ ದೊರೆಯಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.



ಈ ಸಂದರ್ಭದಲ್ಲಿ ಜನಸಾಮಾನ್ಯರ ಸೇವೆಯಲ್ಲಿ ತೊಡಗಿಸಿಕೊಂಡು ಬಡ ರೋಗಿಗಳ ವೈದ್ಯರೆಂದೇ ಜನಪ್ರಿಯತೆ ಪಡೆದಿರುವ ಡಾ.ಸಚಿನ್ ಗುದಗೆ, ಹೆಸರಾಂತ ಹೃದಯ ತಜ್ಞರಾದ ಡಾ.ನಿತಿನ್ ಗುದಗೆ ಹಾಗೂ ಡಾ. ಮಹೇಶ್ ತೊಂಡಾರೆ ಅವರು ಕೂಡ ಸಚಿವರನ್ನು ಸನ್ಮಾನಿಸಿ ಅಭಿನಂದನೆ ಸಲ್ಲಿಸಿದರು. ಸಚಿವರ ಜನಪರ ಕಾರ್ಯವೈಖರಿ ಹಾಗೂ ಅಭಿವೃದ್ಧಿ ಚಿಂತನೆಗಳನ್ನು ಶ್ಲಾಘಿಸಿದ ವೈದ್ಯರು, ಬೀದರ್ ಜಿಲ್ಲೆ ಸೇರಿದಂತೆ ರಾಜ್ಯದ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಅವರ ನಾಯಕತ್ವ ಮಹತ್ವದ ಪಾತ್ರ ವಹಿಸಲಿದೆ ಎಂದು ಅಭಿಪ್ರಾಯಪಟ್ಟರು.

**ಗುದಗೆ ಆಸ್ಪತ್ರೆಯ ವೈದ್ಯರ ಸೇವಾ ಮನೋಭಾವವನ್ನು ಮೆಚ್ಚುಗೆ ವ್ಯಕ್ತಪಡಿಸಿದರು. ಆರೋಗ್ಯ ಕ್ಷೇತ್ರದಲ್ಲಿ ಆಸ್ಪತ್ರೆಯು ಸಲ್ಲಿಸುತ್ತಿರುವ ಸೇವೆ ಶ್ಲಾಘನೀಯವಾಗಿದ್ದು, ಬಡ ಹಾಗೂ ಮಧ್ಯಮ ವರ್ಗದ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ಒದಗಿಸುವ ಮೂಲಕ ಸಮಾಜಮುಖಿ ಕಾರ್ಯ ನಿರ್ವಹಿಸುತ್ತಿದೆ ಎಂದು ಹೇಳಿದರು.**

**–ಈಶ್ವರ ಬಿ ಖಂಡ್ರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು**

ಕಾರ್ಯಕ್ರಮದಲ್ಲಿ ಗುದಗೆ ಆಸ್ಪತ್ರೆಯ ತಜ್ಞ ವೈದ್ಯರು, ವೈದ್ಯಕೀಯ ಸಿಬ್ಬಂದಿ, ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಹೋರಾಟ ಸಮಿತಿ ಅಧ್ಯಕ್ಷ ನಿಂಗನಗೌಡ ದೇಸಾಯಿ ಇನ್ನಿಲ್ಲ

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ

ಕೆಂಭಾವಿಯನ್ನು ತಾಲೂಕು ಕೇಂದ್ರವನ್ನಾಗಿ ಘೋಷಿಸಬೇಕೆಂದು ಆಗ್ರಹಿಸಿ ಸುದೀರ್ಘ ದಶಕಗಳ ಕಾಲ ನಿರಂತರ ಹೋರಾಟ ನಡೆಸಿದ್ದ ಹಿರಿಯ ಹೋರಾಟಗಾರ ಹಾಗೂ ಕೆಂಭಾವಿ ತಾಲೂಕು ಹೋರಾಟ ಸಮಿತಿಯ ಅಧ್ಯಕ್ಷರಾದ ನಿಂಗನಗೌಡ ದೇಸಾಯಿ ಹದನೂರು (90) ಅವರು ಭಾನುವಾರ ನಿಧನರಾದರು.

ಅವರ ನಿಧನಕ್ಕೆ ಗಣ್ಯರು, ತಾಲೂಕು ಹೋರಾಟಗಾರರು ಹಾಗೂ ಅಪಾರ ಅಭಿಮಾನಿ ಬಳಗ ತೀವ್ರ ಕಂಬನಿ ಮಿಡಿದಿದೆ.

**ನಾಲ್ಕು ದಶಕಗಳ ಅಪೂರ್ವ ಹೋರಾಟದ ರುವಾರಿ**



ಕೆಂಭಾವಿ ಭಾಗದ ಸಮಗ್ರ ಅಭಿವೃದ್ಧಿ ಹಾಗೂ ವಿಶೇಷವಾಗಿ ತಾಲೂಕು ಕೇಂದ್ರದ ಸ್ಥಾನಮಾನಕ್ಕಾಗಿ ನಿಂಗನಗೌಡ ದೇಸಾಯಿ ಅವರು ನಡೆಸಿದ ಸಂಘಟಿತ ಹೋರಾಟಗಳು ಇತಿಹಾಸದ ಪುಟಗಳಲ್ಲಿ ಸ್ಮರಣೀಯವಾಗಿವೆ. ಹೋರಾಟ ಸಮಿತಿಯ ಮುಂಚೂಣಿಯಲ್ಲಿದ್ದುಕೊಂಡು ಅವರು ನೂರಾರು ಪ್ರತಿಭಟನೆಗಳು, ರಸ್ತೆ ತಡೆ, ಧರಣಿ ಹಾಗೂ ಸತ್ಯಾಗ್ರಹಗಳನ್ನು ಯಶಸ್ವಿಯಾಗಿ ಮುನ್ನಡೆಸಿದ್ದರು. ಆ ಮೂಲಕ ಈ ಭಾಗದ ಜನರ ಧ್ವನಿಯಾಗಿ ಸರಕಾರದ ಮೇಲೆ ನಿರಂತರವಾಗಿ ಸಾಕಷ್ಟು ಒತ್ತಡ ತಂದಿದ್ದರು. ಕೆಂಭಾವಿಗೆ ತಾಲ್ಲೂಕು ಸ್ಥಾನಮಾನ ದೊರೆತರೆ ಆಡಳಿತಾತ್ಮಕ ಸೇವೆಗಳು ಜನರಿಗೆ ಮತ್ತಷ್ಟು ಸುಲಭವಾಗಿ ಲಭ್ಯವಾಗಲಿದ್ದು, ಪ್ರದೇಶದ ಅಭಿವೃದ್ಧಿಗೆ ಹೊಸ ದಿಕ್ಕು ಸಿಗಲಿದೆ ಎಂಬ ನಂಬಿಕೆಯಿಂದ ಅವರು ಹೋರಾಟವನ್ನು ನಡೆಸುತ್ತಾ ಬಂದಿದ್ದರು. ತಮ್ಮ ಆರೋಗ್ಯ ಹಾಗೂ ವೈಯಕ್ತಿಕ ಜೀವನಕ್ಕಿಂತಲೂ ನಾಗರೀಕ ಹಿತಾಸಕ್ತಿಗೆ ಹೆಚ್ಚಿನ ಆದ್ಯತೆ ನೀಡಿ ಹೋರಾಟದಲ್ಲಿ ತೊಡಗಿಸಿಕೊಂಡಿದ್ದರು.

ಆದರೆ ಕೆಂಭಾವಿ ತಾಲ್ಲೂಕು ಎಂಬ ಕನಸಿಗಾಗಿ ಹೋರಾಡಿದ ನಿಂಗನಗೌಡ ದೇಸಾಯಿ ಅವರು ಇಹಲೋಕ ತ್ಯಜಿಸಿದ್ದು, ಅವರು ಆರಂಭಿಸಿದ ಹೋರಾಟ ಮುಂದುವರಿದು ಅವರ ಕನಸು ನನಸಾಗಬೇಕು ಎಂಬುದು ಜನರ ಆಶಯವಾಗಿದೆ.

**ಈಡೇರದ ಕನಸು ಅಭಿಮಾನಿಗಳಲ್ಲಿ ಕೊರಗು**

ಸತತ ಸರಿಸುಮಾರು ಮೂರ್ನಾಲ್ಕು ದಶಕಗಳ ಅವರು ಕೆಂಭಾವಿ ತಾಲೂಕು ಕೇಂದ್ರಕ್ಕಾಗಿ ಹೋರಾಡಿದರಾದರೂ, ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಅವರ ಜೀವಿತಾವಧಿಯಲ್ಲಿ ಈ ಕನಸು ನನಸಾಗಲಿಲ್ಲ ಎಂಬುದು ಅವರ ಅಭಿಮಾನಿ ಬಳಗ ಹಾಗೂ ಈ ಭಾಗದ ಸಾರ್ವಜನಿಕರನ್ನು ಆಳವಾಗಿ ಕಾಡುತ್ತಿರುವ ದೊಡ್ಡ ಕೊರಗಾಗಿದೆ. ಅವರ ನಿಧನದಿಂದಾಗಿ ಕೆಂಭಾವಿ ಭಾಗವು ಒಬ್ಬ ದಣಿವರಿಯದ ಹೋರಾಟದ ದಿಕ್ಸೂಚಿಯನ್ನು ಕಳೆದುಕೊಂಡದಂತಾಗಿದೆ.

ಮೃತ ನಿಂಗನಗೌಡ ದೇಸಾಯಿ ಅವರ ಅಂತ್ಯಕ್ರಿಯೆಯು ಸೋಮವಾರ (ಜೂನ್ 15) ಪಟ್ಟಣ ಸಮೀಪದ ಅವರ ಸ್ವಗ್ರಾಮವಾದ ಹದನೂರಿನಲ್ಲಿ ನೆರವೇರಿತು. ನಿಂಗನಗೌಡ ದೇಸಾಯಿ ಅವರ ಅಗಲಿಕೆಗೆ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಕೆಂಭಾವಿ ಮತ್ತು ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಆಳವಾದ ಸಂತಾಪ ಸೂಚಿಸಿದ್ದಾರೆ.

# ಪುನರ್ವೈಭವಕ್ಕೆ ಮರಳಿದ ಐತಿಹಾಸಿಕ ಶ್ರೀ ತಿಮ್ಮಣ್ಣ ಬಾವಿ



**ಶ್ರಮ–ಧರ್ಮ**
**● ಜಗದೀಶ್ ಕುಮಾರ್**
**ಗುರುಮಠಕಲ್**





ಗುರುಮಠಕಲ್ ಪಟ್ಟಣದ ಹೃದಯ ಭಾಗದಲ್ಲಿರುವ ಐತಿಹಾಸಿಕ ಶ್ರೀ ತಿಮ್ಮಣ್ಣ ದೇವಸ್ಥಾನದ ಎದುರಿನ ಬಾವಿ (ಪುಷ್ಕರಣಿ) ಇಂದು ಮತ್ತೆ ಜನರ ಗಮನ ಸೆಳೆಯುತ್ತಿದೆ. ಹಲವು ವರ್ಷಗಳಿಂದ ಕಸ, ಹೂಳು ಹಾಗೂ ನಿರ್ಲಕ್ಷ್ಯದ ಕಾರಣ ತನ್ನ ಅಸ್ತಿತ್ವ ಕಳೆದುಕೊಳ್ಳುವ ಹಂತಕ್ಕೆ ತಲುಪಿದ್ದ ಈ ಪುರಾತನ ಜಲಮೂಲ ಇದೀಗ ಯುವಕರ ಶ್ರಮದಾನದ ಫಲವಾಗಿ ಪುನರ್ವೈಭವದತ್ತ ಹೆಜ್ಜೆ ಇಟ್ಟಿದೆ.

ಸುಮಾರು ವರ್ಷಗಳ ಇತಿಹಾಸ ಹೊಂದಿರುವ ತಿಮ್ಮಣ್ಣನಾಯಕ್ ಪಾಳೆಗಾರರಿಂದ ನಿರ್ಮಾಣವಾದ ತಿಮ್ಮಣ್ಣ ಬಾವಿ ಸೇರಿದಂತೆ ಒಂದು ಕಾಲದಲ್ಲಿ ಊರಿನ ಪ್ರಮುಖ ನೀರಿನ ಮೂಲವಾಗಿದ್ದ ಹಲವು ಬಾವಿಗಳು ಆಧುನಿಕ ಜೀವನ ಶೈಲಿಯ ನಡುವೆ ತಮ್ಮ ಮಹತ್ವ ಕಳೆದುಕೊಳ್ಳುತ್ತಿವೆ. ಆದರೆ ಇತಿಹಾಸ, ಸಂಸ್ಕೃತಿ ಹಾಗೂ ಪರಿಸರದ ದೃಷ್ಟಿಯಿಂದ ಇಂತಹ ಪುರಾತನ ಜಲಮೂಲಗಳು ಅಮೂಲ್ಯ ಆಸ್ತಿಗಳಾಗಿವೆ. ಈ ಸತ್ಯವನ್ನು ಮನಗಂಡ ಯೂಥ್ ಐಕಾನ್ ರಾಜಾ ರಮೇಶ ಗೌಡ ಅವರ ಮಾರ್ಗದರ್ಶನದಲ್ಲಿ ವೆಂಕಟೇಶ ಮುದಿರಾಜ್, ವೆಂಕಟೇಶ್ ಹಾಗೂ ಯುವಕರ ತಂಡ ಕಳೆದ ಹಲವು ದಿನಗಳಿಂದ ನಿರಂತರವಾಗಿ ಶ್ರಮದಾನ ನಡೆಸಿ ಬಾವಿಯ ಸ್ವಚ್ಛತಾ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

ಈ ಕಾರ್ಯದ ವಿಶೇಷತೆ ಎಂದರೆ ಯಾವುದೇ ವೈಯಕ್ತಿಕ ಲಾಭ ಅಥವಾ ಪ್ರಚಾರದ ಉದ್ದೇಶವಿಲ್ಲದೆ ಯುವಕರು ತಮ್ಮ ಸಮಯ, ಶ್ರಮ ಮತ್ತು ಸಂಪನ್ಮೂಲಗಳನ್ನು ಬಳಸಿಕೊಂಡು ಐತಿಹಾಸಿಕ ಪರಂಪರೆಯ ಸಂರಕ್ಷಣೆಗೆ ಮುಂದಾಗಿರುವುದು. ಸಮಾಜಕ್ಕೆ ಇದು ಉತ್ತಮ ಸಂದೇಶವನ್ನು ನೀಡಿದೆ.

ಆದರೆ ಸ್ವಚ್ಛತಾ ಕಾರ್ಯವೇ ಅಂತಿಮ ಗುರಿಯಲ್ಲ. ಈಗ ಜಿಲ್ಲಾಡಳಿತ ಮತ್ತು ಸಂಬಂಧಪಟ್ಟ ಇಲಾಖೆಗಳು ಈ ಐತಿಹಾಸಿಕ ಬಾವಿಯ ಅಭಿವೃದ್ಧಿ ಹಾಗೂ ಸಂರಕ್ಷಣೆಗೆ ಮುಂದಾಗಬೇಕಾಗಿದೆ. ಬಾವಿಯ ಸುತ್ತ ಸುರಕ್ಷತಾ ತಡೆಗೋಡೆ ನಿರ್ಮಾಣ, ಮೆಟ್ಟಿಲುಗಳ ದುರಸ್ತಿ, ಸೌಂದರ್ಯೀಕರಣ, ವಿದ್ಯುತ್ ದೀಪಗಳ ಅಳವಡಿಕೆ ಹಾಗೂ ಪುರಾತನ ಶೈಲಿಯ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ.

ನಮ್ಮ ಹಿರಿಯರು ನಿರ್ಮಿಸಿ ಉಳಿಸಿಕೊಟ್ಟ ಇಂತಹ ಪರಂಪರೆಯ ಸ್ಮಾರಕಗಳನ್ನು ಕಾಪಾಡುವುದು ಕೇವಲ ಸರ್ಕಾರದ ಜವಾಬ್ದಾರಿಯಲ್ಲ; ಅದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಹೌದು. ಶ್ರೀ ತಿಮ್ಮಣ್ಣ ಬಾವಿಯ ಪುನರುಜ್ಜೀವನ ಕಾರ್ಯವು ಯುವಶಕ್ತಿಯ ಸಂಕಲ್ಪ ಮತ್ತು ಸಮಾಜದ ಒಗ್ಗಟ್ಟಿಗೆ ಉತ್ತಮ ಉದಾಹರಣೆಯಾಗಿದೆ. ಈ ಕಾರ್ಯಕ್ಕೆ ಜಿಲ್ಲಾಡಳಿತದ ಬೆಂಬಲ ದೊರೆತರೆ, ಬಾವಿ ತನ್ನ ಹಳೆಯ ವೈಭವವನ್ನು ಮರಳಿ ಪಡೆದು ಗುರುಮಠಕಲ್‌ನ ಐತಿಹಾಸಿಕ ಹೆಮ್ಮೆಯ ತಾಣವಾಗಿ ರೂಪುಗೊಳ್ಳುವುದು ನಿಶ್ಚಿತ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000, Telephone Number: 08483200215

PRGI NO. 120927
(RNINO:KARKAN/2011/48371)